ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜೂನ್ 4 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 49 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಇಂದು ಲೋಕ 'ತೀರ್ಪು'

ಎನ್‌ಡಿಎ–400+ ■ ಇಂಡಿಯಾ–295+ ವಿಶ್ವಾಸ





ನವದೆಹಲಿ, ಜೂ. 3–ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ಹೊಂದಿದ ಭಾರತದ 18ನೇ ಲೋಕಸಭೆ ಚುನಾವಣೆಯ ಫಲಿತಾಂಶ ನಾಳೆ (ಮಂಗಳವಾರ) ಪ್ರಕಟವಾಗಲಿದೆ.

ಈಗಾಗಲೇ 2 ಬಾರಿ ಅಧಿಕಾರ ಹಿಡಿದು 10 ವರ್ಷ ಕಾಲ ಆಳ್ವಿಕೆ ನಡೆಸಿರುವ ಎನ್‌ಡಿಎ ಈ ಬಾರಿಯೂ ನಿಚ್ಚಳ ಬಹುಮತದೊಂದಿಗೆ ಅಧಿಕಾರದಲ್ಲಿ ಮುಂದುವರಿಯಲಿದೆ ಎಂಬುದು ಮತದಾನೋತ್ತರ ಸಮೀಕ್ಷಾ ವರದಿಗಳಿಂದ ಬಹಿರಂಗವಾಗಿದೆ. ಬಹುತೇಕ ಎಲ್ಲಾ ಸಂಸ್ಥೆಗಳು ನಡೆಸಿದ ಮತದಾನೋತ್ತರ ಸಮೀಕ್ಷೆಗಳು ಬಿಜೆಪಿ ನೇತೃತ್ವದ ಎನ್‌ಡಿಎ 350ಕ್ಕೂ ಹೆಚ್ಚು ಸ್ಥಾನ ಗಳಿಸಿ ಅಧಿಕಾರ ಹಿಡಿಯಲಿದೆ ಎಂದು ಭವಿಷ್ಯ ನುಡಿದಿವೆ. ಪ್ರಧಾನಿ ಮೋದಿ ಆದಿಯಾಗಿ ಎನ್‌ಡಿಎ ಮೈತ್ರಿ ಕೂಟದ ಬಹುತೇಕ ನಾಯಕರೂ ಈ ಬಾರಿ 400ಕ್ಕೂ ಹೆಚ್ಚು ಸ್ಥಾನ ಗಳಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮತ್ತೊಂದೆಡೆ ಇಂಡಿಯಾ ಮೈತ್ರಿಕೂಟವು ಹಾಲಿ ಸಮೀಕ್ಷೆಗಳು ಏಕಪಕ್ಷೀಯವಾಗಿವೆ. ಜನರ ತೀರ್ಪು ಇಂಡಿಯಾ ಮೈತ್ರಿಕೂಟಕ್ಕೆ ಲಭಿಸುವುದು ಖಚಿತವಾಗಿದೆ. ಕಾದು ನೋಡಿ ಎಂದು ವಿಶ್ವಾಸ ವ್ಯಕ್ತಪಡಿಸಿದೆ. ಕೊನೇ ಹಂತದ ಚುನಾವಣೆ ಮುಗಿಯುತ್ತಿದ್ದಂತೆಯೇ ಇಂಡಿಯಾ ಮೈತ್ರಿ ಕೂಟದ ನಾಯಕರು ಸಭೆ ಸೇರಿ ತಮಗೆ ದಕ್ಕಬಹುದಾದ ಸ್ಥಾನಗಳು, ನಂತರದ ರಾಜಕೀಯ ಪ್ರಕ್ರಿಯೆ ಕುರಿತಾಗಿ ಸುದೀರ್ಘ ಚರ್ಚೆ ನಡೆಸಿದರು. ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಇಂಡಿಯಾ ಮೈತ್ರಿಕೂಟ 295 ಸ್ಥಾನ ಪಡೆಯಲಿದೆ. ಇದಿಷ್ಟೇ ● 9ನೇ ಪುಟಕ್ಕೆ

ರಾಜ್ಯದ 29 ಕೇಂದ್ರಗಳಲ್ಲಿ ಮತ ಎಣಿಕೆ ಕಾರ್ಯ

ಮಧ್ಯಾಹ್ನದ ವೇಳೆಗೆ ಅಭ್ಯರ್ಥಿಗಳ ಭವಿಷ್ಯ ಬಹಿರಂಗ



ಪ್ರಹ್ಲಾದ್ ಜೋಶಿ


ಜಗದೀಶ್‌ಶೆಟ್ಟರ್


ಸಿ.ಎನ್.ಮಂಜುನಾಥ್


ಡಿ.ಕೆ.ಸುರೇಶ್


ವಿ.ಸೋಮಣ್ಣ


ಬೊಮ್ಮಾಯಿ


ಶೋಭಾ ಕರಂದ್ಲಾಜೆ

ಬೆಂಗಳೂರು: ಮಂಗಳವಾರ ನಡೆಯಲಿರುವ ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಮತ ಎಣಿಕೆಗಾಗಿ ರಾಜ್ಯದ 29 ಎಣಿಕೆ ಕೇಂದ್ರಗಳಲ್ಲಿ 13,000ಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ರಾಜ್ಯದಲ್ಲಿ ಒಟ್ಟು 28 ಲೋಕಸಭಾ ಕ್ಷೇತ್ರಗಳಿವೆ. ದಕ್ಷಿಣ ಮತ್ತು ಕರಾವಳಿ ಜಿಲ್ಲೆಗಳ 14 ಸ್ಥಾನಗಳಿಗೆ ಮೊದಲ ಹಂತದ ಮತದಾನ ಏಪ್ರಿಲ್ 26ರಂದು ಮತ್ತು ಉತ್ತರ ಜಿಲ್ಲೆಗಳ ಇತರ 14 ಜಿಲ್ಲೆಗಳಲ್ಲಿ ಎರಡನೇ ಹಂತದ ಮತದಾನ ಮೇ 7ರಂದು ನಡೆದಿದೆ. ಪ್ರತಿ ಲೋಕಸಭಾ ಕ್ಷೇತ್ರದಲ್ಲಿ ತಲಾ ಒಂದು ಮತ ಎಣಿಕೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಆದರೆ, ತುಮಕೂರಿನಲ್ಲಿ ಎರಡು ಸ್ಥಳಗಳಲ್ಲಿ ಮತ ಎಣಿಕೆ ನಡೆಯಲಿದ್ದು, ಒಟ್ಟು ಎಣಿಕೆ ಕೇಂದ್ರಗಳ ಸಂಖ್ಯೆ 29 ಆಗಿದೆ.

ಈ ಕುರಿತು ಸುದ್ದಿಸಂಸ್ಥೆಗೆ ಮಾಹಿತಿ ನೀಡಿರುವ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ಕರ್ನಾಟಕದಲ್ಲಿ ಒಟ್ಟು 28 ಲೋಕಸಭಾ ಕ್ಷೇತ್ರಗಳಿವೆ ಮತ್ತು ರಾಜ್ಯದ 29 ಎಣಿಕೆ ಕೇಂದ್ರಗಳಲ್ಲಿ ಮತ ಎಣಿಕೆ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ● 6ನೇ ಪುಟಕ್ಕೆ

ರಾಜ್ಯದಲ್ಲಿ ಘಟಾನುಘಟಿಗಳು ಸೇರಿ 474 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ

ಬೆಂಗಳೂರು, ಜೂ.3(ಕೆಎಂಶಿ)– ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಮಾಜಿ ಮುಖ್ಯಮಂತ್ರಿಗಳಾದ ಎಚ್.ಡಿ.ಕುಮಾರಸ್ವಾಮಿ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ರಾಜವಂಶಸ್ಥ ಯದುವೀರ ಒಡೆಯರ್ ಸೇರಿದಂತೆ 474 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಾಳೆ (ಜೂನ್ 4) ತೀರ್ಮಾನವಾಗಲಿದೆ. ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ನಡೆದ ಮತದಾನದ ಎಣಿಕೆ ಕಾರ್ಯ ನಾಳೆ ಬೆಳಗ್ಗೆ 8 ಗಂಟೆಗೆ ಆರಂಭಗೊಂಡು ಮಧ್ಯಾಹ್ನದ ವೇಳೆಗೆ ಫಲಿತಾಂಶ ಹೊರಬೀಳಲಿದೆ. ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂರು ಲೋಕಸಭಾ ಕ್ಷೇತ್ರಗಳ ಮತ ಎಣಿಕೆ ನಡೆದರೆ ಉಳಿದಂತೆ ಆಯಾ ಕ್ಷೇತ್ರಗಳ ಜಿಲ್ಲಾ ಕೇಂದ್ರಗಳಲ್ಲಿ ಎಣಿಕಾ ಕಾರ್ಯ ಏಕಕಾಲಕ್ಕೆ ● 6ನೇ ಪುಟಕ್ಕೆ

ಲೋಕಸಭಾ ಚುನಾವಣೆಯಲ್ಲಿ 64.2 ಕೋಟಿ ಜನರು ಮತದಾನ

ಭಾರತ ವಿಶ್ವದಾಖಲೆ: ರಾಜೀವ್ ಕುಮಾರ್



ನವದೆಹಲಿ: ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ 64.2 ಕೋಟಿ ಜನರು ಮತದಾನ ಮಾಡುವುದರೊಂದಿಗೆ ಭಾರತ ವಿಶ್ವ ದಾಖಲೆ ಸೃಷ್ಟಿಸಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಿಳಿಸಿದ್ದಾರೆ. ಭಾರತದ ಚುನಾವಣಾ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕರೆದಿದ್ದ ಚುನಾವಣೋತ್ತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 31.2 ಕೋಟಿ ಮಹಿಳೆಯರು ಸೇರಿದಂತೆ ಈ ಬಾರಿ 64.2 ಕೋಟಿ ಮತದಾರರು ಮತದಾನದಲ್ಲಿ ಪಾಲ್ಗೊಂಡಿರುವುದಾಗಿ ಮಾಹಿತಿ ನೀಡಿದರು.

ಚುನಾವಣಾ ಆಯುಕ್ತರು ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿನ ಮಿಮ್ಸ್ ಕುರಿತು ಪ್ರತಿಕ್ರಿಯಿಸಿದ ಅವರು, ಚುನಾವಣಾ ಆಯುಕ್ತರು ಯಾವಾಗಲೂ ಇಲ್ಲಿಯೇ ಇರುತ್ತಾರೆ. ಎಲ್ಲಿಯೂ ಹೋಗಲ್ಲ ಎಂದರು. ವಿಶ್ವದ ಅತಿದೊಡ್ಡ ಚುನಾವಣಾ ಕಾರ್ಯದಲ್ಲಿ 68,000 ಮೇಲ್ವಿಚಾರಣಾ ತಂಡಗಳು ಮತ್ತು 1.5 ಕೋಟಿ ಚುನಾವಣಾ ಮತ್ತು ಭದ್ರತಾ ಸಿಬ್ಬಂದಿ ಭಾಗಿಯಾಗಿದ್ದರು.

2019ರಲ್ಲಿ 540 ಮರು ಮತದಾನ ನಡೆದಿದ್ದರೆ 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಕೇವಲ 39 ಮರುಮತದಾನಗಳು ನಡೆದಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನಾಲ್ಕು ದಶಕಗಳಲ್ಲೇ ಈ ಬಾರಿ ಒಟ್ಟಾರೆ ಶೇ. 58.58 ಮತ್ತು ಕಣಿವೆಯಲ್ಲಿ ಶೇ.51.05ರಷ್ಟು ಮತದಾನವಾಗಿದೆ ಎಂದು ಸಿಇಸಿ ಹೇಳಿದೆ.

2019ರಲ್ಲಿ 3,500 ಕೋಟಿ ರೂಪಾಯಿಗಳಿಗೆ ಹೋಲಿಸಿದರೆ, 2024ರ ಚುನಾವಣೆಯಲ್ಲಿ ನಗದು, ಉಚಿತ ಕೊಡುಗೆಗಳು, ಡ್ರಗ್ಸ್ ಮತ್ತು ಮದ್ಯ ಸೇರಿದಂತೆ ರೂ. 10,000 ಕೋಟಿ ಮೌಲ್ಯದಷ್ಟು ವಶಕ್ಕೆ ಪಡೆಯಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಪ್ರಮುಖ ಅಂಶಗಳು

- 2024ರ ಲೋಕಸಭೆ ಚುನಾವಣೆಯನ್ನು ನಡೆಸಲು ಸುಮಾರು ನಾಲ್ಕು ಲಕ್ಷ ವಾಹನಗಳು, 135 ವಿಶೇಷ ರೈಲುಗಳು ಮತ್ತು 1,692 ವಾಯುಯಾನ ಸೌಲಭ್ಯ ಗಳನ್ನು ಬಳಸಲಾಗಿದೆ.
- 2024ರ ಸಾರ್ವತ್ರಿಕ ಚುನಾವಣೆ ವೇಳೆಯಲ್ಲಿ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಕುರಿತು ದಾಖಲಾದ 495 ದೂರುಗಳಲ್ಲಿ ಶೇ. 90 ಕ್ಕಿಂತ ಹೆಚ್ಚು ಬಗೆಹರಿಸಲಾಗಿದೆ. ● 9ನೇ ಪುಟಕ್ಕೆ

ಮೈಸೂರು–ಕೊಡಗು, ಮಂಡ್ಯ, ಚಾ.ನಗರ, ಹಾಸನ ಲೋಕಸಭಾ ಕ್ಷೇತ್ರಗಳಲ್ಲಿ ಬೆಳಗ್ಗೆ 8ರಿಂದ ಮತ ಎಣಿಕೆ

ಮೈಸೂರು–ಕೊಡಗು




ಎನ್‌ಡಿಎನ ಯದುವೀರ್ V/s ಕಾಂಗ್ರೆಸ್‌ನ ಎಂ.ಲಕ್ಷ್ಮಣ

ಚಾಮರಾಜನಗರ



ಎನ್‌ಡಿಎನ ಬಾಲರಾಜ್ V/s ಕಾಂಗ್ರೆಸ್‌ನ ಸುನೀಲ್ ಬೋಸ್

ಮಂಡ್ಯ



ಎನ್‌ಡಿಎನ ಕುಮಾರಸ್ವಾಮಿ V/s ಕಾಂಗ್ರೆಸ್‌ನ ಸ್ಟಾರ್ ಚಂದ್ರು

ಹಾಸನ



ಎನ್‌ಡಿಎನ ಪ್ರಜ್ವಲ್ V/s ಕಾಂಗ್ರೆಸ್‌ನ ಶ್ರೇಯಸ್ ಪಟೇಲ್

ಮೈಸೂರು, ಮೇ 3 (ಆರ್‌ಕೆ)– ಏಪ್ರಿಲ್ 26ರಂದು ನಡೆದ ಲೋಕಸಭಾ ಸಾರ್ವತ್ರಿಕ ಚುನಾವಣೆ ಮತ ಎಣಿಕೆಯು ನಾಳೆ(ಜೂ.4) ನಡೆಯಲಿದ್ದು, ಮಧ್ಯಾಹ್ನದ ವೇಳೆಗೆ ಪೂರ್ಣ ಪ್ರಮಾಣದ ಫಲಿತಾಂಶ ಹೊರ ಬೀಳುವ ನಿರೀಕ್ಷೆ ಇದೆ.

ಮೈಸೂರು–ಕೊಡಗು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಲೋಕಸಭಾ ಕ್ಷೇತ್ರಗಳ ಮತ ಎಣಿಕೆಯು ಆಯಾಯ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿದ್ದು, ಜಿಲ್ಲಾಡಳಿತಗಳು ಸಂಪೂರ್ಣ ಸಜ್ಜಾಗಿವೆ. ಮೈಸೂರು–ಕೊಡಗು ಕ್ಷೇತ್ರದಲ್ಲಿ ಪ್ರಮುಖವಾಗಿ ಎನ್‌ಡಿಎ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಮಂಡ್ಯದಲ್ಲಿ ಎನ್‌ಡಿಎ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಕಾಂಗ್ರೆಸ್‌ನ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಚಾಮರಾಜನಗರದಲ್ಲಿ ಎನ್‌ಡಿಎ ಅಭ್ಯರ್ಥಿ ಎಸ್. ಬಾಲರಾಜು ಮತ್ತು ಕಾಂಗ್ರೆಸ್‌ನ ಸುನೀಲ್ ಬೋಸ್, ಹಾಸನದಲ್ಲಿ ಹಾಲಿ ಸಂಸದರೂ ಆದ ಎನ್‌ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಮತ್ತು ಕಾಂಗ್ರೆಸ್‌ನ ಶ್ರೇಯಸ್ ಪಟೇಲ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ ಎಂದು ಈಗಾಗಲೇ ಮತದಾನೋತ್ತರ ಸಮೀಕ್ಷೆಗಳು ತಿಳಿಸಿವೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯ ಮೈಸೂರಿನ ಪಡುವಾರಹಳ್ಳಿ ಬಳಿ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ, ಮಂಡ್ಯ ಕ್ಷೇತ್ರದ ಮತ ಎಣಿಕೆ ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ, ಚಾಮರಾಜನಗರ ಕ್ಷೇತ್ರದ ಮತ ಎಣಿಕೆ ಚಾಮರಾಜನಗರದ ನಂಜನಗೂಡು ರಸ್ತೆಯಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ, ಹಾಸನ ಕ್ಷೇತ್ರದ ಮತ ಎಣಿಕೆ ಹಾಸನದ ಡೈರಿ ವೃತ್ತದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಾಳೆ (ಜೂ. 4) ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದ್ದು, ಫಲಿತಾಂಶ ಬಹುತೇಕ ಮಧ್ಯಾಹ್ನದ ವೇಳೆಗೆ ಪ್ರಕಟವಾಗುವ ಸಾಧ್ಯತೆ ಇದೆ. ● 9ನೇ ಪುಟಕ್ಕೆ


ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮತ ಎಣಿಕೆ ವೀಕ್ಷಕ ಮೊಹಮ್ಮದ್ ಇಜಾಜ್, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರೊಂದಿಗೆ ಸೋಮವಾರ ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜು ಮತ ಎಣಿಕಾ ಕೇಂದ್ರದಲ್ಲಿ ಸಿದ್ಧತೆ ಪರಿಶೀಲಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರ ಚುನಾವಣೆ: ಶೇ.88 ಮತದಾನ

ಮೈಸೂರು, ಮಂಡ್ಯ, ಚಾ.ನಗರ, ಹಾಸನದಲ್ಲಿ ಸರದಿ ಸಾಲಿನಲ್ಲಿ ನಿಂತು ಹಕ್ಕು ಚಲಾಯಿಸಿದ ಶಿಕ್ಷಕರು


ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಬಿರುಸಿನ ಮತದಾನ ನಡೆಯಿತು. ಮೈಸೂರಿನ ಆದಿಚುಂಚನಗಿರಿ ರಸ್ತೆಯ ಶ್ರೀ ಕಾಗಿನೆಲೆ ಮಹಾ ಸಂಸ್ಥಾನದ ಕಾಲೇಜಿನಲ್ಲಿ ಶಿಕ್ಷಕ ಮತದಾರರು ಸರದಿ ಸಾಲಿನಲ್ಲಿ ನಿಂತು ಉತ್ಸಾಹದಿಂದ ಹಕ್ಕು ಚಲಾಯಿಸಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಮತಗಟ್ಟೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರು, ಜೂ.3(ಬಿಎಲ್‌ಯು)– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಸೋಮವಾರ ಸುಸೂತ್ರವಾಗಿ ಮತದಾನ ನಡೆಯಿತು.

ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದ ಪ್ರತಿನಿಧಿ ಆಯ್ಕೆ ಪ್ರಕ್ರಿಯೆಯಲ್ಲಿ ಶಿಕ್ಷಕ ಮತದಾರರು ಅತ್ಯುತ್ಸಾಹದಿಂದ ಪಾಲ್ಗೊಂಡರು. ಬೆಳಗ್ಗೆ 8ರಿಂದ ಸಂಜೆ 4ರವರೆಗೆ ಬಿರುಸಿನ ಮತದಾನ ನಡೆಯಿತು. ಮೈಸೂರು ಸೇರಿದಂತೆ ಮಂಡ್ಯ, ಹಾಸನ, ಚಾಮರಾಜನಗರ ಒಳಗೊಂಡ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಶೇ.88.07ರಷ್ಟು ಮತದಾನವಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಜಿಲ್ಲೆಗಳ ಒಳಗೊಂಡ ದಕ್ಷಿಣ ಶಿಕ್ಷಕರ ಕ್ಷೇತ್ರದ ಒಟ್ಟು 21,549 ಮತದಾರರಲ್ಲಿ 10,894 ಪುರುಷ ಹಾಗೂ 8085 ಮಹಿಳೆಯರು ಸೇರಿ ಒಟ್ಟು 18,979 ಮತದಾರರು ತಮ್ಮ ಹಕ್ಕು ಚಲಾಯಿಸಿದರು. ಮೈಸೂರು ಜಿಲ್ಲೆಯಲ್ಲಿ 8,776 ಮತದಾರರು ಮತದಾನ ಮಾಡಿದ್ದು, ಶೇ.84.07ರಷ್ಟು ಮತದಾನವಾಗಿದೆ. ಮಂಡ್ಯದಲ್ಲಿ 4949 ಮತದಾರರು ತಮ್ಮ ಹಕ್ಕು ಚಲಾವಣೆ ಮಾಡಿದ್ದು, ಶೇ.91.60 ರಷ್ಟು ಮತದಾನವಾಗಿದೆ. ಚಾಮರಾಜನಗರದಲ್ಲಿ 2012 ಶಿಕ್ಷಕರು ಮತದಾನ ಮಾಡಿದ್ದು, ಶೇ.92.25ರಷ್ಟು ಮತದಾನವಾಗಿದೆ. ಇನ್ನು ಹಾಸನ ● 9ನೇ ಪುಟಕ್ಕೆ

ಮುಖಾಮುಖಿಯಾದರೂ ಮರಿತಿಬ್ಬೇಗೌಡ, ವಿವೇಕಾನಂದ ಮಾತಾಡಲಿಲ್ಲ!

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಹಾಗೂ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ವಿವೇಕಾನಂದ ವಿದ್ಯಾವರ್ಧಕ ಕಾನೂನು ಕಾಲೇಜು ಮತಗಟ್ಟೆಯಲ್ಲಿ ಮುಖಾಮುಖಿಯಾದರು.

ಆದರೆ, ಇಬ್ಬರು ತಮ್ಮ ತಮ್ಮ ಪಕ್ಷದ ಕಾರ್ಯಕರ್ತರನ್ನು ಭೇಟಿ ಮಾಡಿ, ಶೇಕಡವಾರು ಮತದಾನದ ಬಗ್ಗೆ ಮಾಹಿತಿ ಪಡೆದರಾದರೂ ಪ್ರತಿಸ್ಪರ್ಧಿಗಳು ಪರಸ್ಪರ ಮಾತನಾಡಲಿಲ್ಲ.

ಈ ವೇಳೆ ಮಾತನಾಡಿದ ವಿವೇಕಾನಂದ, ನನಗೆ ವಿಜಯ ಮಾಲೆ ಸಿಗಲೆಂದು ನಾಡದೇವತೆ ತಾಯಿ ಚಾಮುಂಡೇಶ್ವರಿ ಬಳಿ ಬೇಡಿ ಬಂದಿದ್ದೇನೆ. ದೇವಿಯ ಕೃಪೆಯಿಂದ ನಾನು ಗೆಲುವು ಸಾಧಿಸುವ ವಿಶ್ವಾಸವಿದೆ ಎಂದರು. ಮರಿತಿಬ್ಬೇಗೌಡರು ನಾಲ್ಕು ಬಾರಿ ಆಯ್ಕೆಯಾಗಿದ್ದಾರೆ. ಆದರೆ 24 ವರ್ಷ ಶಿಕ್ಷಣ ಕ್ಷೇತ್ರ ಹಾಗೂ ಶಿಕ್ಷಕರಿಗೆ ಏನೂ ಮಾಡಿಲ್ಲ. ಆದ ಕಾರಣ ಈ ಒಂದು ಬಾರಿ ನನಗೆ ಅವಕಾಶ ನೀಡಿ. ● 9ನೇ ಪುಟಕ್ಕೆ

ಜೂ.6 ಮತ ಎಣಿಕೆ: ಯಾರ ಕೊರಳಿಗೋ ವಿಜಯ ಮಾಲೆ

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತಪೆಟ್ಟಿಗೆಗಳನ್ನು ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ವಿಜ್ಞಾನ ಕಾಲೇಜಿನ ಸ್ಟ್ರಾಂಗ್ ರೂಂನಲ್ಲಿಡಲಾಗಿದ್ದು, ಜೂನ್ 6 ರಂದು ಬೆಳಿಗ್ಗೆ 8 ಗಂಟೆಗೆ ಸ್ಟ್ರಾಂಗ್ ರೂಂ ತೆರೆದು, ಎಣಿಕೆ ಆರಂಭಿಸಲಾಗುತ್ತದೆ.

ಇದು ಸಾರ್ವತ್ರಿಕ ಚುನಾವಣೆಗಿಂತ ಭಿನ್ನವಾಗಿದ್ದು, ಮತದಾರ ಅಭ್ಯರ್ಥಿಗೆ ಪ್ರಾಶಸ್ತ್ಯದ ಮತ ನೀಡಿದ್ದಾನೆ. ಮತಪತ್ರದಲ್ಲಿ ಸಂಖ್ಯೆ ಬರೆದು ಎಲ್ಲಾ ಅಭ್ಯರ್ಥಿಗಳಿಗೂ ಪ್ರಾಶಸ್ತ್ಯದ ಮತ ನೀಡಲು ಅವಕಾಶವಿರುವುದರಿಂದ ಮತ ಎಣಿಕೆ ವಿಳಂಬವಾಗಲಿದೆ. ಮತ ಎಣಿಕೆ ವೇಳೆ ಮೊದಲ ಪ್ರಾಶಸ್ತ್ಯದ ಮತಗಳನ್ನು ಎಣಿಕೆ ಮಾಡಲಾಗುವುದು. ಅಪಮೌಲ್ಯ ಮತಗಳನ್ನು ಹೊರತುಪಡಿಸಿ ಒಟ್ಟು ಮತದಾನದ ಶೇ.50ಕ್ಕಿಂತ ಹೆಚ್ಚು ಮತಗಳನ್ನು ಮೊದಲ ಪ್ರಾಶಸ್ತ್ಯದ ಎಣಿಕೆ ಹಂತದಲ್ಲೇ ಪಡೆದರೆ ಆ ಅಭ್ಯರ್ಥಿಯ ಗೆಲುವನ್ನು ಘೋಷಿಸಲಾಗುತ್ತದೆ.



ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಮೈಸೂರಿನ ಮತಗಟ್ಟೆ ಬಳಿ ಬಿಜೆಪಿ, ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಮತಯಾಚಿಸಿದರು.(ಎಡಚಿತ್ರ), ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಕೂಡ ತಮ್ಮನ್ನು ಬೆಂಬಲಿಸುವಂತೆ ಶಿಕ್ಷಕ ಮತದಾರರನ್ನು ಕೋರಿದರು.

ಮೈಸೂರು ಮಿತ್ರ ಮಂಗಳವಾರ 4 ಜೂನ್ 2024

ಯುವ ಪೀಳಿಗೆಯಲ್ಲಿ ಪರಿಸರ ಮಾಲಿನ್ಯದ ಜಾಗೃತಿ ಅವಶ್ಯಕ

ಕೇಂದ್ರ ರೇಷ್ಮೆ ಸಂಶೋಧನೆ-ತರಬೇತಿ ಸಂಸ್ಥೆಯ ನಿರ್ದೇಶಕ ಡಾ.ಎಸ್.ಗಾಂಧಿ ದಾಸ್ ಕಿವಿಮಾತು



ವಿಶ್ವ ಪರಿಸರ ದಿನದ ಅಂಗವಾಗಿ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಸಿಬ್ಬಂದಿ ಮಕ್ಕಳಿಗಾಗಿ ಪೂರ್ವ ಸ್ಥಿತಿಗೆ ಮತ್ತೆ ಭೂಮಿಯನ್ನು ತರುವುದು ಶೀರ್ಷಿಕೆಯಡಿ ವರ್ಣಲೇಪನ ಮತ್ತು ಚಿತ್ರಕಲೆ ಬಿಡಿಸುವ ಸ್ಪರ್ಧೆ ನಡೆಯಿತು.

ಮೈಸೂರು, ಜೂ. 3–ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ವಿಶ್ವ ಪರಿಸರ ದಿನದ ಅಂಗವಾಗಿ ಸಂಸ್ಥೆ ಸಿಬ್ಬಂದಿಯ ಮಕ್ಕಳಿಗಾಗಿ ಪೂರ್ವ ಸ್ಥಿತಿಗೆ ಮತ್ತೆ ಭೂಮಿಯನ್ನು ತರುವುದು (ರಿಸ್ಟೋರ್ ಅವರ್ ಅರ್ಥ್) ಶೀರ್ಷಿಕೆಯಡಿ ವರ್ಣಲೇಪನ ಮತ್ತು ಚಿತ್ರಕಲೆ ಬಿಡಿಸುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿವಿಧ ವಯಸ್ಸಿನ ಗುಂಪುಗಳ ಮಕ್ಕಳಿಗೆ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ನಿರ್ದೇಶಕ ಡಾ.ಎಸ್.ಗಾಂಧಿ ದಾಸ್ ಚಾಲನೆ ನೀಡಿ, ಮಾತನಾಡುತ್ತ, ವಿದ್ಯಾರ್ಥಿಗಳಿಗೆ ಪ್ರಸ್ತುತ ದಿನಗಳಲ್ಲಿ ಪರಿಸರದ ಮಹತ್ವವನ್ನು ವಿವರಿಸಿದರು. ಮಾಲಿನ್ಯದಿಂದ ಮನುಕುಲದ ಮೇಲಾಗುವ ದುಷ್ಪರಿಣಾಮಗಳನ್ನು ಕುರಿತು ತಿಳಿಸಿದರು. ಇಂದಿನ ಯುವ ಪೀಳಿಗೆಯವರಾದ ನೀವು ಮತ್ತು ನಾವು ಪರಿಸರವನ್ನು ರಕ್ಷಿಸುವುದು ಮತ್ತು ಉಳಿಸುವುದು ಅತ್ಯಂತ ಅವಶ್ಯಕವಾಗಿದೆ. ಪರಿಸರ ಮಾಲಿನ್ಯ ತಡೆಗಟ್ಟುವ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಿದರು. ಅದರ ಅನಿವಾರ್ಯತೆ ಬಗ್ಗೆ ತಿಳುವಳಿಕೆ ನೀಡಿದರು.

ಹಿರಿಯ ವಿಜ್ಞಾನಿ ಡಾ.ಕೆ.ಬಿ.ಚಂದ್ರಶೇಖರ್ ಮಾತನಾಡಿ, ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಘನ ತ್ಯಾಜ್ಯ ನಿರ್ವಹಣೆ ಕುರಿತು, ಕಡಿಮೆ ಬಳಕೆ, ಪುನರ್ ಬಳಕೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು. ಮುಂದುವರೆದು, ಮಕ್ಕಳು ತಮ್ಮ ಹೆಸರಲ್ಲಿ ಗಿಡ ನೆಟ್ಟು ಅದನ್ನು ಹಾರೈಕೆ ಮಾಡುವಂತೆ ಕೋರಿದರು. ಗಿಡಗಳ ವ್ಯವಸ್ಥೆಯನ್ನು ಸಂಸ್ಥೆಯು ಮಾಡುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಒಂದೊಂದು ಗಿಡ ನೆಟ್ಟು ರಕ್ಷಿಸುವಂತೆ ಸಲಹೆ ನೀಡಿದರು.

ಡಾ.ಚಂದ್ರಕಾಂತ್, ಡಾ.ಗಾಯತ್ರಿ, ಟಿ, ಡಾ.ರಂಜಿನಿ, ಡಾ.ಭುವನೇಶ್ವರಿ, ಡಾ.ಮಲ್ಲಿಕಾರ್ಜುನ ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ಸುಮಾರು 60ಕ್ಕೂ ಹೆಚ್ಚು ವಿದ್ಯಾರ್ಥಿಗಳು, ವಿಜ್ಞಾನಿಗಳು, ಅಧಿಕಾರಿಗಳು, ಭಾಗವಹಿಸಿದ್ದರು.

ನಿವೃತ್ತ ಪ್ರಾಂಶುಪಾಲರಿಗೆ ಬೀಳ್ಕೊಡುಗೆ



ಮೈಸೂರು,ಜೂ. 3–ನಿವೃತ್ತಿ ಹೊಂದಿದ ಜೆ.ಎಸ್.ಎಸ್. ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ನಟರಾಜು ಅವರಿಗೆ ಇತ್ತೀಚೆಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು.

25ಕ್ಕೂ ಹೆಚ್ಚು ವರ್ಷ ಉಪನ್ಯಾಸಕರಾಗಿ, ವಿಭಾಗದ ಮುಖ್ಯಸ್ಥರಾಗಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ನಂತರ ಕಾಲೇಜಿಗೆ ಹೊಸಪ್ರಾಂಶುಪಾಲರಾಗಿ ಪಿ.ಜಿ.ವಿಭಾಗದ ಮುಖ್ಯಸ್ಥೆ ಡಾ.ಎನ್. ವಾಣಿಶ್ರೀ ಅವರನ್ನು ನೇಮಕ ಮಾಡಲಾಗಿದೆ. ಜೆಎಸ್‌ಎಸ್ ಮಹಾವಿದ್ಯಾ ಪೀಠದ ಜಿ.ಜಿ.ಮೂಗೇಶ್, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಕೆ.ಎಸ್.ಸುರೇಶ್, ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಕುಟುಂಬದವರು ಇದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ 140ನೇ ಜಯಂತಿ ಆಚರಣೆ



ಮೈಸೂರಿನ ಬೆಳಕು ವಾತ್ಸಲ್ಯಧಾಮದಲ್ಲಿ ಎಸ್.ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ 140ನೇ ಜಯಂತಿಯನ್ನು ವೃದ್ಧರಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಜೆಡಿಎಸ್ ನಗರ ಕಾರ್ಯದರ್ಶಿ ಎಸ್.ಪ್ರಕಾಶ್ ಪ್ರಿಯ ದರ್ಶನ್, ಬಿಜೆಪಿ ಮುಖಂಡ ರಾಜೇಶ್ ಜಾದವ್, ಹೇಮಂತ್, ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಮಹದೇವ್, ಸುಬ್ರಮಣಿ, ಮಹದೇವ್, ಮಹೇಶ್, ಹರ್ಷಿತ್ ಇನ್ನಿತರರು ಹಾಜರಿದ್ದರು.

ಎಂ.ಡಿ.ಸೋಮಣ್ಣರಿಗೆ ಚಾಣಕ್ಯ ಸೇವಾರತ್ನ ಪ್ರಶಸ್ತಿ



ಮೈಸೂರು, ಜೂ.3 –ಮೈಸೂರಿನ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ 18ನೇ ವಾರ್ಷಿಕೋತ್ಸವದ ಅಂಗವಾಗಿ ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಾಲಯಗಳ ನೌಕರ ಸಂಘದ ಉಪಾಧ್ಯಕ್ಷ ಹಾಗೂ ದೇವಸ್ಥಾನದ ಸೇವಾ ಸಿಬ್ಬಂದಿ ಎಂ.ಡಿ. ಸೋಮಶೇಖರ್ ಅವರಿಗೆ ಧಾರ್ಮಿಕ ಕ್ಷೇತ್ರದಿಂದ ಚಾಣಕ್ಯ ಸೇವಾರತ್ನ ಪ್ರಶಸ್ತಿ ಯನ್ನು ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಹಾಗೂ ಇನ್ನಿತರ ಪದಾಧಿ ಕಾರಿಗಳು ನೀಡಿದರು. ಈ ವೇಳೆ ಎಂ.ಡಿ. ಸೋಮಣ್ಣ ಅವರ ಪತ್ನಿ ಎನ್.ಎಸ್. ಮಂಜುಳಾ, ಟ್ರಸ್ಟ್ ಪದಾಧಿಕಾರಿಗಳಾದ ಜಿ.ರಾಘವೇಂದ್ರ, ಭೈರತಿ ಲಿಂಗರಾಜು, ಹರೀಶ್ ನಾಯ್ಡು, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷರಾದ ರೇಖಾ ಶ್ರೀನಿವಾಸ್, ಅಶ್ವಿನಿ, ದುರ್ಗಾಪ್ರಸಾದ್, ಎಸ್.ಎನ್. ರಾಜೇಶ್, ರಾಕೇಶ್, ಹಾಗೂ ಇನ್ನಿತರ ಪದಾಧಿಕಾರಿಗಳು ಹಾಜರಿದ್ದರು.

ಪೈ. ಸ್ಟಾರ್ ವೆಂಕಟೇಶ್‌ಗೆ ಹುಟ್ಟುಹಬ್ಬದ ಶುಭಾಶಯ



ಮೈಸೂರು ಜಿಲ್ಲಾ ಕುಸ್ತಿ ಸಂಘದ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ಸ್ಟಾರ್ ವೆಂಕಟೇಶ್ (ಹಿನಕಲ್) ಅವರ 60ನೇ ಹುಟ್ಟುಹಬ್ಬವನ್ನು ಸಂಘದ ಕಚೇರಿಯಲ್ಲಿ ಆಚರಿಸಲಾಯಿತು. ಚಿತ್ರದಲ್ಲಿ ಅಧ್ಯಕ್ಷ ಪೈ. ಚಂದ್ರಶೇಖರ್, ಖಜಾಂಚಿ ಪೈ. ರಾಜೇಶ್, ಪೈ. ರಮೇಶ್ ದ್ರೋಣ, ಪೈ. ಬಸವರಾಜು, ಪೈ. ತಬ್ರೇಜ್ ಪಾಷ, ಪೈ. ಗಿರೀಶ್ ನಕ್ಷತ್ರ ಪೈ. ಗಂಗಣ್ಣ, ಚಂದ್ರೇಗೌಡ ಇದ್ದಾರೆ.


ಟಿ.ಕೆ.ನಾಗಪ್ಪ ನಿಧನ



ಮೈಸೂರು, ಜೂ.3– ಮೈಸೂರಿನ ಸಿದ್ಧಾರ್ಥನಗರ ನೀತಿಮಾರ್ಗದ ನಿವಾಸಿ ಟಿ.ಕೆ.ನಾಗಪ್ಪ ಅವರು ಸೋಮವಾರ ಸಂಜೆ ನಿಧನರಾದರು. ಇವರು ಬಳ್ಳಾರಿಯ ಕಿಷ್ಕಿಂದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಟಿ.ಎನ್.ನಾಗಭೂಷಣ್ ಸೇರಿದಂತೆ ಏಳು ಮಂದಿ ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಮೆರಿಕಾದಲ್ಲಿರುವ ಕೊನೆಯ ಪುತ್ರ ಆಗಮಿಸಿದ ನಂತರ ಮೇ 5ರಂದು ಬೆಳಗ್ಗೆ 10ಕ್ಕೆ ಸ್ವಗ್ರಾಮ ನಂಜನಗೂಡು ತಾಲೂಕಿನ ತಗಡೂರಿನ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಪ್ರಕ್ರಿಯೆ

ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್–ಮಾಜಿ ಸಿಎಂ ಕುಮಾರಸ್ವಾಮಿ ಮುಖಾಮುಖಿಯಾದರೂ ಮುಖ ನೋಡಲಿಲ್ಲ!



ಬೆಂಗಳೂರು, ಜೂ.3(ಬಿಎಲ್‌ಯು)–ಕರ್ನಾಟಕದ ರಾಜಕಾರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸದ್ಯ ಬದ್ಧ ವೈರಿಗಳಾಗಿದ್ದಾರೆ. ಪ್ರತಿದಿನ ವಾಕ್ಸಮರ ನಡೆಸುವ ಈ ನಾಯಕರು ಇಂದು ವಿಧಾನಸೌಧದಲ್ಲಿ ಮುಖಾಮುಖಿಯಾದರೂ ಮುಖ ನೋಡಲಿಲ್ಲ, ಮಾತಾಡಲಿಲ್ಲ.

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಪ್ರಕ್ರಿಯೆಯಲ್ಲಿ ತಮ್ಮ ತಮ್ಮ ಅಭ್ಯರ್ಥಿಗಳನ್ನು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಈಗಾಗಲೇ ಪ್ರಕಟಿಸಿವೆ.

ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಇಂದು ತಮ್ಮ ಪುತ್ರ ಡಾ. ಯತೀಂದ್ರ ಹಾಗೂ ಇತರೆ ಅಭ್ಯರ್ಥಿಗಳ ಜೊತೆ ನಾಮಪತ್ರ ಸಲ್ಲಿಸಲು ವಿಧಾನಸಭೆಯ ಚುನಾವಣಾಧಿಕಾರಿ ಕೊಠಡಿಗೆ ಆಗಮಿಸಿದರು.

ಆ ವೇಳೆಗಾಗಲೇ ಹೆಚ್.ಡಿ.ಕುಮಾರಸ್ವಾಮಿ, ತಮ್ಮ ಅಭ್ಯರ್ಥಿ ಜವರಾಯಿಗೌಡರ ನಾಮಪತ್ರ ಸಲ್ಲಿಸಲು ಚುನಾವಣಾಧಿಕಾರಿ ಕಚೇರಿ ಒಳಗಿದ್ದರು. ಹಾಗಾಗಿ ಕುಮಾರಸ್ವಾಮಿ ಮತ್ತು ಜೆಡಿಎಸ್ ನಾಯಕರು ಹೊರಗೆ ಬರುವ ತನಕ ಸಿದ್ದರಾಮಯ್ಯ ಕೆಲ ಕ್ಷಣ ಹೊರಗೆ ಕಾದಿದ್ದರು. ಬ್ಯಾರಿಕೇಡ್ ಹೊರಗೆ ನಿಂತಿದ್ದ ಸಿದ್ದರಾಮಯ್ಯಗೆ ಹೋಗಿ–ಬರುವ ಕೆಲವು ಶಾಸಕರು ನಮಸ್ಕರಿಸಿದರು. ಸಿದ್ದರಾಮಯ್ಯ ಕೂಡ ಪ್ರತಿ ನಮಸ್ಕಾರ ಮಾಡಿದರು. ಈ ವೇಳೆ ಚುನಾವಣಾಧಿಕಾರಿ ಕೊಠಡಿಯಿಂದ ಹೊರಗೆ ಬಂದು ತಮಗೆ ಎದುರಾದ ಹೆಚ್.ಡಿ.ಕುಮಾರಸ್ವಾಮಿಗೂ ಸಿದ್ದರಾಮಯ್ಯ ಕೈ ಸಂಜ್ಞೆ ಮಾಡಿದರು. ಆದರೆ ಕುಮಾರಸ್ವಾಮಿ ಮಾತ್ರ ಸಿದ್ದರಾಮಯ್ಯ ಅವರನ್ನು ನೋಡಿಯೂ ನೋಡದಂತೆ ಮುನ್ನಡೆದರು. ಆದರೆ ಸಿಎಂ ಪಕ್ಕದಲ್ಲೇ ನಿಂತಿದ್ದ ಸಚಿವ ಹೆಚ್.ಸಿ.ಮಹದೇವಪ್ಪ ಮಾತ್ರ ಕುಮಾರಸ್ವಾಮಿ ಅವರಿಗೆ ವಿಶ್ ಮಾಡಿ ಮಾತನಾಡಿಸಿದರು. ಕುಮಾರಸ್ವಾಮಿ ಹಿಂಬಾಲಿಸಿದ ಶಾಸಕರಾದ ಜಿ.ಟಿ.ದೇವೇಗೌಡ, ಶರವಣ, ಜಿ.ಡಿ. ಹರೀಶ್‌ಗೌಡ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಗುತ್ತಾ, ಮಾತನಾಡಿದರು.

ಇದೇ ವೇಳೆ ಕುಮಾರಸ್ವಾಮಿ ಹಾಗೂ ಡಿ.ಕೆ.ಶಿವಕುಮಾರ್ ಕೂಡ ಮುಖಾಮುಖಿಯಾದರು. ಡಿ.ಕೆ. ಶಿವಕುಮಾರ್ ನೋಡುತ್ತಿದ್ದರೂ ಅತ್ತ ತಿರುಗಿ ನೋಡದ ಕುಮಾರಸ್ವಾಮಿ ತನ್ನ ಪಾಡಿಗೆ ತಾನು ಕಾಂಗ್ರೆಸ್ ಅಭ್ಯರ್ಥಿ ಬಿಲ್ಕಿಸ್ ಬಾನು ಅವರೊಂದಿಗೆ ಮಾತನಾಡಿ, ಮುಂದೆ ಸಾಗಿದರು.

ಈ ಹಿಂದೆ ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಹೀಗೆಯೇ ಒಂದೆಡೆ ಸೇರುತ್ತಿದ್ದರು. ಹೊರಗೆ ಏನೇ ವಿರೋಧ, ಭಿನ್ನಾಭಿಪ್ರಾಯ, ದ್ವೇಷ ಇದ್ದರೂ ಸೌಜನ್ಯಕ್ಕಾದರೂ ಒಬ್ಬರಿಗೊಬ್ಬರು ಹಸ್ತಲಾಘವ ಮಾಡಿ, ಮಾತನಾಡುತ್ತಿದ್ದರು. ಆದರೆ ಇಂದು ಮುಖಾಮುಖಿಯಾದರೂ ಒಬ್ಬರಿಗೊಬ್ಬರು ಮುಖ ನೋಡದಷ್ಟು ರಾಜಕೀಯ ವೈರತ್ವ ಬೆಳೆಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಆರೋಗ್ಯಕರ ರಾಜಕಾರಣ ಮರೆಯಾಗುತ್ತಿದೆಯೇ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ದ್ವೇಷದ ರಾಜಕಾರಣ ಇನ್ನು ಯಾವ ಹಂತ ತಲುಪುವುದೋ, ಇದು ಸರ್ಕಾರ ಹಾಗೂ ಆಡಳಿತದ ಮೇಲೆ ಯಾವ ಪರಿಣಾಮ ಬೀರುವುದೋ ಕಾದು ನೋಡಬೇಕಿದೆ.

ವಿದ್ಯೆಗಿಂತ ಮಿಗಿಲಾದ ಸಂಪತ್ತು ಬೇರೊಂದಿಲ್ಲ

ಆಗಮ ಪ್ರವೀಣ ವಿದ್ವಾನ್ ಸುರೇಶ್ ಅಭಿಮತ



ಮಾತೆ ಕಮಲಮ್ಮ ಹಾಗೂ ವನಿತಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಶಾಲಾ–ಕಾಲೇಜು ಮಕ್ಕಳಿಗೆ ಸಮವಸ್ತ್ರ, ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಮೈಸೂರು, ಜೂ.3– ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಮಾತೆ ಕಮಲಮ್ಮ ಹಾಗೂ ವನಿತಾ ಸ್ಮರಣಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಶಾಲಾ–ಕಾಲೇಜು ಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ಶ್ರೀ ಶಂಕರ ವೇದ ವಿದ್ಯಾ ಪ್ರತಿಷ್ಠಾನದ ಅಧ್ಯಕ್ಷರು, ಆಗಮ ಪ್ರವೀಣರೂ ಆದ ವಿದ್ವಾನ್ ಸುರೇಶ್, ಮಕ್ಕಳಿಗೆ ಸಮವಸ್ತ್ರ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಿ, ಮಾತನಾಡಿ, ವಿದ್ಯೆಗಿಂತ ಮಿಗಿಲಾದ ಸಂಪತ್ತು ಬೇರೊಂದಿಲ್ಲ. ಅದು ಮನುಷ್ಯನಿಗೆ ವಿವೇಕವನ್ನೂ, ಜ್ಞಾನವನ್ನೂ ಹೆಚ್ಚಿಸುತ್ತದೆ. ವಿದ್ಯೆ ಒಂದಿದ್ದರೆ ತಾಯಿ, ತಂದೆ, ಬಂಧು, ಬಳಗ ಎಲ್ಲರನ್ನೂ ಗೌರವದಿಂದ ಕಾಣಲು ವಿನಯ ಮಾರ್ಗ ವಾಗುತ್ತದೆ. ನಮ್ಮಲ್ಲಿರುವ ಗುಪ್ತವಾದ ಧನವೇ ವಿದ್ಯೆ. ಅದು ಎಲ್ಲಾ ಭೋಗ ಭಾಗ್ಯ ಸಿಗಲು ಕಾರಣಕರ್ತ. ಆದ್ದರಿಂದ ಇಂದಿನ ವಿದ್ಯಾರ್ಥಿಗಳು ವಿದ್ಯೆಯನ್ನು ಶ್ರಮವಹಿಸಿ, ಸಮರ್ಪಕವಾಗಿ ಕಲಿಯಬೇಕು ಎಂದು ತಿಳಿಸಿದರು.

ಇಂದು ಹಣ, ಆಸ್ತಿ, ಅಂತಸ್ತು ಇವುಗಳನ್ನು ಸುಲಭವಾಗಿ ಗಳಿಸಬಹುದು. ಆದರೆ ವಿದ್ಯೆ ಅಷ್ಟು ಸುಲಭವಾಗಿ ದಕ್ಕದು ಎಂದರು. ದಂತ ತಜ್ಞ ಡಾ.ನಾಗರಾಜು ಮಾತನಾಡಿ, ವಿದ್ಯಾರ್ಥಿಯು ಶಾಲಾ ಹಂತದಿಂದ ಕಲಿಕೆ ಆರಂಭಿಸಿ, ಉನ್ನತ ಶಿಕ್ಷಣದವರೆಗೆ ಹಂತಹಂತವಾಗಿ ಜ್ಞಾನ ಭಂಡಾರವನ್ನು ಸಂಪಾದಿಸುತ್ತಾನೆ. ಇಂದಿನ ಮಕ್ಕಳು ಸಾಧನೆ ಮಾಡಬೇಕಾ ದರೆ ಪರಿಶ್ರಮ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ ಎಂದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ರಾಜೇಂದ್ರಪ್ರಸಾದ್ ಹೊನ್ನಲಗೆರೆ, ಡಾ.ಸ್ಮಿತಾ ಉಪಸ್ಥಿತರಿದ್ದರು.

ಹಾಸ್ಟೆಲ್ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.3–ಜಯಪುರ ಮತ್ತು ಎಸ್.ಕಲ್ಲಹಳ್ಳಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳಿಗೆ 2024–25ನೇ ಸಾಲಿಗೆ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿ ನಿಲಯಗಳಿಗೆ 5ರಿಂದ 10ನೇ ತರಗತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡಲಾಗುವುದು. ಸುಸಜ್ಜಿತ ಕಟ್ಟಡ, ಮೂಲಸೌಕರ್ಯ ಒಳಗೊಂಡಂತೆ, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್, ಸಂಜೆ ವೇಳೆ ಅತಿಥಿ ಶಿಕ್ಷಕರಿಂದ ಪಾಠ ಪ್ರವಚನ, ಪೌಷ್ಟಿಕ ಆಹಾರದ ವ್ಯವಸ್ಥೆ ಇದೆ. ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಅರ್ಜಿ ಪಡೆದು, ಪಾಸ್‌ಪೋರ್ಟ್ ಅಳತೆಯ ಎರಡು ಫೋಟೋ, ಆಧಾರ್ ಕಾರ್ಡ್, ಪಡಿತರ ಚೀಟಿ, ಪೋಷಕರ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಪುಸ್ತಕ, ಹಿಂದಿನ ತರಗತಿ ಅಂಕಪಟ್ಟಿಯ ಎರಡು ಪ್ರತಿಗಳನ್ನು ನೀಡಿ ಉಚಿತ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಜಯಪುರ ಹಾಸ್ಟೆಲ್ ವಾರ್ಡನ್ ಶಿವಪ್ಪ (ಮೊ.ಸಂ. 9880820787) ಹಾಗೂ ಎಸ್.ಕಲ್ಲಹಳ್ಳಿ ಹಾಸ್ಟೆಲ್ ವಾರ್ಡನ್ ಮಹೇಶ್ (ಮೊ.ಸಂ. 9535340175) ಅವರನ್ನು ಸಂಪರ್ಕಿಸಬಹುದು.

ಬಿ.ಎಂ.ನಂದಿನಿಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ನರಸಿಂಹ ಕೌಲಗುಡ್ ಅವರ ಮಾರ್ಗದರ್ಶನದಲ್ಲಿ ಬಿ.ಎಂ.ನಂದಿನಿ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಜಾಯಿಂಟ್ ಡೆಹೇಜಿಂಗ್ ಅಂಡ್ ಡೆಪ್ತ್ ಅನಾಲಿಸಿಸ್ ಇನ್ ಫಾಗಿ ಇಮೇಜಸ್ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವರುಣದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ



ವರುಣದಲ್ಲಿ ನಡೆದ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.


ಮೈಸೂರು, ಜೂ.3 (ಎಂಟಿವೈ)–ಬುದ್ಧ, ಬಸವ, ಅಂಬೇಡ್ಕರ್ ಅವರಂತಹ ಮಹನೀಯರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುವ ಸಂಕಲ್ಪ ಮಾಡುವ ಮೂಲಕ ಸಮಾಜಕ್ಕೆ ಕೊಡುಗೆ ನೀಡುವತ್ತ ಗಮನ ಹರಿಸಬೇಕು ಎಂದು ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಸಲಹೆ ನೀಡಿದ್ದಾರೆ.

ವರುಣ ಗ್ರಾಮದಲ್ಲಿ ಜೈಭೀಮ್ ಯುವಕರ ಸಂಘ ಆಯೋಜಿಸಿದ್ದ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹಾತ್ಮರು ನಡೆದು ಬಂದ ಹಾದಿಯನ್ನು ಸ್ಮರಣೆ ಮಾಡಬೇಕು. ಅವರ ಹಾದಿಯಲ್ಲಿ ನಾವು ನಡೆಯುತ್ತಿದ್ದೇವೆಯೇ? ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ತಪ್ಪಿದ್ದರೆ ಸರಿಪಡಿಸಿಕೊಂಡು ಆರೋಗ್ಯಕರವಾದ ಹಾದಿಯಲ್ಲಿ ಮುನ್ನಡೆಯುವ ಶಪಥ ಮಾಡಬೇಕು. ಮಕ್ಕಳಿಗಾಗಿ ಆಸ್ತಿ ಮಾಡದಿದ್ದರೂ ಚಿಂತೆ ಇಲ್ಲ. ಮಕ್ಕಳನ್ನು ಆಸ್ತಿಯನ್ನಾಗಿ ಬೆಳೆಸುವಂತೆ ಅಂಬೇಡ್ಕರ್ ಅವರು ಹೇಳಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಜ್ಯೋತಿಬಾಪುಲೆ, ಸಾವಿತ್ರಿ ಫುಲೆ ದಂಪತಿ ಶೋಷಿತ ವರ್ಗಗಳ ಶಿಕ್ಷಣಕ್ಕಾಗಿ ಶ್ರಮಿಸಿದರು. ಅಂಬೇಡ್ಕರ್ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಶಿಕ್ಷಣ ದೊರೆಯುವಂತೆ ಮಾಡಿದರು. ಸ್ವಾತಂತ್ರ್ಯ ಪೂರ್ವ ಮತ್ತು ಸ್ವತಂತ್ರ ಭಾರತದಲ್ಲಿ ಅಂಬೇಡ್ಕರ್ ಅವರ ಹೋರಾಟದ ಫಲದಿಂದ ಶಿಕ್ಷಣ, ಉದ್ಯೋಗ, ಸಾಮಾಜಿಕ ಸ್ಥಾನಮಾನ ದೊರೆತಿದೆ. ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ಜನರ ಪರವಾಗಿ ದೇಶದುದ್ದಗಲಕ್ಕೂ ಮತ್ತು ವಿದೇಶದಲ್ಲಿ ಅಂಬೇಡ್ಕರ್ ಹೋರಾಟ ಮಾಡಿರುವುದು ಹಾಗೂ ಅವರ ತ್ಯಾಗವನ್ನು ನಾವು ಮರೆತಿದ್ದೇವೆ ಎಂದು ವಿಷಾದಿಸಿದರು.

ಅಂಬೇಡ್ಕರ್ ಅವರು ರಾಜಕೀಯ ಅಧಿಕಾರವೊಂದೇ ತಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರವೆಂದರು. ರಾಜಕೀಯ ಮೀಸಲಾತಿ ಪಡೆದು ಯಾವ ಮಟ್ಟಕ್ಕೆ ಹೋಗಿದ್ದೇವೆ. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೇ ಗುಂಪುಗಾರಿಕೆ ಮಾಡುತ್ತಿದ್ದೇವೆ. ಮುಂದಿನ ಹಂತಗಳಲ್ಲಿ ರಾಜಕೀಯ ಅಧಿಕಾರ ಪಡೆಯುವ ಪ್ರಯತ್ನವನ್ನೇ ಮಾಡುತ್ತಿಲ್ಲ ಎಂದರು.

ಅಕ್ಕ ಐಎಎಸ್ ಅಕಾಡೆಮಿ ಡಾ.ಶಿವಕುಮಾರ್ ಮುಖ್ಯಭಾಷಣ ಮಾಡಿದರು. ವರುಣ ಪೊಲೀಸ್ ಠಾಣೆ ಉಪನಿರೀಕ್ಷಕ ಚೇತನ್, ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ಚಿಕ್ಕದೇವಯ್ಯ, ವರುಣ ಜ್ಯೋತಿಷಿ ಗಣೇಶಾರಾಧ್ಯ, ಮುಖಂಡರಾದ ರಾಜಣ್ಣ, ರಾಜೇಶ್, ಶೋಭಾ, ಸಾಮಾಜಿಕ ಹೋರಾಟಗಾರ ಮದನ್, ಪಿಲ್ಲಹಳ್ಳಿ ಗ್ರಾಪಂ ಸದಸ್ಯ ಶಿವಕುಮಾರ್, ಬಿವಿಎಫ್ ಕಾರ್ಯದರ್ಶಿ ಹೇಮಂತ್, ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.06.2024 ಮಂಗಳವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ


■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ

■ **ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀ ರಾಜೇಂದ್ರ ತೀರ್ಥಿಯ ಪೂರ್ವಾದಿ ಮಠ, ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ) ಶ್ರೀವ್ಯಾಸತೀರ್ಥ ವಿದ್ಯಾಪೀಠ:** ಶ್ರೀ ಮದ್ಬ್ರಹ್ಮ ಸೂತ್ರ–ಶ್ರೀಮದನುವ್ಯಾಖ್ಯಾನ–ಸಹಿತ ಶ್ರೀ ಮನ್ನ್ಯಾಯ ಸುಧಾ ಮಂಗಳ ಮಹೋತ್ಸವ ಶ್ರೀಮನ್ನ್ಯಾಯ ಸುಧಾ ಪರೀಕ್ಷೆ ಹಾಗೂ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದರ ಸಹಸ್ರಚಂದ್ರ ದರ್ಶನ ಶಾಂತಿ ಮಹೋತ್ಸವ, ಬೆಳಗ್ಗೆ 4.30ಕ್ಕೆ ಸಂಸ್ಥಾನ ಪೂಜೆ, 7ಕ್ಕೆ ತೀರ್ಥ ಪ್ರಸಾದ, ಬೆಳಗ್ಗೆ 9.30 ರಿಂದ 12.30 ಮತ್ತು ಮಧ್ಯಾಹ್ನ 2.30 ರಿಂದ ರಾತ್ರಿ 8 ರವರೆಗೆ ಶ್ರೀಮನ್ನ್ಯಾಯ ಸುಧಾಪರೀಕ್ಷೆ, ವಿದ್ವಾಂಸರಿಂದ ಉಪನ್ಯಾಸ, ಪೀಠಾಧಿಪತಿಗಳಿಂದ ಅನುಗ್ರಹ ಸಂದೇಶ, ಸ್ಥಳ: ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ.

■ **ಮೈಸೂರು ವಿಶ್ವವಿದ್ಯಾನಿಲಯ, ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ:** ಸೈಬರ್ ಸೆಕ್ಯೂರಿಟಿ ಅನಾಲಿಟಿಕ್ಸ್ ಪ್ರೋಗ್ರಾಂ ಕುರಿತು ವಿಶೇಷ ಉಪನ್ಯಾಸ, ಸಂಪನ್ಮೂಲ ವ್ಯಕ್ತಿಗಳು: ಪ್ರೊ.ಸಿಂಚನ್ ಚೆನ್, ಸ್ಥಳ: ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗ, ಬೆಳಗ್ಗೆ 11ಕ್ಕೆ.

■ **ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ :** ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದಿನಾಚರಣೆ, ಅಧ್ಯಕ್ಷತೆ : ಮೈಸೂರು ವೈದ್ಯಕೀಯ ಕಾಲೇಜು ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ, ಮುಖ್ಯ ಅತಿಥಿಗಳು: ಲೇಖಕ ಡಾ.ಬಿ.ವಿ.ಸುಧಾಮಣಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಕರುನಾಡ ಕಬ್ಬಿಗರು–ಬಾನುಲಿ ಸರಣಿ, ಲೇಖನ:ಡಾ. ವಿನೋದಾ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ಸತ್ಯನಾರಾಯಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಪಿ. ರಾಜಗೋಪಾಲ್ ಮತ್ತು ಎಂ.ಎನ್.ಗಣೇಶ್–ಯುಗಳ ನಾಗಸ್ವರ, 11.00 ಮಿತ್ರ ಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ: ಹೀಗಿದೆ ನೋಡಿ ನಮ್ ಜೋಡಿ ರಂಗಭೂಮಿ ಕಲಾವಿದ ದಂಪತಿ ಜಾಹಿದಾ ಹಾಗೂ ಉಮೇಶ್ ಸಾಲಿಯಾನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಅಬ್ದುಲ್ ರಶೀದ್, 12.30 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.20 ಭಾವಗೀತೆಗಳು–ವೀಣಾ ಶ್ರೀನಿವಾಸ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಚಂದ್ರಿಕಾ, 4.00 ಕಥಾ ಕಾಲಕ್ಷೇಪ–ಭಕ್ತ ಸುಧಾಮ, ಪ್ರಸ್ತುತಿ: ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.55 ಕೃಷಿರಂಗ, ಕಿಸಾನ್‌ವಾಣಿ–ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಹಿಪ್ಪು ನೇರಳೆಯಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಟಿ.ಗಾಯತ್ರಿ ಮತ್ತು ಮದ್ದೂರು ತಾಲೂಕು ಸಿ.ಎ.ಕೆರೆ ಹೋಬಳಿ ತೊರೆಬೊಮ್ಮನಹಳ್ಳಿಯ ಹೆಚ್.ಕೆ.ಪುಟ್ಟಮ್ಮ, ಪ್ರಸ್ತುತಿ: ಎನ್.ಕೇಶವಮೂರ್ತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಮಹಾರಾಜಪುರಂ ಸಂತಾನನ್, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ: ಹೆಚ್.ಆರ್.ಕೇಶವಮೂರ್ತಿ, ವ್ಯಾಖ್ಯಾನ: ಮಾರ್ಕಂಡೇಯ ಅವಧಾನಿ, ಪ್ರಸ್ತುತಿ: ಡಾ.ಎ.ಎಸ್.ಶಂಕರ ನಾರಾಯಣ, 10.30 ಸವಿನೆನಪು

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು :** ವಿಶ್ವ ಶುಶ್ರೂಷಕರ ದಿನಾಚರಣೆ, ಅಧ್ಯಕ್ಷತೆ : ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಮುಖ್ಯ ಅತಿಥಿಗಳು: ಅಪೋಲೋ ಆಸ್ಪತ್ರೆ ನಿವೃತ್ತ ಪ್ರಧಾನ ವ್ಯವಸ್ಥಾಪಕಿ ಕೆ.ಎಸ್.ಸುಮಾ, ಗೌರವ ಅತಿಥಿಗಳು: ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ವಿಶೇಷ ಆಹ್ವಾನಿತರು: ಸುಧಾ ಮೃತ್ಯುಂಜಯಪ್ಪ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಭವನ, ಜೆಎಸ್‌ಎಸ್ ಆಸ್ಪತ್ರೆ, ಮಧ್ಯಾಹ್ನ 2.30ಕ್ಕೆ.

■ **ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ, ತಾಲೂಕು ಕುರುಬರ ಸಂಘ :** ಡಾ. ಶ್ರೀ ಶಿವಾನಂದಪುರಿ ಸ್ವಾಮೀಜಿಯವರ ಜನ್ಮ ದಿನೋತ್ಸವ ಆಚರಣೆ, ಸ್ಥಳ: ಕನಕ ಭವನ, ಸಂಜೆ 5ಕ್ಕೆ.

■ **ಭೀಮಬಂಧು ಯುವ ವೇದಿಕೆ :** ಶಿಕ್ಷಣ ಕ್ರಾಂತಿ, 10 ವರ್ಷ ಮೇಲ್ಪಟ್ಟ ಎಲ್ಲಾ ಮಕ್ಕಳಿಗೂ ಹಾಗೂ ಗ್ರಾಮಸ್ಥರಿಗೂ ಶಿಕ್ಷಣ ಹಾಗೂ ಉನ್ನತ ವಿದ್ಯಾಭ್ಯಾಸಕ್ಕೆ ತರಬೇತಿ ಕಾರ್ಯಕ್ರಮ, ಸ್ಥಳ: ಚಿಕ್ಕಗರಡಿ ಆವರಣ, ಕ್ಯಾತಮಾರನಹಳ್ಳಿ, ರಾತ್ರಿ 7.30 ರಿಂದ.

ಇಂಡಿಯಾ 295 ಸೀಟು ಗೆಲ್ಲಲಿದೆ, ರಾಜ್ಯದಲ್ಲಿ ಕಾಂಗ್ರೆಸ್ 15–20 ಸ್ಥಾನ ಗಳಿಸಲಿದೆ



ಬೆಂಗಳೂರು: ಲೋಕಸಭಾ ಚುನಾವಣಾ ಫಲಿತಾಂಶಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಚುನಾವಣೋತ್ತರ ಸಮೀಕ್ಷೆಗಳು 'ಮಾಧ್ಯಮ ಸೃಷ್ಟಿ' ಎಂದು ಹೇಳಿದ್ದು, ಇಂಡಿಯಾ ಬ್ಲಾಕ್ 295ಕ್ಕೂ ಹೆಚ್ಚು ಸೀಟುಗಳನ್ನು ಗೆಲ್ಲಲಿದೆ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ 15–20 ಸ್ಥಾನ ಗಳಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎಕ್ಸಿಟ್ ಪೋಲ್‌ಗಳ ಪ್ರಧಾನಿ ನರೇಂದ್ರ ಮೋದಿಯವರ ಮಾಧ್ಯಮ ಸಮೀಕ್ಷೆ ಎಂದು ಟೀಕಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಹೇಳಿಕೆಗೆ ಸಹಮತ ವ್ಯಕ್ತಪಡಿಸಿದ ಸಿಎಂ, ರಾಜ್ಯದ 28 ಸ್ಥಾನಗಳಲ್ಲಿ ಕಾಂಗ್ರೆಸ್ 15 ರಿಂದ 20 ಸ್ಥಾನಗಳನ್ನು ಗೆಲ್ಲಲಿದೆ ಎಂದು ಪ್ರತಿಪಾದಿಸಿದ್ದಾರೆ.

ರಾಹುಲ್ ಗಾಂಧಿ ಭಾನುವಾರ ಎಕ್ಸಿಟ್ ಪೋಲ್‌ಗಳನ್ನು "ಮೋದಿ ಮಾಧ್ಯಮ ಸಮೀಕ್ಷೆ" ಎಂದು ಟೀಕಿಸಿದ್ದರು.

ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಈಗಾಗಲೇ ರಾಹುಲ್ ಗಾಂಧಿ ಅವರು ಎಕ್ಸಿಟ್ ಪೋಲ್‌ಗಳಿಗೆ ಪ್ರತಿಕ್ರಿಯಿಸಿದ್ದಾರೆ. ಅವರು ಇದನ್ನು ಮೋದಿ ಮಾಧ್ಯಮ ಸಮೀಕ್ಷೆ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ನಾವು ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ, ನಾವು 15–20 ಸ್ಥಾನಗಳನ್ನು ಗೆಲ್ಲುತ್ತೇವೆ ಎಂದರು. ಮಲ್ಲಿಕಾರ್ಜುನ ಖರ್ಗೆ (ಕಾಂಗ್ರೆಸ್ ಅಧ್ಯಕ್ಷ) ಅವರು ದೇಶಾದ್ಯಂತ ಇಂಡಿಯಾ ಬ್ಲಾಕ್ 295 ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಹೇಳಿದ್ದಾರೆ. ನಾನು ಅದನ್ನು ಬೆಂಬಲಿಸುತ್ತೇನೆ ಎಂದು ಅವರು ಹೇಳಿದರು.

ಮೈಸೂರು ನಗರದಲ್ಲಿ ನಿಷೇಧಾಜ್ಞೆ ಜಾರಿ

ಮೈಸೂರು, ಜೂ.3– ಜೂ.4 ರಂದು ಲೋಕಸಭೆ ಚುನಾವಣೆಯ ಮತ ಎಣಿಕೆ ಕಾರ್ಯವು ಮೈಸೂರು ನಗರದ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಕಾಲೇಜಿನಲ್ಲಿ ನಡೆಯಲಿದ್ದು, ಕಾರ್ಯವು ಸುಗಮವಾಗಿ ನಡೆಯಲು ಹಾಗೂ ಮೈಸೂರು ನಗರದಾದ್ಯಂತ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಜೂ.3 ರ ಮಧ್ಯರಾತ್ರಿ 12 ಗಂಟೆಯಿಂದ ಜೂ.5 ರ ಬೆಳಗ್ಗೆ 6 ಗಂಟೆಯವರೆಗೆ ಮೈಸೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಕಲಂ 144 ರನ್ವಯ ನಿಷೇಧಾಜ್ಞೆಯನ್ನು ಹೊರಡಿಸಲಾಗಿದೆ.

ಈ ದಿನಗಳಂದು ಚುನಾಯಿತ ಅಭ್ಯರ್ಥಿಗಳ ವಿಜಯೋತ್ಸವ ಮೆರವಣಿಗೆ, ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ವಾಸದ ಮನೆಗಳ ಮುಂದೆ ಪಟಾಕಿಗಳನ್ನು ಸಿಡಿಸುವುದು, ಮತ ಎಣಿಕೆ ಕೇಂದ್ರದಲ್ಲಿ ಅನಧಿಕೃತ ವ್ಯಕ್ತಿಗಳ ಪ್ರವೇಶ ಹಾಗೂ ಮತ ಎಣಿಕೆ ಕೇಂದ್ರದ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ 5 ಮಂದಿಗಿಂತ ಹೆಚ್ಚು ಜನ ಗುಂಪುಗೂಡುವುದು, ಸಭೆ ಸಮಾರಂಭಗಳನ್ನು ನಡೆಸುವುದು, ಯಾವುದೇ ವ್ಯಕ್ತಿ ತನ್ನೊಂದಿಗೆ ಸ್ಫೋಟಕ ವಸ್ತು ಮತ್ತು ಇನ್ನಿತರ ಮಾರಕಾಸ್ತ್ರಗಳನ್ನು ಒಯ್ಯುವುದು, ಯಾವುದೇ ಮೆರವಣಿಗೆ ನಡೆಸುವುದು ಹಾಗೂ ಪ್ರಚೋದನಾಕಾರಿ ಭಾಷಣ ಮಾಡುವುದು, ಧ್ವನಿವರ್ಧಕ, ಡಿ.ಜೆ. ಉಪಯೋಗಿಸುವುದು ಮತ್ತು ಬೈಕ್ ರ್‍ಯಾಲಿ ನಡೆಸುವುದನ್ನು ನಿಷೇಧಿಸಲಾಗಿದ್ದು, ಈ ಆದೇಶವು ಮದುವೆ ಸಮಾರಂಭಗಳಿಗೆ, ಧಾರ್ಮಿಕ ಮತ್ತು ಶವಸಂಸ್ಕಾರಗಳಿಗೆ ಹಾಗೂ ಶಾಲಾ–ಕಾಲೇಜು ಪರೀಕ್ಷೆಗೆ ತೆರಳುವವರಿಗೆ ಅನ್ವಯಿಸುವುದಿಲ್ಲ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ರಮೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.3– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2023–24ನೇ ಸಾಲಿನ ಪ್ರತಿಭಾವಂತ ಮಾಧ್ಯಮಿಕ ಅಥವಾ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.10,000 ರಂತೆ ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿವೇತನ ನೀಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.25 ಕೊನೆಯ ದಿನಾಂಕವಾಗಿದ್ದು, ಅರ್ಹ ಕ್ರೀಡಾಪಟುಗಳು ಕಚೇರಿಯ ಅಧಿಕೃತ ಜಾಲತಾಣ http://sevasinduservices.karnataka.gov.in ರ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಅರ್ಜಿದಾರರು 2023–24ನೇ ಸಾಲಿನ ವಿದ್ಯಾರ್ಥಿಯಾಗಿದ್ದು, ಮಾಧ್ಯಮಿಕ ಅಥವಾ ಪ್ರೌಢಶಾಲೆ (6 ರಿಂದ 10 ತರಗತಿ) ಯಲ್ಲಿ ಓದುತ್ತಿರಬೇಕು. ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ದೂ.ಸಂ:0821–2564179 ನ್ನು ಸಂಪರ್ಕಿಸಬಹುದು

ಅಕ್ರಮ ಹಣ ವರ್ಗಾವಣೆ ಪ್ರಕರಣ: ಶೋಭಾ ಕರಂದ್ಲಾಜೆಗೆ ಬಿಗ್ ರಿಲೀಫ್



ಬೆಂಗಳೂರು: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಸಂಸದೆ ಶೋಭಾ ಕರಂದ್ಲಾಜೆ ಅವರಿಗೆ ಜನಪ್ರತಿನಿಧಿಗಳ ನ್ಯಾಯಾಲಯ ಬಿಗ್ ರಿಲೀಫ್ ನೀಡಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ 24ನೇ ಆರೋಪಿಯಾಗಿದ್ದ ಅವರು, ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಪ್ರಕರಣದಿಂದ ಬಿಡುಗಡೆಗೊಳಿಸಬೇಕು ಎಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಾಲಯ, ಪ್ರಕರಣದಿಂದ ಬಿಡುಗಡೆಗೊಳಿಸಿ ಆದೇಶ ಹೊರಡಿಸಿದೆ.

ಏನಿದು ಪ್ರಕರಣ: 2014ರ ಮಾರ್ಚ್‌ನಲ್ಲಿ, 24 ಜನರ ವಿರುದ್ಧ ಮನಿ ಲ್ಯಾಂಡರಿಂಗ್ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಕೆಐಎಡಿಬಿಯ 360 ಎಕರೆಯ ಡಿನೋಟಿಫಿಕೇಷನ್ ಅಕ್ರಮಕ್ಕೆ ಸಂಬಂಧಿಸಿದಂತೆ ಇ.ಡಿ ಪ್ರಕರಣ ದಾಖಲಿಸಿತ್ತು ಖಾಸಗಿ ಕಂಪನಿ ಮುಖಾಂತರ ಶೋಭಾ ಕರಂದ್ಲಾಜೆ ಅವರ ಖಾತೆಗೆ ಅಕ್ರಮವಾಗಿ ಹಣ ವರ್ಗಾವಣೆಯಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಪ್ರಕರಣದಲ್ಲಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಸಹ ಸೇರಿದ್ದಾರೆ. ಶೋಭಾ ಕರಂದ್ಲಾಜೆಯವರ ವಿರುದ್ಧ 44 ಕೋಟಿ ರೂ.ಗಳ ಹಗರಣದ ಹಣವನ್ನು ಲ್ಯಾಂಡರಿಂಗ್ ಮಾಡಿದ್ದಾರೆ ಎಂದು ಅವರ ವಿರುದ್ಧ ಪ್ರಕರಣ ದಾಖಲಿಸಿತ್ತು.

ರಾಜ್ಯದಲ್ಲಿ 35 ಸಾವಿರ ಅತಿಥಿ ಶಿಕ್ಷಕರ ನೇಮಕ

ಮೈಸೂರು, ಜೂ. 3(ಎಸ್‌ಪಿಎನ್)– 2024–25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಿಗೆ ತಾತ್ಕಾಲಿಕವಾಗಿ 35 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಸೋಮವಾರ ಅನುಮತಿ ನೀಡಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ 1001, ಹಾಸನ 804, ಕೊಡಗು 265, ಚಾಮರಾಜನಗರ 584 ಹಾಗೂ ಮಂಡ್ಯ ಜಿಲ್ಲೆ 778 ಸೇರಿದಂತೆ ರಾಜ್ಯಾದ್ಯಂತ ಒಟ್ಟು 33,863 ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಈ ಜಾಗಕ್ಕೆ ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ಷರತ್ತಿಗೊಳಪಟ್ಟು ಆಯಾಯ ಶಾಲೆ ಮುಖ್ಯ ಶಿಕ್ಷಕರ ನೇತೃತ್ವದಲ್ಲಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುವಂತೆ ಸೂಚಿಸಿದ್ದು, ಅತಿಥಿ ಶಿಕ್ಷಕರಿಗೆ ಮಾಸಿಕ 10 ಸಾವಿರ ಗೌರವಧನ ನೀಡಲು ಅನುಮತಿ ನೀಡಲಾಗಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ 271, ಹುಣಸೂರು 124, ಕೆ.ಆರ್.ನಗರ 75, ಮೈಸೂರು ಉತ್ತರ 62, ಮೈಸೂರು ಗ್ರಾಮಾಂತರ 84, ಮೈಸೂರು ದಕ್ಷಿಣ 20, ನಂಜನಗೂಡು 108, ಪಿರಿಯಾಪಟ್ಟಣ 188, ತಿ.ನರಸೀಪುರ 69 ಶಿಕ್ಷಕರ ಸೇರಿದಂತೆ ಒಟ್ಟು 1001 ಶಿಕ್ಷಕರ ಹುದ್ದೆ ಖಾಲಿ ಇವೆ. **ಹಾಸನ ಜಿಲ್ಲೆಯ** ಆಲೂರು ತಾಲೂಕಿನಲ್ಲಿ 46, ಅರಕಲಗೂಡು 136, ಅರಸಿಕೆರೆ 103, ಬೇಲೂರು 103, ಚನ್ನರಾಯಪಟ್ಟಣ 134, ಹೊಳೆನರಸೀಪುರ 79, ಸಕಲೇಶ್ವರ 89 ಶಿಕ್ಷಕರು ಸೇರಿದಂತೆ ಒಟ್ಟು 804 ಹುದ್ದೆಗಳು ಖಾಲಿ ಇವೆ. ಅಲ್ಲದೆ, **ಕೊಡಗು ಜಿಲ್ಲೆಯ** ಮಡಿಕೇರಿ 85,

> **❝ ಮೈಸೂರು ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 1001 ಹುದ್ದೆಗಳು ಖಾಲಿಯಿದ್ದು, ಎಲ್ಲಾ ಹುದ್ದೆಗಳಿಗೂ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಂತೆ ಆಯುಕ್ತರು ಅನುಮತಿ ನೀಡಿದ್ದಾರೆ. ಹಾಗೆಯೇ ಪ್ರೌಢಶಾಲೆಗಳಿಗೆ 296 ಮಂದಿ ಅತಿಥಿ ಶಿಕ್ಷಕರ ನೇಮಕಕ್ಕೂ ಅನುಮತಿ ನೀಡಲಾಗಿದೆ.**
> **–ಹೆಚ್.ಕೆ.ಪಾಂಡು,**
> **ಡಿಡಿಪಿಐ, ಶಾಲಾ ಶಿಕ್ಷಣ ಇಲಾಖೆ**

ಸೋಮವಾರ ಪೇಟೆ 58, ವೀರಾಜಪೇಟೆ 122 ಶಿಕ್ಷಕರ ಹುದ್ದೆ ಸೇರಿದಂತೆ ಒಟ್ಟು 265 ಶಿಕ್ಷಕರ ಹುದ್ದೆಗಳು ಖಾಲಿಯಿವೆ.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ 113, ಮದ್ದೂರು 111, ಮಳವಳ್ಳಿ 164, ಮಂಡ್ಯ ಉತ್ತರ 64, ಮೈಸೂರು ದಕ್ಷಿಣ 60, ನಾಗಮಂಗಲ 165, ಪಾಂಡವಪುರ 53, ಶ್ರೀರಂಗಪಟ್ಟಣ 48 ಶಿಕ್ಷಕ ಹುದ್ದೆಗಳು ಸೇರಿದಂತೆ ಒಟ್ಟು 778 ಶಿಕ್ಷಕ ಹುದ್ದೆಗಳು ಖಾಲಿ ಇವೆ. ಅಲ್ಲದೆ **ಚಾಮರಾಜನಗರ ಜಿಲ್ಲೆಯ** ಚಾಮರಾಜನಗರ 190, ಗುಂಡ್ಲುಪೇಟೆ 193, ಹನೂರು 130, ಕೊಳ್ಳೇಗಾಲ 46, ಯಳಂದೂರು 25 ಸೇರಿದಂತೆ ಒಟ್ಟು 584 ಶಿಕ್ಷಕ ಹುದ್ದೆಗಳಿಗೆ ಖಾಲಿ ಉಳಿದಿದ್ದು, ಈ ಹುದ್ದೆಗಳಿಗೆ ತಕ್ಷಣದಿಂದಲೆ ಜಾರಿಗೆ ಬರುವಂತೆ ನೇಮಕ ಮಾಡಿಕೊಳ್ಳುವಂತೆ ಆದೇಶಿಸಿದ್ದಾರೆ.

ಅಲ್ಲದೆ, ಶಾಲಾ ಶಿಕ್ಷಣ ಇಲಾಖೆಯಡಿ ಆದ್ಯತೆ ಮೇರೆಗೆ ವಿಶೇಷವಾಗಿ ಪ್ರಾರಂಭವಾಗಿರುವ ಕರ್ನಾಟಕ ಪಬ್ಲಿಕ್ ಶಾಲೆಗಳು, ದ್ವಿಭಾಷಾ ಮಾಧ್ಯಮ ಶಾಲೆಗಳು ಹಾಗೂ ಆದರ್ಶ ವಿದ್ಯಾಲಯಗಳಲ್ಲಿ ಅತಿಥಿ ಶಿಕ್ಷಕರನ್ನು ಆದ್ಯತೆ ಮೇರೆಗೆ ನೇಮಕಾತಿ ಮಾಡಿಕೊಂಡು ತಕ್ಷಣವೇ ಕಚೇರಿಗೆ ವರದಿ ನೀಡುವಂತೆ ಸೂಚಿಸಿದ್ದಾರೆ.

ಇಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕೆ

ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜು ಕೇಂದ್ರದಲ್ಲಿ ಭಾರಿ ಭದ್ರತೆ

ಬಂದೋಬಸ್ತ್‌ಗಾಗಿ 737 ಸಿವಿಲ್ ಪೊಲೀಸ್, 4 ಕೆಎಸ್‌ಆರ್‌ಪಿ, 12 ಸಿಎಆರ್ ತುಕಡಿ, 4 ಕಮಾಂಡೋ ಪಡೆ ನಿಯೋಜನೆ, ಸಂಚಾರ ನಿರ್ವಹಣೆಗೆ 235 ಸಿಬ್ಬಂದಿಗೆ ಜವಾಬ್ದಾರಿ

ಮೈಸೂರು, ಜೂ. 3(ಆರ್‌ಕೆ)– ಮೈಸೂರಿನ ಪಡುವಾರಹಳ್ಳಿ ಬಳಿ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ನಾಳೆ (ಜೂ. 4) ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕೆ ನಡೆಯಲಿದೆ.

ಮತದಾನ ಮುಗಿದ ದಿನದಿಂದ ಅಭ್ಯರ್ಥಿಗಳ ಭವಿಷ್ಯ ದಾಖಲಾಗಿರುವ ಎಲೆಕ್ಟ್ರಾನಿಕ್ ಮತಯಂತ್ರ (ಇವಿಎಂ)ಗಳು ಹಾಗೂ ವಿವಿ ಪ್ಯಾಟ್‌ಗಳನ್ನು ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಮತ ಎಣಿಕಾ ಕೇಂದ್ರದ ಸ್ಟ್ರಾಂಗ್ ರೂಂಗಳಲ್ಲಿ ಇರಿಸಿ, ಸೀಲ್ ಮಾಡಲಾಗಿದ್ದು, ಅಂದಿನಿಂದ ದಿನದ 24 ಗಂಟೆಯೂ ಶಸ್ತ್ರಸಜ್ಜಿತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ.

ನಾಳೆ (ಜೂ.4) ಬೆಳಗ್ಗೆ 8 ಗಂಟೆಯಿಂದ ಮತ ಎಣಿಕೆ ಕಾರ್ಯ ಆರಂಭವಾಗುವುದರಿಂದ ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಅವರು ಮತ ಎಣಿಕಾ ಕೇಂದ್ರಕ್ಕೆ ಇನ್ನಿಲ್ಲದ ಭದ್ರತೆ ಒದಗಿಸಿ ಅಹಿತಕರ ಘಟನೆಗಳು ಸಂಭವಿಸದಂತೆ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಿದ್ದಾರೆ. ಇಂದು ಬೆಳಗ್ಗೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಮತ ಎಣಿಕೆ ವೀಕ್ಷಕ ಮೊಹಮದ್ ಏಜಾಜ್, ಡಿಸಿಪಿ ಎಂ. ಮುತ್ತುರಾಜ್‌ರೊಂದಿಗೆ ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕೇಂದ್ರಕ್ಕೆ ಭೇಟಿ ನೀಡಿ, ಬಂದೋಬಸ್ತ್ ಅಂತಿಮ



ಸಿದ್ಧತೆಯನ್ನು ಪರಿಶೀಲಿಸಿದರು. ನಾಲ್ವರು ಡಿಸಿಪಿಗಳು, 7 ಎಸಿಪಿಗಳು, 23 ಪೊಲೀಸ್ ಇನ್ಸ್‌ಪೆಕ್ಟರ್ ಗಳು, 58 ಸಬ್ ಇನ್ಸ್‌ಪೆಕ್ಟರ್‌ಗಳು, 76 ಎಎಸ್‌ಐಗಳು, 479 ಹೆಡ್ ಕಾನ್‌ಸ್ಟೇಬಲ್, ಕಾನ್‌ಸ್ಟೇಬಲ್‌ಗಳು, 9 ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್‌ಗಳು ಸೇರಿ ಒಟ್ಟು 737 ಸಿಬ್ಬಂದಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಅಲ್ಲದೆ, 4 ಕೆಎಸ್‌ಆರ್‌ಪಿ, 12 ಸಿಎಆರ್ ತುಕಡಿಗಳು ಹಾಗೂ 4 ಕಮಾಂಡೋ ಪಡೆ ಸಿಬ್ಬಂದಿಯನ್ನು ಮತ ಎಣಿಕಾ ಕೇಂದ್ರಕ್ಕೆ ನಿಯೋಜಿಸಿ ಭಾರಿ ಕಟ್ಟೆಚ್ಚರ ವಹಿಸಲಾಗಿದೆ.

ಮತ ಎಣಿಕಾ ಕೇಂದ್ರದ ಪ್ರವೇಶ ದ್ವಾರದಲ್ಲಿ ಮೆಟಲ್ ಡೋರ್ ಡಿಟೆಕ್ಟರ್ ಅಳವಡಿಸಿ ಅಧಿಕೃತ ಪಾಸ್ ಹೊಂದಿರುವ ಅಧಿಕಾರಿಗಳು, ಸಿಬ್ಬಂದಿ, ಮಾಧ್ಯಮ ಪ್ರತಿನಿಧಿಗಳು, ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು, ಅವರ ಕೌಂಟಿಂಗ್ ಏಜೆಂಟ್‌ಗಳನ್ನು ಹೊರತುಪಡಿಸಿ ಬೇರೆ ಯಾರೂ ನುಸುಳದಂತೆ ಕಟ್ಟೆಚ್ಚರ ವಹಿಸಲಾಗಿದೆ.

ಮತ ಎಣಿಕಾ ಹಾಲ್, ವರಾಂಡ, ಕಟ್ಟಡದ ಒಳ ಮತ್ತು ಹೊರ ಆವರಣಗಳಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಕಟ್ಟಡದ ಆವರಣ, ಪ್ರತೀ ಮಹಡಿಯ ಎಲ್ಲಾ ಕೊಠಡಿಗಳಲ್ಲೂ ಶ್ವಾನದಳದ ಸಿಬ್ಬಂದಿ ತಪಾಸಣೆ ನಡೆಸಲಿದ್ದಾರೆ. ಮತ ಎಣಿಕೆ ಕೇಂದ್ರದಲ್ಲಿ ಹೆಚ್ಚಿನ ಸಂಖ್ಯೆಯ ಸಿಸಿಟಿವಿ, ಕ್ಯಾಮರಾಗಳನ್ನು ಅಳವಡಿಸಿ ನಿಗಾ ವಹಿಸಲಾಗಿದ್ದು, ಸ್ಥಳದಲ್ಲಿ ಅಗ್ನಿಶಾಮಕ ವಾಹನಗಳು, ಆಂಬುಲೆನ್ಸ್‌ಗಳು, ವೈದ್ಯರು, ನರ್ಸ್‌ಗಳ ತಂಡವನ್ನು ನಿಯೋಜಿಸಲಾಗಿದೆ.

ಕೇಂದ್ರದ ಸುತ್ತ 200 ಮೀ. ದೂರದಲ್ಲಿ ಬ್ಯಾರಿಕೇಡ್ ಅಳವಡಿಸಿ ಬೇರೆಯವರು ಅತ್ತ ಸುಳಿಯದಂತೆ ನಾಕಾಬಂದಿ ಮಾಡಿ ಅಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಹುಣಸೂರು ರಸ್ತೆಯ ಪಡುವಾರಹಳ್ಳಿ ಟ್ರಾಫಿಕ್ ಸಿಗ್ನಲ್ ಲೈಟ್ ಸರ್ಕಲ್, ವಾಲ್ಮೀಕಿ ರಸ್ತೆಯ ಒಂಟಿಕೊಪ್ಪಲು ಶ್ರೀ ರಾಮಮಂದಿರ ಸರ್ಕಲ್, ಕಾಳಿದಾಸ ರಸ್ತೆಯ ನಾರಾಯಣ ಸ್ವಾಮಿ ಬ್ಲಾಕ್ ಬಳಿವರೆಗೆ ಧ್ವನಿವರ್ಧಕಗಳನ್ನು ಅಳವಡಿಸಿ ಫಲಿತಾಂಶ ಪ್ರಕಟಿಸಲು ವ್ಯವಸ್ಥೆ ಮಾಡಲಾಗಿದೆ.

235 ಸಂಚಾರ ಪೊಲೀಸರು : ಮತ ಎಣಿಕೆ ಕೇಂದ್ರದ ಸುತ್ತ ವಾಹನಗಳ ಸಂಚಾರ ದಟ್ಟಣೆ ನಿರ್ವಹಣೆಗಾಗಿ ಓರ್ವ ಡಿಸಿಪಿ, ಓರ್ವ ಎಸಿಪಿ, ಇಬ್ಬರು ಪೊಲೀಸ್ ಇನ್ಸ್‌ಪೆಕ್ಟರ್‌ಗಳು, 7 ಮಂದಿ ಸಬ್ ಇನ್ಸ್‌ಪೆಕ್ಟರ್‌ಗಳು, 30 ಎಎಸ್‌ಐಗಳು, 184 ಹೆಡ್ ಕಾನ್‌ಸ್ಟೇಬಲ್‌ಗಳು ಮತ್ತು ಕಾನ್‌ಸ್ಟೇಬಲ್‌ಗಳು ಸೇರಿ 235 ಮಂದಿ ಸಂಚಾರ ಪೊಲೀಸರನ್ನು ನಿಯೋಜಿಸಲಾಗಿದೆ.

ವಿವೇಕಾನಂದ ಪರ ಯದುವೀರ್ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾನದ ದಿನ ರಾಜವಂಶಸ್ಥ, ಬಿಜೆಪಿ ಮುಖಂಡ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೈಸೂರಿನ ಕುವೆಂಪುನಗರದಲ್ಲಿನ ಕಾಗಿನೆಲೆ ಶಾಲೆ ಮತಗಟ್ಟೆ ಬಳಿ, ಶಿಕ್ಷಕರಿಗೆ ಮಾದರಿ ಮತಪತ್ರ ನೀಡಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತ ಯಾಚಿಸಿದರು. ಈ ವೇಳೆ ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಎಂ.ಸಿರಮೇಶ್, ಕೇಬಲ್ ರಮೇಶ್, ಮಾಯಾ ಜಗದೀಶ್, ಹೇಮಂತ್ ಕುಮಾರ್‌ಗೌಡ, ದೇವರಾಜು, ಲಕ್ಷ್ಮಣ್ ಲಚ್ಚಿ ಮತ್ತಿತರರಿದ್ದರು.

ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.3– ಕರ್ನಾಟಕ ಸರ್ಕಾರದ ಎಐಟಿಟಿ, ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಯುವಕ ಯುವತಿಯರಿಗೆ ಉದ್ಯೋಗ ಆಧಾರಿತ ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಟೂಲ್ ಡಿಸೈನ್ನಲ್ಲಿ ಪೋಸ್ಟ್ ಡಿಪ್ಲೊಮಾ ತರಬೇತಿಗೆ ಡಿಪ್ಲೊಮಾ/ಬಿಇ (ಎಂಇ/ಎಇ/ಐಪಿ/ಡಿಟಿಡಿಎಮ್/ಡಿಪಿಎಮ್) ವಿದ್ಯಾರ್ಹತೆ, ಟೂಲ್ ರೂಮ್ ಮೆಷಿನಿಸ್ಟ್ ತರಬೇತಿಗೆ ಎಸ್‌ಎಸ್‌ಎಲ್‌ಸಿ, ಟೂಲ್ ಮತ್ತು ಡೈ ಮೇಕರ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಮತ್ತು ಐಟಿಐ, ಸಿಎನ್‌ಸಿ ಟೆಕ್ನಾಲಜಿ ಮತ್ತು ಸಿಎಮ್‌ಎಮ್ ತರಬೇತಿಗೆ ಐಟಿಐ ಅಥವಾ ಡಿಪ್ಲೊಮಾ, ಡಿಸೈನರ್ ಮೆಕ್ಯಾನಿಕಲ್(ಸಿಎಡಿ–ಸಿಎಎಂ) ತರಬೇತಿಗೆ ಡಿಪ್ಲೊಮಾ ಅಥವಾ ಬಿಇ, ಎಲೆಕ್ಟ್ರಿಷಿಯನ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಕನ್ವೆನ್ಶನಲ್ ಮಷೀನ್ಸ್ ಮತ್ತು ಕ್ವಾಲಿಟಿ ಕಂಟ್ರೋಲ್ಸ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಸಿಎನ್‌ಸಿ ಮೆಷಿನ್ ಆಪರೇಟರ್ (ಟರ್ನರ್/ಮಿಲ್ಲರ್) ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಉತ್ಪನ್ನ ವಿನ್ಯಾಸ ಎಂಜಿನಿಯರ್ ಸಿಎಡಿ–ಸಿಎಎಂ ತರಬೇತಿಗೆ ಡಿಪ್ಲೊಮಾ ಅಥವಾ ಬಿಇ, ಕ್ವಾಲಿಟಿ ಇನ್ಸ್‌ಪೆಕ್ಟರ್ ತರಬೇತಿಗೆ ಐಟಿಐ ಅಥವಾ ಡಿಪ್ಲೊಮಾ ಹಾಗೂ ಸಿಎನ್‌ಸಿ ಪ್ರೋಗ್ರಾಮರ್ ವಿಎಂಸಿ ಮತ್ತು ಟರ್ನಿಂಗ್ ತರಬೇತಿಗೆ ಡಿಪ್ಲೊಮಾ ಅಥವಾ ಬಿಇ ವಿದ್ಯಾರ್ಹತೆಯನ್ನು ಹೊಂದಿರುವ 16 ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಜೂ.20 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9945442654, 9945479700 ಅಥವಾ 9900864686 ನ್ನು ಸಂಪರ್ಕಿಸಬಹುದು ಎಂದು ಜಿ.ಟಿ.ಟಿ.ಸಿ ಕೇಂದ್ರದ ಸಿ.ಒ.ಇ–ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತದಾರರಿಗೆ ಕೆ.ವಿವೇಕಾನಂದ ಧನ್ಯವಾದ



ಮೈಸೂರು, ಜೂ.3– ವಿಧಾನ ಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿಕೂಟದ (ಎನ್‌ಡಿಎ) ಅಭ್ಯರ್ಥಿ ಕೆ.ವಿವೇಕಾನಂದ ಅವರು ಮತದಾನ ಮಾಡಿದ ಶಿಕ್ಷಕ ವರ್ಗಕ್ಕೆ ಧನ್ಯವಾದ ತಿಳಿಸಿದ್ದಾರೆ.

ಶಿಕ್ಷಕರು ತಮ್ಮ ಪ್ರತಿನಿಧಿ ಆಯ್ಕೆಗಾಗಿ ತಮ್ಮ ಅತ್ಯಮೂಲ್ಯ ಮತವನ್ನು ಚಲಾಯಿಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ. ಪ್ರಬುದ್ಧ ಮತದಾರರಾದ ಶಿಕ್ಷಕರು ಈ ಸಮಾಜ ಮುನ್ನಡೆಸುವ ಮಾರ್ಗದರ್ಶಕರು. ಅವರ ಆಶೀರ್ವಾದ ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ನನಗೆ ಸಿಗಲಿರುವ ವಿಶ್ವಾಸದಲ್ಲಿರುವ ನಾನು, ಅವರಿಗೆ ಅನಂತ ಧನ್ಯವಾದ ಸಲ್ಲಿಸುತ್ತೇನೆ. ಅಲ್ಲದೆ, ಕಳೆದ ಹಲವು ದಿನಗಳಿಂದ ಜೆಡಿಎಸ್–ಬಿಜೆಪಿ ನಾಯಕರು, ಮುಖಂಡರು ನನ್ನ ಪರ ಪ್ರಚಾರ ಮಾಡಿ ಮತಯಾಚಿಸಿದ್ದಾರೆ. ಅವರೆಲ್ಲರಿಗೂ ಧನ್ಯವಾದ ಹೇಳಬಯಸುತ್ತೇನೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಶಾಸಕ ಹರೀಶ್‌ಗೌಡರ ನೇತೃತ್ವದಲ್ಲಿ ಮತಯಾಚನೆ...



ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಶಾಸಕ ಕೆ. ಹರೀಶ್‌ಗೌಡರ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಮತಯಾಚನೆ ಮಾಡಿದರು. ಚಿತ್ರದಲ್ಲಿ ಮಾಜಿ ಮೇಯರ್ ಬಿ.ಕೆ. ಪ್ರಕಾಶ್, ಪುರುಷೋತ್ತಮ್ ಇತರರಿದ್ದಾರೆ.

ಮೈಸೂರಲ್ಲಿ ಆರಂಭವಾಗಿದೆ ಗೆಲುವಿನ ಲೆಕ್ಕಾಚಾರ

ನಮ್ಮದೇ ಗೆಲುವು; ಬಿಜೆಪಿ, ಕಾಂಗ್ರೆಸ್ ನಾಯಕರ ವಿಶ್ವಾಸ

● ಉದ್ಯಮಿಗಳಲ್ಲಿ ಹತ್ತು ಹಲವು ನಿರೀಕ್ಷೆ ● ಫಲಿತಾಂಶ ವೀಕ್ಷಣೆಗೆ ಹೋಟೆಲ್‌ಗಳಲ್ಲಿ ವ್ಯವಸ್ಥೆ

ಮೈಸೂರು, ಜೂ.3(ಎಂಕೆ)– ವಿಶ್ವದ ಗಮನ ಸೆಳೆದಿರುವ ದೇಶದ ಲೋಕಸಭಾ ಚುನಾವಣೆ ಫಲಿತಾಂಶದ ಕಡೆಗೆ ಎಲ್ಲರ ಚಿತ್ತ ಹರಿದಿದ್ದು, ನಮ್ಮ ಅಭ್ಯರ್ಥಿಯ ಗೆಲುವು ಗ್ಯಾರಂಟಿ... ಸಂಭ್ರಮಾಚರಣೆಯೊಂದೇ ಬಾಕಿ ಎನ್ನುತ್ತಿದ್ದಾರೆ...!

ಹೌದು! ರಾಜಕೀಯ ಮಾತ್ರವಲ್ಲ ಸಾರ್ವಜನಿಕ ವಲಯದಲ್ಲಿ ತೀವ್ರ ಕುತೂಹಲ ಕೆರಳಿಸಿರುವ ಲೋಕಸಭಾ ಚುನಾವಣಾ ಫಲಿತಾಂಶ ನಾಳೆ(ಜೂ.4) ಮಧ್ಯಾಹ್ನದ ವೇಳೆಗೆ ಬಹುತೇಕ ಹೊರಬೀಳಲಿದ್ದು, ಬಿಜೆಪಿ–ಜೆಡಿಎಸ್, ಕಾಂಗ್ರೆಸ್ ಹಾಗೂ ಇನ್ನಿತರೆ ಪಕ್ಷೇತರ ಅಭ್ಯರ್ಥಿಗಳ ಬೆಂಬಲಿಗರು, ಕಾರ್ಯಕರ್ತರು ಸಂಭ್ರಮಾಚರಣೆಯ ಪೂರ್ವ ಸಿದ್ಧತೆ ಮಾಡಿಕೊಂಡಿದ್ದಾರೆ. ಹಾಗೆಯೇ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಸಹ ತಮ್ಮ ತಮ್ಮ ಕಚೇರಿಗಳ ಎಲ್‌ಇಡಿ ಪರದೆ ಅಳವಡಿಸಿ ಚುನಾವಣಾ ಫಲಿತಾಂಶದ ಕ್ಷಣ ಕ್ಷಣ ಮಾಹಿತಿ ವೀಕ್ಷಣೆ ಮಾಡಲು ತಯಾರಿ ನಡೆಸಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಂತೂ ಗೆಲುವಿನ ಲೆಕ್ಕಾಚಾರವೇ ವಿಭಿನ್ನವಾಗಿದ್ದು, ಅಭ್ಯರ್ಥಿಗಳ ಬೆಂಬಲಿಗರು ಈಗಾಗಲೇ ತಮ್ಮ ಅಭ್ಯರ್ಥಿ ಹೆಸರಿನ ಮುಂದೆ 'ನಮ್ಮ ಎಂಪಿ' ಎಂದು ವಾಟ್ಸಾಪ್ ಗ್ರೂಪ್‌ಗಳನ್ನು ಕ್ರಿಯೇಟ್ ಮಾಡಿ, ಗೆಲುವು ಗ್ಯಾರಂಟಿ ಎಂಬ ಅತೀವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ ಗೆಲುವನ್ನು ಸಂಭ್ರಮಿಸಲು ಪೂರ್ವ ತಯಾರಿಯನ್ನೂ ಮಾಡಿಕೊಂಡಿದ್ದಾರೆ. ನಗರದ ಬಿಜೆಪಿ



ಮತ್ತು ಜೆಡಿಎಸ್ ಕಚೇರಿ ಹಾಗೂ ಕಾಂಗ್ರೆಸ್ ಕಚೇರಿ ಎದುರು ಸಂಭ್ರಮಾಚರಣೆ ನಡೆಸಲು ಸಿದ್ಧತೆ ನಡೆಸಿದ್ದು, ಫಲಿತಾಂಶ ಹೊರಬೀಳುವುದಷ್ಟೇ ಬಾಕಿ ಎನ್ನುತ್ತಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಪರಿಸ್ಥಿತಿ ಗಮನಿಸಿ ಎಲ್‌ಇಡಿ ಪರದೆ ಅಳವಡಿಸುವ ಕುರಿತು ಚಿಂತಿಸಲಾಗಿದೆ. ಆದರೆ ಬಹುತೇಕರು ಟಿವಿಯಲ್ಲೇ ವೀಕ್ಷಣೆ ಮಾಡುವುದರಿಂದ ಚುನಾವಣಾ ಫಲಿತಾಂಶ ನೋಡಿಕೊಂಡು ಸಂಭ್ರಮ ಆಚರಿಸಲಿದ್ದೇವೆ. ಸಂಭ್ರಮಾಚರಣೆಗೆ ಬೇಕಾದ ಎಲ್ಲಾ ಬಗೆಯ ಪೂರ್ವ ತಯಾರಿಗಳನ್ನು ಮಾಡಿಕೊಳ್ಳಲಾಗಿದೆ ಎಂದು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಗೆಲುವು ಗ್ಯಾರಂಟಿಯಾಗಿದ್ದು, ಸಂಭ್ರಮಾಚರಣೆಯೊಂದೇ ಬಾಕಿ. ನಮ್ಮ ಅಭ್ಯರ್ಥಿ ಗೆಲುವು ಖಚಿತವಾಗುತ್ತಿದ್ದಂತೆ ಪಕ್ಷದ ಕಚೇರಿಯಲ್ಲಿ ದೊಡ್ಡಮಟ್ಟದಲ್ಲಿ ಸಂಭ್ರಮಾಚರಣೆ ನಡೆಯಲಿದೆ. ಕಚೇರಿಯಲ್ಲಿ ಎಲ್‌ಇಡಿ ಪರದೆ ಅಳವಡಿಸಿ ಚುನಾವಣೆ ವೀಕ್ಷಣೆ ಮಾಡುವ ವ್ಯವಸ್ಥೆ ಮಾಡಿಲ್ಲ. ಬದಲಾಗಿ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಸಂಭ್ರಮಿಸಲು ಕುತೂಹಲದಿಂದ ಕಾಯುತ್ತಿದ್ದೇವೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ. ಬಿ.ಜೆ.ವಿಜಯ್‌ಕುಮಾರ್ ತಿಳಿಸಿದರು.

ಕರ್ನಾಟಕದ್ದೇ ಕುತೂಹಲ: ಎಕ್ಸಿಟ್ ಪೋಲ್ ರಿಸಲ್ಟ್ ಈಗಾಗಲೇ ಬಿಜೆಪಿ ಪರವಾಗಿ ತೋರುತ್ತಿದೆ. ಆದರೆ ಕುತೂಹಲ ಇರುವುದೇ ರಾಜ್ಯದ 28 ಕ್ಷೇತ್ರಗಳಲ್ಲಿ ಏನಾಗಲಿದೆ ಎಂಬುದು. ಯಾವ ಪಕ್ಷ ಅಧಿಕಾರಕ್ಕೆ ಬಂದರೆ ಷೇರು ಮಾರುಕಟ್ಟೆಯಲ್ಲಿ ಏರಿಳಿತಗಳಾಗುವ ಸಾಧ್ಯತೆಗಳಿವೆ ಎಂತಲೂ ಹಲವರು ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು, ಎಷ್ಟು ಸ್ಥಾನಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲಿದೆ ಹಾಗೂ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಳಿಗೆ ಗೆಲುವಾಗುತ್ತಾ. ಅದು ಎಷ್ಟು ಮತಗಳ ಅಂತರ, ಎಷ್ಟು ಕ್ಷೇತ್ರಗಳಲ್ಲಿ ಎಂಬುದು ತೀವ್ರ ಕುತೂಹಲ ಕೆರಳಿಸಿದೆ ಎಂದು ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಪ್ರಶಾಂತ್ ತಿಳಿಸಿದರು.

ಬಿಗ್ ಸ್ಕ್ರೀನ್: ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಪ್ರತಿಕ್ರಿಯಿಸಿ, ಸಂಘದ ಕಚೇರಿಯಲ್ಲಿ ಎಲ್‌ಇಡಿ ಬಿಗ್ ಸ್ಕ್ರೀನ್ ಅಳವಡಿಸಿ, ಲೋಕಸಭಾ ಚುನಾವಣಾ ಫಲಿತಾಂಶ ವೀಕ್ಷಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮತ್ತೊಮ್ಮೆ ಮೋದಿಯವರೇ ಪ್ರಧಾನಿಯಾಗುತ್ತಾರಾ... ಅಥವಾ ಕಾಂಗ್ರೆಸ್‌ಗೆ ಎಷ್ಟು ಸ್ಥಾನಗಳು ಬರಬಹುದೆಂಬ ನಿರೀಕ್ಷೆಯಲ್ಲಿದ್ದೇವೆ. ನಗರದ ಬಹುತೇಕ ಸ್ಟಾರ್ ಹೋಟೆಲ್‌ಗಳಲ್ಲಿ ಟಿವಿ ವ್ಯವಸ್ಥೆ ಇದ್ದೆ ಇರಲಿದ್ದು, ಹೋಟೆಲ್‌ಗಳಲ್ಲಿ ರೂಂ ಬುಕ್ ಮಾಡಿರುವ ಪ್ರವಾಸಿಗರು ಸಹ ಯಾವುದೇ ಅಡೆ–ತಡೆ ಇಲ್ಲದೆ ಮಾಧ್ಯಮಗಳ ಮೂಲಕ ಫಲಿತಾಂಶ ವೀಕ್ಷಣೆ ಮಾಡಬಹುದು.

ಮಹಾರಾಜರು ಗೆದ್ದರೆ ಮಾರುಕಟ್ಟೆ ಉಳಿಯುತ್ತೇ..!: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಯದುವೀರ್ ಮಹಾರಾಜರು ಗೆದ್ದರೆ ದೇವರಾಜ ಮಾರುಕಟ್ಟೆ ಇನ್ನೂ ಹತ್ತಾರು ವರ್ಷ ಸುಭದ್ರವಾಗಿರಲಿದೆ. ಅಷ್ಟೇ ಅಲ್ಲದೆ ಮೈಸೂರಿನ ಪಾರಂಪರಿಕ ಕಟ್ಟಡಗಳು ಉಳಿಯಲಿವೆ. ಹಾಗಾಗಿ ಅವರೇ ಸಂಸದರಾಗಬೇಕು ಎಂದು ದೇವರಾಜ ಮಾರುಕಟ್ಟೆಯ ಕೆಲ ವ್ಯಾಪಾರಸ್ಥರು ತಿಳಿಸಿದರೆ, ಯಾರೇ ಗೆದ್ದರು ಜನಪರ ಕೆಲಸ ಮಾಡಲಿ. ರೈತರಿಗೆ, ವ್ಯಾಪಾರಸ್ಥರಿಗೆ ಅನುಕೂಲವಾದರೆ ಸಾಕು. ವ್ಯಾಪಾರ ನಡುವೇ ಮೊಬೈಲ್‌ನಲ್ಲೇ ಫಲಿತಾಂಶ ವೀಕ್ಷಣೆ ಮಾಡುತ್ತೇವೆ ಎಂದು ಕೆಲವರು ತಿಳಿಸಿದರು.

ಮತ ಎಣಿಕಾ ಕೇಂದ್ರದಲ್ಲಿ ಎಚ್ಚರ ವಹಿಸಿ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕಾ ಕೇಂದ್ರಕ್ಕೆ ತೆರಳುವ ಬಿಜೆಪಿ ಪಕ್ಷದ ಏಜೆಂಟರೊಂದಿಗೆ ಸೋಮವಾರ ರಾತ್ರಿ ಸಭೆ ನಡೆಸಿದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮತ ಎಣಿಕೆ ವೇಳೆ ಎಚ್ಚರದಿಂದ ಗಮನಿಸುವಂತೆ ತಾಕೀತು ಮಾಡಿದರು. ಮತ ಎಣಿಕೆ ವೇಳೆ ಸರಿಯಾಗಿ ಗಮನಿಸಬೇಕು. ಆಗಾಗ ನಮ್ಮ ಅಭ್ಯರ್ಥಿಗೆ ಎಷ್ಟು ಮತಗಳು ಬಂದಿವೆ ಎಂಬುದನ್ನು ಬರೆದುಕೊಂಡು ಗೊಂದಲವಾದಲ್ಲಿ ಚುನಾವಣಾ ಅಧಿಕಾರಿಗಳ ಬಳಿ ವಿಚಾರಿಸಿ, ಬಗೆಹರಿಸಿಕೊಳ್ಳಬೇಕು. ಯಾವುದೇ ಗೊಂದಲಕ್ಕೂ ಆಸ್ಪದ ನೀಡದೆ ಕಾರ್ಯನಿರ್ವಹಿಸಿ ಎಂದು ಸೂಚಿಸಿದರು.

ನಕ್ಕರೆ ಅದೇ ಸ್ವರ್ಗ

ಭಾಷಣಕಾರ : "ಆಯಾಸ ಪರಿಹಾರಕ್ಕೆ ಹನ್ನೆರಡು ಸೂತ್ರಗಳು" ಎಂಬ ಬಗ್ಗೆ ಭಾಷಣ ಮಾಡಿ ಅದರ ಪ್ರಭಾವ ತಿಳಿಯಲು) : "ನನ್ನ ಭಾಷಣ ಏನು ಅನಿಸಿತು?"

ಓರ್ವರು : "ಉಪಯೋಗವಾಯ್ತು ಸಾರ್, ನಾನು ಚಪ್ಪಾಳೆ ಶಬ್ದಕ್ಕೆ ಎಚ್ಚರವಾದೆ, ವಂದನಾರ್ಪಣೆ ನಡೆಯುತ್ತಿತ್ತು, ನನ್ನ ಮೈಕೈ ಆಯಾಸವೆಲ್ಲಾ ಪರಿಹಾರವಾಗಿತ್ತು, ನಿದ್ದೆ ಆದ ಮೇಲೆ!"

ಮೈಸೂರು ಮಿತ್ರ
ಮಂಗಳವಾರ, 4 ಜೂನ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತವಾಹಿನಿ.........

ನೀನು ಹೆಚ್ಚು ಕಾಲ ಬದುಕಬೇಕೆಂದಿದ್ದರೆ, ನಿನ್ನ ಪ್ರಾರಂಭಿಕ ಇಪ್ಪತ್ತು ವರ್ಷ ತುಂಬ ಅಮೂಲ್ಯವಾದದ್ದು ಎಂಬುದು ನೆನಪಿರಲಿ – ಅರವಿಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಂದದ್ದು ಬಿಡಬಾರದು, ಬಾರದ್ದು ಬಯಸಬಾರದು

ನಿಮ್ಮ ಪತ್ರಗಳು

ಅಪಾಯಕಾರಿ ಮರದ ಕೊಂಬೆಗಳು





ಎಸ್‌ಬಿಎಂ ಮಂಜು

ಮಾನ್ಯರೆ,

ಸುಮಾರು ಒಂದು ತಿಂಗಳ ಹಿಂದೆ ಮೈಸೂರಿನಲ್ಲಿ ಹಿಂದೆಂದೂ ಬರದಂತಹ ಬಿರುಗಾಳಿ ಮಳೆಗೆ 100ಕ್ಕೂ ಹೆಚ್ಚು ಮರಗಳು ಬಿದ್ದು ಹಾನಿಯಾಗಿದ್ದು ಎಲ್ಲರಿಗೂ ನೆನಪಿರಬಹುದು. ಅಂದೇ ಗೋಕುಲಂ 3ನೇ ಹಂತ 9ನೇ ಕ್ರಾಸ್‌ನಲ್ಲಿರುವ ನಮ್ಮ ಮನೆ ಗೇಟ್ ಮುಂದಿರುವ 'ಬಸವನ ಪಾದ' ಮರದ ಕೊಂಬೆಗಳು ಪೂರ್ಣವಾಗಿ ವಾಲಿಕೊಂಡು ಅಲ್ಲೇ ಹಾದು ಹೋಗಿರುವ ವಿದ್ಯುತ್ ತಂತಿಗಳ ಮೇಲೆ ಚಿತ್ತಾರಲ್ಪಡುವಂತೆ ಬಿದ್ದಿತ್ತು. ಈ ಬಗ್ಗೆ ಒಂಟಿಕೊಪ್ಪಲಿನಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ನಿಗಮದ ಇಂಜಿನಿಯರ್ ಮತ್ತು ಅವರ ಸಹಾಯಕರಿಗೆ ದೂರು ಕೊಟ್ಟು ಕೊಂಬೆಗಳನ್ನು ಕತ್ತರಿಸಬೇಕೆಂದು ಅನೇಕ ಬಾರಿ ವಿನಂತಿಸಿದ್ದೂ ಅವರಿಂದ ಬಂದ ಒಂದೇ ಉತ್ತರ 'ಮಾಡುತ್ತೇವೆ ತಲೆ ಕೆಡಿಸಿಕೊಳ್ಳಬೇಡಿ'. ಇದರಿಂದ ಬೇಸತ್ತು ಗೋಕುಲಂ ಮಾಜಿ ಕಾರ್ಪೋರೇಟರ್ ಎಸ್.ಬಿ.ಎಮ್. ಮಂಜು ಅವರಿಗೆ ತಿಳಿಸಿದಾಗ ಕೂಡಲೇ ಅವರು ಸ್ಥಳಕ್ಕೆ ಬಂದು ನೋಡಿ ಬಹಳ ಮುತುವರ್ಜಿ ವಹಿಸಿ ಮಾರನೇ ದಿನವೇ ಕೊಂಬೆಗಳನ್ನು ಕತ್ತರಿಸಿದ್ದಲ್ಲದೆ ಅವುಗಳನ್ನು ಸಾಗಿಸುವ ಏರ್ಪಾಡನ್ನೂ ಮಾಡಿದರು. ಅಪರೂಪದ ರಾಜಕಾರಣಿಯಾಗಿರುವ ಶ್ರೀಯುತರು ಪ್ರಸ್ತುತ ಪಾಲಿಕೆ ಸದಸ್ಯನಾಗಿಲ್ಲದಿದ್ದರೂ ತಮ್ಮ ಜನಪರ ಕಾರ್ಯ ತತ್ಪರತೆಯನ್ನು ಮೆರೆದಿದ್ದಾರೆ. ಅವರಿಗೆ ಧನ್ಯವಾದಗಳೊಂದಿಗೆ ಅಂಥವರ ಸಂತತಿ ವೃದ್ಧಿಸಲಿ ಎಂದು ಹಾರೈಸುತ್ತೇನೆ.

–ಡಾ. ಸಿ.ಜಿ.ನರಸಿಂಹನ್, ಮೈಸೂರು.

ಕಣ್ಣಾಮುಚ್ಚಾಲೆ ಮತ್ತು ಪೊಲೀಸರು!

ಮಾನ್ಯರೆ,

ಕಣ್ಣಾ ಮುಚ್ಚೇ ಕಾಡೇ ಗೂಡೇ ಉದ್ದಿನ ಮೂಟೆ ಉರುಳೇ ಹೋಯ್ತು... ನಮ್ಮಹಕ್ಕಿ ಬಿಟ್ಟೇಬಿಟ್ಟೇ... ನಿಮ್ಮ ಹಕ್ಕಿ ಅಡಗಿ ಕೊಳ್ಳಿ... ಎನ್ನುತ್ತಾ ಕಣ್ಣುಮುಚ್ಚಿ ಗುನುಗುತ್ತಾ ಕೂ...ನಾ.....ಕೂ...ನಾ.. ಎಂದು ಕೂಗುತ್ತಾನೆ ಒಬ್ಬ!

ಅಡಗಿಕೊಂಡಾದ ನಂತರ ಕೂ... ಎನ್ನುತ್ತಾರೆ ಹಲವರು. ನಂತರ ಈತ ಕಣ್ತೆರೆದು ಆ ತಂಡವನ್ನು ಹುಡುಕತೊಡಗುತ್ತಾನೆ! ಇದು ಮಕ್ಕಳ ಕಣ್ಣಾಮುಚ್ಚಾಲೆ ಆಟ.

ಈ ಆಟಕ್ಕೂ ನಮ್ಮ ಪೊಲೀಸರ ಕಾರ್ಯಾಚರಣೆಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಪ್ರಜ್ವಲ್ ರಾಸಲೀಲೆಯ ವಿಡಿಯೋ ತುಣುಕು ಹರಿದಾಡತೊಡಗುತ್ತಿದೆ. ಪೊಲೀಸರು 'ಕಣ್ಣಾ ಮುಚ್ಚೇ' ಎನ್ನುತ್ತಾರೆ. ತನ್ನ ವಿಡಿಯೋವನ್ನು ಪ್ರಸಾರ ಮಾಡಬಾರದೆಂದು ಪ್ರಜ್ವಲ್ ಕೋರ್ಟ್ ಮೊರೆಹೋಗುತ್ತಾನೆ. ಪೊಲೀಸರು 'ಕಾಡೇ ಗೂಡೇ' ಎನ್ನುತ್ತಾರೆ. ಪ್ರಜ್ವಲ್ ರಾಸಲೀಲೆ ವಿಡಿಯೋ ತುಣುಕು ಖಾಸಗಿ ವಾಹಿನಿಯಲ್ಲಿ ಬಿತ್ತರಗೊಳ್ಳುತ್ತಿದೆ. ಪೊಲೀಸರು 'ಉದ್ದಿನ ಮೂಟೇ ಉರುಳೇ ಹೋಯ್ತು...' ಎನ್ನುತ್ತಾರೆ. ಪ್ರಜ್ವಲ್ ವಿದೇಶಕ್ಕೆ ಹಾರಿಹೋಗುತ್ತಾನೆ. ಪೊಲೀಸರು 'ನಮ್ಮ ಹಕ್ಕಿ ಬಿಟ್ಟೇ ಬಿಟ್ಟೇ...' ಎನ್ನುತ್ತಾರೆ. ಪ್ರಜ್ವಲ್ ಪರಾರಿಯಾದ ವಿಷಯ ಸುದ್ದಿಯಾಗುತ್ತದೆ. ಪೊಲೀಸರು 'ನಿಮ್ಮ ಹಕ್ಕಿ ಅಡಗಿಕೊಳ್ಳಿ' ಎನ್ನುತ್ತಾರೆ. ನಂತರ ಪೊಲೀಸರು 'ಕೂ ನಾ' ಎನ್ನುತ್ತಾರೆ. ಪ್ರಜ್ವಲ್ 'ಕೂ' ಎನ್ನುತ್ತಾನೆ. ಪೊಲೀಸರು ಹುಡುಕತೊಡಗುತ್ತಾರೆ. ವಿವಿಧ ಬಣ್ಣದ ಕಾರ್ನರ್ ನೋಟೀಸು ಬೀಸುತ್ತಾರೆ. ಇದು ನಮ್ಮ ಪೊಲೀಸ್ ವ್ಯವಸ್ಥೆ ಮತ್ತು ಅಪರಾಧಿಗಳ ನಡುವಿನ ಕಣ್ಣಾಮುಚ್ಚಾಲೆ ಆಟ. ಅಪರಾಧಿ ಕಣ್ಣಮುಂದೆಯೇ ಇದ್ದಾಗ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಅವನ ಹೆಡೆಮುರಿ ಕಟ್ಟುವ ಬದಲಾಗಿ ಆತ ಪರಾರಿಯಾಗುವವರೆಗೂ ತೆಪ್ಪಗಿದ್ದು, ನಂತರ ಹುಡುಕುವ ಆಟ ಆಡುತ್ತಾರೆ ನಮ್ಮ ಪೊಲೀಸರು!

ಕೆ.ಆರ್.ನಗರ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲೂ ಭವಾನಿ ಮತ್ತು ಪೊಲೀಸರು ಕಣ್ಣಾಮುಚ್ಚಾಲೆ ಆಡುತ್ತಿದ್ದಾರೆ. ನಿರೀಕ್ಷಣಾ ಜಾಮೀನು ಅರ್ಜಿಯ ಆದೇಶಕ್ಕಾಗಿ ಕಾಯುತ್ತಾರೆ ನಮ್ಮ ಪೊಲೀಸರು. ಅದು ವಜಾ ಆಯಿತು ಮತ್ತೇನು? ಈಗ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಅಪರಾಧಿಗಳೂ ವಿದೇಶಕ್ಕೆ ಹಾರಿ ಕೂ.... ಎಂದ ಮೇಲೆ ಪೊಲೀಸರು ಹುಡುಕತೊಡಗಲಿದ್ದಾರೆ.

ಸಣ್ಣಪುಟ್ಟ ಸಂಚಾರಿ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಸ್ವಯಂ ಪ್ರೇರಿತ (suo moto) ದೂರು ದಾಖಲಿಸಿಕೊಂಡು ಬೇಟೆಯಾಡುವ ಪೊಲೀಸರು ಅತ್ಯಾಚಾರ, ಅಪಹರಣ, ಕೋಟಿ ಲೂಟಿ ಪ್ರಕರಣಗಳಲ್ಲಿ ಸ್ವಯಂಪ್ರೇರಣೆ ಪಡೆಯುವುದಿಲ್ಲವೇಕೆ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಮನೆಯ ಕಸದಂತೆ ಮನದ ಕಸ ಗುಡಿಸಬೇಕು: ತ್ರಿಪುರಾಂತಕ ಅವರ ಲೇಖನ ಸಮಯೋಚಿತ

ಮಾನ್ಯರೆ,

ಇಂದು ಪ್ರತಿಯೊಬ್ಬರ ಮನಸ್ಸಿನಲ್ಲೂ ಎಷ್ಟೊಂದು ಕಸ ತುಂಬಿರುತ್ತದೆಂದರೆ, ಅದನ್ನು ಗುಡಿಸಲೇ ಸಾಧ್ಯವಿಲ್ಲ ಎನ್ನುವಷ್ಟು. ಯಾರಲ್ಲಿಯೂ ಸಂತೃಪ್ತಿ, ಸಮಾಧಾನ, ಸಂತೋಷ, ತೃಪ್ತಿ ಎಂಬುದೇ ಇಲ್ಲ. ಏನೇ ದೊರಕಿದರೂ ಇನ್ನೂ ಒಂದಿಷ್ಟು ಬೇಕು ಎನ್ನುವುದು, ತನ್ನನ್ನು ಪದೇ ಪದೆ ಇತರರೊಡನೆ ಹೋಲಿಸಿಕೊಳ್ಳುತ್ತ ಮನಸ್ಸಿನಲ್ಲಿ ಒಂದಿಷ್ಟು ಗೊಂದಲವನ್ನು ತುಂಬಿಕೊಂಡು ಬಿಡುತ್ತಾನೆ. ಯಾರಲ್ಲೂ ಯಾರಿಗೂ ನಂಬಿಕೆ, ವಿಶ್ವಾಸ ಎನ್ನುವುದೇ ಇಲ್ಲ. ಪ್ರತಿಯೊಂದನ್ನೂ ಸಂಶಯದಿಂದಲೇ ಕಾಣುತ್ತ ತನ್ನನ್ನು ತಾನೇ ಗೊಂದಲದಲ್ಲಿ ಸಿಲುಕಿಸಿಕೊಂಡು ಬಿಡುತ್ತಾನೆ. ಹೀಗಾಗಿ ಆತನ ಮನಸ್ಸು ಏನನ್ನೂ ಸಕಾರಾತ್ಮಕವಾಗಿ ಯೋಚಿಸುವ ಸ್ಥಿತಿಯಲ್ಲಿಯೇ ಇರುವುದಿಲ್ಲ. ಮನೆಯ ಕಸ ಕಣ್ಣಿಗೆ ಕಾಣುತ್ತದೆ. ಕಸ ಕಂಡಾಕ್ಷಣ ಗುಡಿಸಿಬಿಡಬಹುದು. ಅಲ್ಲಿಗೆ ಆ ಕೆಲಸ ಮುಗಿದಂತೆ. ಹೀಗಾಗಿ ಯಾವುದೇ ಗೊಂದಲ, ತಳಮಳ, ಕಸಿವಿಸಿ ಇರದು. ಅದೇ ಮನಸ್ಸಿನಲ್ಲಿ ಶೇಖರವಾಗುವ ಕಸ ಬರಿಗಣ್ಣಿಗೆ ಕಾಣದು ಎಂಬುದು ಒಂದೆಡೆಯಾದರೆ, ಅದು 'ಕಸ' ಅಂತ ತಿಳಿಯುವುದೇ ಇಲ್ಲ. ಹೀಗಾಗಿ ಅದನ್ನು ಸ್ವಚ್ಛಗೊಳಿಸಲೂ ಮುಂದಾಗುವುದಿಲ್ಲ. ಹೀಗಾಗಿ ಒಂದರ ನಂತರ ಒಂದು ಸೇರುತ್ತಲೇ ಇರುತ್ತದೆ. ಒಂದು ಹಂತದಲ್ಲಿ ಅದು ಗುಡಿಸಲೂ ಸಾಧ್ಯವಾಗದ ಮಟ್ಟ ತಲುಪುತ್ತದೆ. ಹೀಗಾಗಿ ಮನದ ಕಸ ಮನೆಯ ಕಸದಂತೆ ಗುಡಿಸುವುದು ಕಷ್ಟದ ಕೆಲಸ.

–ಶಂಕರನಾರಾಯಣ ಭಟ್, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಹೆಣ್ಣು ಭ್ರೂಣಗಳ ಹೃದಯ ಸಂವಾದ







> “‘ಮಕ್ಕಳಿರಲವ್ವ ಮನೆ ತುಂಬ’, ‘ಮಕ್ಕಳು ದೇವರು ಕೊಟ್ಟ ವರ’, ‘ಮಕ್ಕಳಾದರೆ ಕೇಡೆ, ಮಳೆಯಾದರೆ ಕೊಡೆ’ ಎನ್ನುವ ಮಕ್ಕಳಿಗೆ ಸಂಬಂಧಿಸಿದ ನಾಣ್ಣುಡಿಗಳೆಲ್ಲಾ ಓಬಿರಾಯನ ಕಾಲಕ್ಕೇ ಹೊರತು ನಮ್ಮ ಕಾಲಕ್ಕಲ್ಲ ಎಂಬಂತೆ ನಮ್ಮ ಕಾಲದ ಮನಃಸ್ಥಿತಿಯನ್ನು ಅಣಕಿಸುವಂತಾಗಿದೆ ನಮ್ಮ ನಾಣ್ನುಡಿಗಳು. ಲೋಕಕ್ಕೆ ಬೇಡವಾದ ಈ ಹೆಣ್ಣು ಸಂತಾನವನ್ನು ಉಳಿಸಿಕೊಳ್ಳುವಲ್ಲಿ ಸರ್ಕಾರಗಳು ಬಿಗಿ ಕಾನೂನುಗಳನ್ನು ರೂಪಿಸುತ್ತಿವೆ. ಎಷ್ಟೇ ಕಾನೂನು ಕಟ್ಟಳೆಗಳು ಬಂದರೂ ಮನುಷ್ಯನ ಅಂತ ರಂಗದಲ್ಲಿ ಹೆಣ್ಣಿನ, ಹೆಣ್ತನದ ಬಗ್ಗೆ ಆಂತರ್ಯದ ಮಮಕಾರ ಹುಟ್ಟದ ಹೊರತು ಪರಿಹಾರ ಕಷ್ಟ. ಕಾನೂನಿನ ನಿಷೇಧವಿದ್ದರೂ ಹೆಣ್ಣು ಭ್ರೂಣಗಳ ಗರ್ಭಪಾತ ಗೊತ್ತೂ ಗೊತ್ತಿಲ್ಲದಂತೆ ನಡೆಯುತ್ತಿದೆಯೆಂಬುದು ಸತ್ಯ.

ಅನುಕೂಲಸ್ಥರಾಗದೇ ಹೋದರೆ, ನೀವೇನೆ ಹೇಳಿ ಹೆಣ್ಣು ಹೆತ್ತವರ ದುಃಖ ಭೂಮಿಯ ತೂಕ. ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಪತ್ನಿಯಾಗಿ, ಗೆಳತಿಯಾಗಿ ಗಂಡಿನ ಸಾಲಂಕೃತ ಬದುಕನ್ನ ಒಪ್ಪ ಓರಣವಾಗಿ ಸಾರ್ಥಕಗೊಳಿಸಿದ ಜೀವ ಅದು. ಅಂಥಾ ಹೆಣ್ಣು ಮಕ್ಕಳ ಮೇಲೆ ಇಂದು ನೂರೆಂಟು ದೌರ್ಜನ್ಯಗಳು, ಕೊಲೆ, ಅತ್ಯಾಚಾರಗಳು ನಡೆದು ಪತ್ರಿಕೆಗಳ ನಿತ್ಯ ಸುದ್ದಿಯ ಕಾಲಮ್ಮುಗಳನ್ನು ತುಂಬಿಕೊಳ್ಳುತ್ತಿರುವ ವರ್ತಮಾನದ ವರದಿಗಳು ಮಾತ್ರ ಗಾಬರಿ ಹುಟ್ಟಿಸುತ್ತಿವೆ. ಆದರೆ ಇಂದು ಲೈಂಗಿಕ ದೌರ್ಜನ್ಯಗಳು ಹೆಣ್ಣು ಮಕ್ಕಳ ಬದುಕನ್ನ ಅತ್ಯಂತ ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದರೆ ಮತ್ತೊಂದು ಕಡೆ ಹುಟ್ಟುವ ಮುನ್ನವೇ ಹೆಣ್ಣು ಭ್ರೂಣಗಳನ್ನೇ ಹತ್ಯೆ ಮಾಡುವ ನಿರ್ದಯಿ ರಾಕ್ಷಸ ಕೂಟವೊಂದು ತಲೆಯೆತ್ತಿ ನಿಂತಿದೆ.

ಅತ್ಯಾಚಾರದಂತಹ ಮಹಿಳಾ ಪೀಡನೆ, ಮಹಿಳಾ ಶೋಷಣೆಯಂತಹ ನೋವುಗಳನ್ನು ದೊಡ್ಡವರಾದರೆ ಹೇಗೊ ನಿಭಾಯಿಸಿ ಬಿಡುವ, ತಡೆದುಕೊಳ್ಳುವ ಅಥವಾ ಪ್ರತಿಭಟಿಸುವ ಇಲ್ಲವೇ ತಾವೆ ಬಲಿಯಾಗಿ ಬಿಡುವ ಏನೋ ಒಂದಕ್ಕೆ ಶರಣಾಗಿ ಬಿಡುತ್ತಾರೆ. ಆದರೆ ಏನೂ ಅರಿಯದ ಕಂದಮ್ಮಗಳು, ಏನು ಮಾಡಬೇಕು ಹೇಳಿ? ಇದು ಮಕ್ಕಳನ್ನು ಕೊಲ್ಲುವ ಕಾಲ, ಅದರಲ್ಲೂ ತಾಯಿಯ ಹೊಟ್ಟೆಯಲ್ಲೇ ಹೆಣ್ಣು ಭ್ರೂಣಗಳನ್ನು ಕರಗಿಸಿ ನೀರಂತೆ ಹರಿಸುವ ರಾಕ್ಷಸೀ ಪ್ರವೃತ್ತಿಯ ಕಾಲ. ಇಂಥಾ ಪೈಶಾಚಿಕ ಕೃತ್ಯದ ಹೀನಾಯ ದೃಶ್ಯಗಳನ್ನು ನೋಡಬೇಕಾದ ದುಃಖದ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. ಇಂಥಾ ಕಳವಳಕ್ಕೆ ಕಾರಣವಾಗಿ ಕರುಳು ಕಿವುಚುವ ಪ್ರಸಂಗಗಳು ಈಗ ರಾಜ್ಯದಲ್ಲಿ ನಡೆಯುತ್ತಿವೆ.

ದೊಡ್ಡವರಷ್ಟೇ ಮಕ್ಕಳೂ ಕೂಡ ಟಾರ್ಗೆಟ್ ಆಗುತ್ತಿರುವ ಕಾಲವನ್ನ ನಾಗರಿಕ ಸಮಾಜವೊಂದು ನೋವು ನುಂಗಿ ನೋಡಿಕೊಳ್ಳಬೇಕಾದ ಸ್ಥಿತಿಯಲ್ಲಿದೆ. ಬಹಳ ವರ್ಷಗಳ ಹಿಂದೆ ವಾಮಾಚಾರದ ಬಲಿಗಾಗಿ ನಿಧಿಯ ಆಸೆ ಹುಟ್ಟಿಸಿದ ಮಾಂತ್ರಿಕನೊಬ್ಬ ಹೆಣ್ಣು ಮಗುವೊಂದನ್ನು ಅಪಹರಿಸಿ ತಂದು ಅದನ್ನು ಕೊಂದು ಹಾಕಿರುವ ಸುದ್ದಿಯನ್ನು ಇಲ್ಲಿ ಉಲ್ಲೇಖಿಸಬೇಕಿದೆ. ಆ ಮಗುವಿನ ವಯಸ್ಸು ಐದೂವರೆ ವರ್ಷ, ತುಂಬಾ ಮುದ್ದಾಗಿತ್ತು. ಅದು ಹೆಣ್ಣು ಮಗು. ದುಷ್ಕರ್ಮಿಗಳು ವಾಮಾಚಾರಕ್ಕಾಗಿ ಈ ಮಗುವನ್ನು ಅಪಹರಿಸಿದ್ದರು. ಈ ಮಗುವನ್ನು ಒಮ್ಮೆಲೇ ದೇವರಿಗೆ ಬಲಿ ಕೊಟ್ಟಿಲ್ಲ. ಪ್ರತಿದಿನವೂ ಆ ಬಾಲಕಿಯ ಒಂದೊಂದೇ ಬೆರಳನ್ನು ಕತ್ತರಿಸುತ್ತಾ 7 ದಿನಗಳ ಕಾಲ ಆಕೆಯ ರಕ್ತವನ್ನು ವಾಮಾಚಾರದ ಪೂಜೆಗೆ ಬಳಸಿದ್ದಾರೆ. ಹಸಿವು ಹಾಗೂ ನೋವಿನ ಯಮಯಾತನೆಯನ್ನು ತಾಳಲಾರದ ಮಗು ಜೀವ ಹಿಂಡುವ ಹಿಂಸೆಯಿಂದ ಪ್ರಾಣ ಬಿಟ್ಟಿದೆ. ಇದು ನಡೆದಿರುವುದು ಕರ್ನಾಟಕದ ಕೊಪ್ಪಳದಲ್ಲಿ.

ಮೈಸೂರಿನ 'ಭಾಗವದ್ಗೀತೆ' ವಿವಾದ, ಶಿವಮೊಗ್ಗದ ಕೋಮು ಗಲಭೆ, ರಾಜಕಾರಣದ 'ದಲಿತ ಮುಖ್ಯಮಂತ್ರಿ'ಯಂಥಾ ಪ್ರಮುಖ ಸುದ್ದಿಗಳ ನಡುವೆ ಕೊಪ್ಪಳದಲ್ಲಿ ಯಾರದೋ ಮನೆಯಲ್ಲಿ ಹುಟ್ಟಿದ ಆ ಮಗುವಿನ ಅರಣ್ಯ ರೋದನ ಹೆಣ್ಣು ಹೆತ್ತವರ ಎದೆಗೆ ಬೆಂಕಿ ಹಚ್ಚಿದೆ. ಅಂಕೆಶಂಕೆಯಿಲ್ಲದೆ ನಡೆಯುತ್ತಿರುವ ಶಿಶು ಹತ್ಯೆ, ಅದರಲ್ಲೂ ಹೆಣ್ಣುಮಕ್ಕಳ ಮೇಲಿನ ಪೈಶಾಚಿಕ ಕೃತ್ಯಗಳು ನಾಗರಿಕ ಸಮಾಜದ ನಿದ್ದೆಗೆಡಿಸಿದೆ. ಹಾಗಂತ ಇದೊಂದೇ ಪ್ರಕರಣವಲ್ಲ. ಇಂಥಾ ಸಾವಿರ ಸಾವಿರ ಪ್ರಕರಣಗಳ ಪೈಕಿ ಶಿಶುಹತ್ಯೆ, ಮಕ್ಕಳ ಹತ್ಯೆಗಳು ವರದಿಯಾಗುತ್ತಿವೆ. ಅವುಗಳ ಬಗ್ಗೆ ಬರೆದರೆ ಒಂದು ಸಾವಿರ ಪುಟ ಕೂಡ ಸಾಕಾಗುವುದಿಲ್ಲ. ಆ ವಾಮಾಚಾರಿಗಳು ರಕ್ತಕ್ಕಾಗಿ ದಿನವೂ ಒಂದೊಂದೇ ಬೆರಳುಗಳನ್ನು ಕತ್ತರಿಸುವಾಗ ಬೆರಳು ಕತ್ತರಿಸುವ ಆ ರಾಕ್ಷಸರಿಗೆ ಆ ಮಗು ಹೇಳುತ್ತಿತ್ತಂತೆ: 'ನನ್ನ ಅಪ್ಪ ಅಮ್ಮ ಹೇಳುತ್ತಿದ್ದರು ದೇವರು ತುಂಬಾ ಒಳ್ಳೆಯವರು ದಿನಾ ಕೈ ಮುಗಿಯಬೇಕು ಅಂತ. ನೀವು ನನ್ನ ಬೆರಳುಗಳನ್ನು ಕತ್ತರಿಸುತ್ತಿದ್ದೀರಲ್ಲ ದೇವರು ಮಕ್ಕಳ ರಕ್ತವನ್ನು ಕೇಳುತ್ತಾನ ಅಂತ!. ತುಂಬಾ ನೋವಾಗುತ್ತೆ ಸಾರ್ ಆ ಮಗುವಿನ ಪ್ರಶ್ನೆಗೆ ಉತ್ತರ ಹೇಳಿ please. ಏನು ಮಾಡೋದು ಹೇಳಿ' ಸೆರೆಸಿಕ್ಕ ಆ ಅಪರಾಧಿಗಳ ಬಾಯಲ್ಲಿ ಪೊಲೀಸರು ಸತ್ಯವನ್ನು ಬಾಯಿ ಬಿಡಿಸುವ ವೇಳೆಗೆ ಆ ಮಗು ತನ್ನ ಮುಗ್ಧ ಪ್ರಶ್ನೆಗಳ ಉತ್ತರಕ್ಕಾಗಿ ಕಾಯದೆ ಹೊರಟು ಹೋಗಿತ್ತು. ಈ ಪ್ರಸಂಗವನ್ನು ನೋಡಿ ಉಮ್ಮಳಿಸಿದ ದುಃಖಕ್ಕೆ ಯಾರದೋ ಮನೆಯ ಮಗು ಕೂಡ ನಮ್ಮ ಹೊಟ್ಟೆಯಲ್ಲೇ ಹುಟ್ಟಿದಂತೆ ನಾಟಿಬಿಟ್ಟಿತ್ತು.

ಹೀಗೆ ನಿಧಿ ಸಿಗುತ್ತದೆಂಬ ಆಸೆಗಾಗಿಯೋ, ಹಣಕ್ಕಾಗಿಯೋ, ಮಕ್ಕಳ ತಂದೆ–ತಾಯಂದಿರ ಮೇಲಿನ ದ್ವೇಷದಿಂದಲೋ, ಆ ಕ್ಷಣದ ಕಾಮ ದಾಹಕ್ಕೋ, ಆಡುತ್ತಿರುವ ಮಕ್ಕಳನ್ನು ಅಪಹರಿಸಿ ಸಂಹರಿಸುವುದು ಯಾವ ನ್ಯಾಯ? ಕೊಲೆಗಾರನಿಗೂ ಒಂದು ಮಾನವೀಯ ಅಂತಃಕರಣವಿರುತ್ತದೆಂದು ಆ ಕಾರಣಕ್ಕೇನೆ ಜಗತ್ಪ್ರಸಿದ್ಧ 'ಅರೇಬಿಯನ್ ನೈಟ್ಸ್'–ಎಂಬ ಕಥಾಗುಚ್ಛ ಹುಟ್ಟಿತೆಂಬುದು ತೀವ್ರ ಕುತೂಹಲಕಾರಿಯಾದ ವಿಷಯ.

ಕಥೆಗಳಲ್ಲಿ ಬರುವ ಕೇಡಿಗಳಿಗೂ ಕೂಡ ಕನಿಷ್ಠ ಮಟ್ಟದ ಅನುಕಂಪ, ಕುತೂಹಲಗಳಿರುತ್ತವೆ. ಆದರೆ ಈ ವಾಮಾಚಾರ, ಕಂದಾಚಾರಗಳ ಬೆನ್ನು ಹತ್ತಿದವರಿಗೆ, ಕಾಮ ಪಿಪಾಸುಗಳಿಗೆ ಜೀವ ತೆಗೆಯುವ, ದಾಹ ಬಿಟ್ಟರೆ ಬೇರೇನೂ ಕಾಣಿಸುವುದಿಲ್ಲ. ಅಂತಹದರಲ್ಲಿ ಹೆಣ್ಣು ಭ್ರೂಣಗಳನ್ನೇ ಗುರಿಯಾಗಿಸಿಕೊಂಡು ಹುಟ್ಟುವ ಮುನ್ನವೇ ಹೊಸಕಿಬಿಡುವ ಕುಕೃತ್ಯಗಳಿಗೆ ನಮ್ಮ ಯುಗ ಸಾಕ್ಷಿಯಾಗುತ್ತಿದೆ.

ಹತ್ಯೆ ಮಾಡುವವರಿಗೂ ಅನುಕಂಪವೊಂದಿತ್ತು ಎಂಬುದಕ್ಕೆ 'ಅರೇಬಿಯನ್ ನೈಟ್ಸ್' ಕಥೆಗಳೇ ಸಾಕ್ಷಿ. 'ಅರೇಬಿಯನ್ ನೈಟ್ಸ್'– ಆ ವೆರೈಟಿಯ ಕಥಾಸೃಷ್ಟಿ. ಇವತ್ತು 'ಅರೇಬಿಯನ್ ನೈಟ್ಸ್' ಕಥೆಗಳು ಜಗತ್ತಿನ ಎಲ್ಲ ದೇಶಗಳಲ್ಲಿ ಎಲ್ಲ ಭಾಷೆಗಳಲ್ಲಿ ಲಭ್ಯವಿದೆ. ಹೆಣ್ಣನ್ನು ಕೇವಲ ದೇಹ ಸುಖದ ಬಯಕೆಯಿಂದಲೇ ಅಪಹರಿಸಿ ಹೊತ್ತೊಯ್ದು ಆಕೆಯನ್ನು ಭೋಗಿಸಿ ನಂತರ ಕೊಂದು ಹಾಕುತ್ತಿದ್ದ ಕಾಮ ಪಿಶಾಚಿಯ ಕೈಯ್ಯಿಂದ ತಪ್ಪಿಸಿಕೊಂಡು ಬದುಕುಳಿದ ಹೆಣ್ಣುಮಗಳೊಬ್ಬಳ ಕಥೆ 'ಅರೇಬಿಯನ್ ನೈಟ್ಸ್'. ಈ ಪ್ರವೃತ್ತಿಯ ಕಾಮುಕನ ಕೈಗೆ 'ಶಹಜಾದೆ' ಎಂಬ ಸಂಸ್ಕಾರವಂತ ಹೆಣ್ಣು ಮಗಳೊಬ್ಬಳು ಸಿಕ್ಕಿ ಹಾಕಿಕೊಂಡು ಬಿಡುತ್ತಾಳೆ. ದಿನಕ್ಕೊಂದು ಮಹಿಳೆಯನ್ನು ಹಿಡಿದು ತಂದು ಆಕೆಯನ್ನು ಭೋಗಿಸಿ ನಂತರ ಅವಳನ್ನು ಕೊಂದು ಮಾರನೆಯ ದಿನದ ಬೇಟೆಗಾಗಿ ಮತ್ತೊಂದು ಹೆಣ್ಣನ್ನು ಹುಡುಕುವುದು ಅವನ ಚಾಳಿ. ಅದರಂತೆಯೇ ಶಹಜಾದೆಯನ್ನೂ ಕೊಲ್ಲಲು ಮುಂದಾಗುತ್ತಾನೆ. ಆದರೆ ಆಕೆಯ ಕೈಯ್ಯಲ್ಲಿ ಅವಳ ಹಸುಗೂಸಿರುತ್ತದೆ. ಆಕೆ ಆ ಕಿರಾತಕನ ಮುಂದೆ ಒಂದೇ ಒಂದು ಬೇಡಿಕೆಯಿಡುತ್ತಾಳೆ. ನನ್ನ ಮಗುವಿಗೆ ಕಡೆಯ ಬಾರಿ ಹಾಲುಣಿಸಿ ಬಂದು ಬಿಡುತ್ತೇನೆ ಅದಕ್ಕೊಂದು ಅವಕಾಶ ಕೊಡೆಂದು ಕೇಳಿಕೊಳ್ಳುತ್ತಾಳೆ. ಕಾಮದಾಹದಿಂದ ಕುದಿವ ಅವನು ಆಕೆಗೊಂದು ಕಡೆಯ ಅವಕಾಶ ಕೊಡುತ್ತಾನೆ. ಶಹಜಾದೆ ತನ್ನ ಮಗುವಿಗೆ ಹಾಲು ಕುಡಿಸುತ್ತಾ ಕುಡಿಸುತ್ತಾ ರೋಚಕವಾದ ಕತೆಯೊಂದನ್ನು ಹೇಳಲು ಶುರು ಮಾಡುತ್ತಾಳೆ. ಇವಳು ಬರುವವರೆಗೂ ಕಾಯುತ್ತಾ ಕುಳಿತ ಆ ಕಟುಕ ಕೂಡ ಟೈಂಪಾಸಿಗಾಗಿ ಆ ಕತೆಯನ್ನು ಕೇಳಿಸಿಕೊಳ್ಳುತ್ತಿರುತ್ತಾನೆ. ಕತೆ ಒಂದು ಮುಖ್ಯ ತಿರುವಿಗೆ ಅಂದರೆ ಕ್ಲೈಮ್ಯಾಕ್ಸಿಗೆ ಬಂದು ನಿಲ್ಲುತ್ತದೆ. ಆದರೆ ಅಷ್ಟೊತ್ತಿಗೆ ಶಹಜಾದೆಯ ಮಗು ಮಲಗಿಬಿಡುತ್ತದೆ. ಮಗು ಹಾಲು ಕುಡಿದು ಮಲಗಲೆಂದೇ ಕತೆ ಹೇಳಲು ಪ್ರಾರಂಭಿಸಿದ ಶಹಜಾದೆ ಕತೆಯನ್ನು ಅರ್ಧಕ್ಕೇ ನಿಲ್ಲಿಸಿ ಆ ಕಟುಕನ ಕಾಮದಾಹಕ್ಕೆ, ಆತನ ಬಲಿಪೀಠಕ್ಕೆ ಬಂದು ಬಿಡುತ್ತಾಳೆ. ಆದರೆ ಅಷ್ಟು ಹೊತ್ತು ಆ ಕಟುಕ ಶಹಜಾದೆ ಹೇಳಿದ ಕತೆ ಕೇಳಿಸಿಕೊಂಡು ಬಿಟ್ಟಿದ್ದ. ಅವನಲ್ಲಿ ಆ ಕತೆಯ ಬಗ್ಗೆ ಕುತೂಹಲ ಸೃಷ್ಟಿಯಾಗಿಬಿಟ್ಟಿತ್ತು. ಆ ಕಥೆಯ ಕ್ಲೈಮ್ಯಾಕ್ಸ್‌ನಲ್ಲಿ ಏನಿದೆ ಅಂತ ತಿಳಿಯುವ ಹಠ ಹುಟ್ಟಿಬಿಟ್ಟಿತ್ತು. ಇವಳನ್ನು ಭೋಗಿಸಿ ಕೊಂದುಬಿಟ್ಟರೆ ಆ ಕತೆಯ ಕ್ಲೈಮ್ಯಾಕ್ಸ್ ಇವಳ ಜೊತೆಯೇ ಸತ್ತು ಹೋಗುತ್ತದೆ. ಆದ್ದರಿಂದ ಆ ಕತೆಯ ಕ್ಲೈಮ್ಯಾಕ್ಸ್ ಕೇಳಿಸಿಕೊಂಡೇ! ತನ್ನ ಕುತೂಹಲ ತಣಿಸಿಕೊಂಡೇ! ಆಕೆಯನ್ನು ಕೊಲ್ಲಲು ನಿರ್ಧರಿಸಿದ. ಎಂದಿನಂತೆ ತನ್ನ ರಕ್ಕಸ ದನಿಯಲ್ಲಿ ಅಬ್ಬರಿಸಿದ 'ಏ ಎಲ್ಲಿ ನೀನು ನಿನ್ನ ಮಗುವಿಗೆ ಹೇಳುತ್ತಿದ್ದೆಯಲ್ಲ ಆ ಕತೆಯನ್ನು ಮುಂದುವರಿಸು'–ಎಂದ. ಶಹಜಾದೆ ಕತೆಯ ಮುಂದುವರಿದ ಭಾಗವನ್ನು ಹೇಳಲು ಪ್ರಾರಂಭಿಸಿದಳು.

ಒಂದು ರಾತ್ರಿ ಕಳೆಯಿತು ಎರಡು ರಾತ್ರಿ ಕಳೆಯಿತು, ಮೂರು ರಾತ್ರಿ ಕಳೆಯಿತು, ನಾಲ್ಕು ರಾತ್ರಿ ಕಳೆಯಿತು, ಐದು ರಾತ್ರಿ ಕಳೆಯಿತು ಕಡೆಗೆ ಕತೆ ಹೇಳುತ್ತಲೇ ಬರೋಬ್ಬರಿ ಸಾವಿರದ ಒಂದು ರಾತ್ರಿಗಳನ್ನು ಅವಳು ಜೀವಂತವಾಗಿ ಕಳೆದು ಉಳಿದು ಬಿಟ್ಟಳು. ಕಾರಣ ಆ ಕಟುಕನಿಗೆ ಕತೆಯ ಕ್ಲೈಮ್ಯಾಕ್ಸ್ ತಲೆಕೆಡಿಸಿದೆ ಎಂದು ಶಹಜಾದೆಗೆ ಗೊತ್ತಾಗಿ ಹೋಗಿತ್ತು. ಹಾಗೆ ಗೊತ್ತಾದ ಕೂಡಲೇ ಆಕೆ ಆ ಕತೆಯ ಕ್ಲೈಮ್ಯಾಕ್ಸ್‌ಅನ್ನು ಆ ಕ್ಷಣಕ್ಕೆ ಹೇಳದೆ ಮುಂದಕ್ಕೆ ಹಾಕುತ್ತಾ ಹೋಗುತ್ತಾಳೆ. ಹಾಗೆ ಮಾಡುವಾಗ ಕತೆಗೆ ಕತೆ, ಕತೆಗೆ ಕತೆ ಸೇರಿಸಿ ಕತೆಯನ್ನು ಲಂಬಿಸಿ ಉದ್ದ ಮಾಡುತ್ತಾಳೆ. ಆ ಕತೆಗಳ ಸಂಖ್ಯೆ 1001 ಆಗುತ್ತದೆ. ಶಹಜಾದೆ ಆ ಕಟುಕನಿಗೆ ಹೇಳಿದ ಆ ಕಥೆಗಳೇ ಇವತ್ತು ಜಗತ್ಪ್ರಸಿದ್ಧ 'ಅರೇಬಿಯನ್ ನೈಟ್ಸ್' ಕಥೆಗಳು.

ಲಂಕೇಶ್ ಕೂಡ ಒಮ್ಮೆ ತಮ್ಮ ಟೀಕೆ–ಟಿಪ್ಪಣಿಯಲ್ಲಿ ಈಕೆಯನ್ನು ನೆನೆಸಿಕೊಂಡು ಬರೆದದ್ದು ನನಗೆ ನೆನಪಿದೆ. ಅಂದರೆ ಕಳ್ಳಕಾಕರಿಗೂ, ಕಾಮಪಿಶಾಚಿಗಳಿಗೂ, ಕಥನ ಕುತೂಹಲಗಳಿದ್ದವಲ್ಲ ಅವು ಜಗತ್ಪ್ರಸಿದ್ಧವಾಗುತ್ತವಲ್ಲ ಎಂಥ ವಿಚಿತ್ರ ನೋಡಿ! ಆದರೆ ನಮ್ಮ ಕಾಲದ ಮಕ್ಕಳ ಹಂತಕರ ಮೇಲೆ ಅವುಗಳು ಕೇಳುವ ಪ್ರಶ್ನೆಗಳು, ಅವು ಅತ್ತು ಕರೆದು ಬದುಕಲು ಹೋರಾಡುವ ಪ್ರಯತ್ನಗಳು, ಅವುಗಳ ಮುಗ್ಧತೆ ಯಾವುದೇ ಚಿಕ್ಕ ಪರಿಣಾಮಗಳನ್ನೂ ಬೀರುತ್ತಿರಲಿಲ್ಲವಲ್ಲ?

ನಾವು ಬದುಕುತ್ತಿರುವ ಕಾಲದಲ್ಲಿ ಮಹಿಳೆಯರ ಬಗ್ಗೆ, ಮಕ್ಕಳ ಬಗ್ಗೆ ದೊಡ್ಡ ದೊಡ್ಡ ವಿಚಾರಗಳೇ ಚರ್ಚೆಯಾಗುತ್ತಿವೆ. ಭಾರತ ಸರ್ಕಾರವಂತೂ 'ಮಗಳನ್ನು ಓದಿಸಿ–ಮಗಳನ್ನು ರಕ್ಷಿಸಿ' ಯೋಜನೆಯನ್ನೇ ರೂಪಿಸಿ ಜಾಹೀರಾತುಗಳ ಮೂಲಕ ಜನಹಿತಕ್ಕಾಗಿ ಜಾರಿಯೆಂಬ ಸ್ಲೋಗನ್ನಿನೊಂದಿಗೆ ಪ್ರಚಾರ ಮಾಡುತ್ತಿದೆ. ಮಹಿಳೆಯರನ್ನು ಮಕ್ಕಳನ್ನು ಸಂರಕ್ಷಿಸಲು ಕಾನೂನುಗಳಿವೆ, ಕಾಯಿದೆಗಳಿವೆ, ಆಯೋಗಗಳಿವೆ. ಆದರೆ ಅವರ ಉಳಿವಿಗೆ ಸುಯೋಗಗಳಿಲ್ಲ.

ಟಿವಿಗಳಲ್ಲಿ, ಮಾಧ್ಯಮಗಳಲ್ಲಿ ಅದ್ಭುತ ಸಾಧನೆ ಮಾಡಿದ ಕೆಲವೇ ಹೆಣ್ಣುಮಕ್ಕಳನ್ನು ತೋರಿಸಿ ಇಡೀ ಮಹಿಳಾ ಸಂಕುಲ ಸುರಕ್ಷಿತವಾಗಿದೆ, ಪ್ರಕಾಶಿಸುತ್ತಿದೆ ಎನ್ನುವ ಮಾತುಗಳನ್ನೆಲ್ಲಾ ಅಣಕಿಸುವಂತೆ ಇಂದಿನ ವಿದ್ಯಮಾನಗಳು ನಡೆಯುತ್ತಿವೆ. ಹೆಣ್ಣು ಹುಟ್ಟಿದ ನಂತರದಲ್ಲಿನ ಸಮಸ್ಯೆಗಳು ಹೀಗಾದರೆ ಹುಟ್ಟುವ ಮುನ್ನವೇ ಭ್ರೂಣಹತ್ಯೆಯಂಥಾ ಸಾಮಾಜಿಕ ಪಾಪಕ್ಕೆ ಬಲಿಯಾದ ಕಂದಮ್ಮಗಳ ಕಥೆ ಹೇಳತೀರದು. ಅದಕ್ಕಾಗಿ ರಾಜ್ಯ ಸರ್ಕಾರ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿನ ಸ್ಕ್ಯಾನಿಂಗ್ ಪ್ರಕ್ರಿಯೆಯನ್ನು ಕೇಂದ್ರೀಕೃತ ವ್ಯವಸ್ಥೆಗೆ ಒಳಪಡಿಸುವಲ್ಲಿ ಯಶಸ್ವಿಯಾಗಿದೆ.

ಬಹಳ ವರ್ಷಗಳ ಹಿಂದೆ ಕಲ್ಬುರ್ಗಿ ಜಿಲ್ಲೆಯ ಕೊಂಚಾವರಂ ಲಂಬಾಣಿ ತಾಂಡಾದಲ್ಲಿ ಹೆಣ್ಣು ಶಿಶು ಜನಿಸಿದರೆ ಸೂಲಗಿತ್ತಿಯರೆ ಮಗುವಿನ ಕತ್ತು ಹಿಸುಕಿ ಹತ್ಯೆ ಮಾಡುತ್ತಿದ್ದ ಆಘಾತಕಾರಿ ಸುದ್ದಿಯೊಂದು ವರದಿಯಾಗಿತ್ತು. ಸೂಲಗಿತ್ತಿ ಮಗುವನ್ನು ಕೊಲ್ಲದೇ ಹೋದರೇ ತಾಯಿಯೇ ಆ ಹೆಣ್ಣು ಶಿಶುವಿಗೆ ವಾರಗಟ್ಟಲೆ ಎದೆ ಹಾಲು ಕುಡಿಸದೆ ಉಪವಾಸ ಕೆಡವಿ ಸಾಯುವಂತೆ ಮಾಡುತ್ತಾಳೆಂದು ಅಧ್ಯಯನದ ವರದಿ ಮಾಡಿರುವ ಅರ್ಥಶಾಸ್ತ್ರಜ್ಞೆ ಪ್ರೊ. ಛಾಯಾ ದೇಗಾಂವ್‌ಕರ್ ಹೇಳಿದ ಸತ್ಯ ಗಾಬರಿ ಹುಟ್ಟಿಸುತ್ತಿತ್ತು. ಇವರಿಗೆ ಕಿತ್ತು ತಿನ್ನುವ ಬಡತನದ ನಡುವೆ ಹೆಣ್ಣು ಶಿಶು ಬೇಡವಾಗುತ್ತಿತ್ತು. ಇನ್ನು, ಹೆಣ್ಣು ಹೆತ್ತು ಮಾರಿ ಬಿಡೋಣವೆಂದರೆ ಪೊಲೀಸರ ವಿಚಾರಣೆ, ಮಾಧ್ಯಮಗಳ ಮುಂದೆ ಅವಮಾನ ಇತ್ಯಾದಿಗಳಿಗೆ ಹೆದರಿ ಹುಟ್ಟಿದ ನವಜಾತ ಶಿಶುಗಳನ್ನು ಅಲ್ಲೇ ಕಮರಿಸಿ ಬಿಡುವ ಕೆಲಸಗಳು ನಡೆಯುತ್ತಿದ್ದವು ಎಂಬುದಾಗಿ ಅಧ್ಯಯನಗಳು ವರದಿ ಮಾಡಿವೆ.

'ಮಕ್ಕಳಿರಲವ್ವ ಮನೆ ತುಂಬ', 'ಮಕ್ಕಳು ದೇವರು ಕೊಟ್ಟ ವರ', 'ಮಕ್ಕಳಾದರೆ ಕೇಡೆ, ಮಳೆಯಾದರೆ ಕೊಡೆ' ಎನ್ನುವ ಮಕ್ಕಳಿಗೆ ಸಂಬಂಧಿಸಿದ ನಾಣ್ಣುಡಿಗಳೆಲ್ಲಾ ಓಬಿರಾಯನ ಕಾಲಕ್ಕೇ ಹೊರತು ನಮ್ಮ ಕಾಲಕ್ಕಲ್ಲ ಎಂಬಂತೆ ನಮ್ಮ ಕಾಲದ ಮನಃಸ್ಥಿತಿಯನ್ನು ಅಣಕಿಸುವಂತಾಗಿದೆ ನಮ್ಮ ನಾಣ್ನುಡಿಗಳು. ಲೋಕಕ್ಕೆ ಬೇಡವಾದ ಈ ಹೆಣ್ಣು ಸಂತಾನವನ್ನು ಉಳಿಸಿಕೊಳ್ಳುವಲ್ಲಿ ಸರ್ಕಾರಗಳು ಬಿಗಿ ಕಾನೂನುಗಳನ್ನು ರೂಪಿಸುತ್ತಿವೆ. ಎಷ್ಟೇ ಕಾನೂನು ಕಟ್ಟಳೆಗಳು ಬಂದರೂ ಮನುಷ್ಯನ ಅಂತರಂಗದಲ್ಲಿ ಹೆಣ್ಣಿನ, ಹೆಣ್ತನದ ಬಗ್ಗೆ ಆಂತರ್ಯದ ಮಮಕಾರ ಹುಟ್ಟದ ಹೊರತು ಪರಿಹಾರ ಕಷ್ಟ, ಕಾನೂನಿನ ನಿಷೇಧವಿದ್ದರೂ ಹೆಣ್ಣು ಭ್ರೂಣಗಳ ಗರ್ಭಪಾತ ಗೊತ್ತೂಗೊತ್ತಿಲ್ಲದಂತೆ ನಡೆಯುತ್ತಿದೆಯೆಂಬುದು ಸತ್ಯ. ಅದಕ್ಕೆ ಇಂಬುಕೊಟ್ಟಂತೆ 1971ರಲ್ಲಿ ಲಿಂಗಾನುಪಾತ 964 ಇದ್ದದ್ದು ಕಳೆದ ಐದು ವರ್ಷಗಳಲ್ಲಿ 929ಕ್ಕೆ ಇಳಿದಿದೆ. ಒಂದು ಕಡೆ ನಮ್ಮ ಅಭಿವೃದ್ಧಿಯು ಏರುಮುಖದಲ್ಲಿದ್ದರೆ ಹೆಣ್ಣು ಮಕ್ಕಳ ಜನನದ ಸಂಖ್ಯೆ ಕ್ಷೀಣಿಸುತ್ತಿದೆ. ವಿಶ್ವಸಂಸ್ಥೆ ಇದನ್ನು 'ರಾಷ್ಟ್ರೀಯ ತುರ್ತು ಪರಿಸ್ಥಿತಿ' ಅಂತ ಕರೆದಿದೆ.

ಹರಿಯಾಣದ ಪಾಣಿಪತ್‌ನಲ್ಲಿ ಪ್ರಧಾನಿ ತಮ್ಮ ಭಾಷಣದಲ್ಲಿ ಕಳವಳ ವ್ಯಕ್ತಪಡಿಸಿ, 'ಬೇಟಿ ಬಚಾವೊ ಬೇಟಿ ಪಡಾವೊ' ಎಂದು ಆಗ್ರಹಿಸಿದ್ದು, ಮುಂದೆ ಅದು ಸರ್ಕಾರದ ಒಂದು ಯೋಜನೆಯಾಗಿಯೇ ರೂಪುಗೊಂಡಿರುವುದು ಸುಳ್ಳೇನಲ್ಲ. ಇದು ಇಂದು ನಿನ್ನೆಯದಲ್ಲ. 1871ರಲ್ಲೇ ಬ್ರಿಟೀಷರು ಜನಗಣತಿ ನಡೆಸಿದರು. 1000 ಪುರುಷರಿಗೆ 940 ಮಹಿಳೆಯರಿರುವ ಸತ್ಯ ಆಗಲೇ ತಿಳಿದು ಹೋಗಿತ್ತು. ನೆರೆಯ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ 1000 ಪುರುಷರಿಗೆ 1040, 1200 ಮಹಿಳೆಯರಿರುವ ಸಂಗತಿಗಳಿವೆ. ಆದರೆ ನಮ್ಮಲ್ಲಿ ಹಾಗಾಗುತ್ತಿಲ್ಲ. ಇತ್ತೀಚೆಗೆ ಸುಪ್ರೀಂಕೋರ್ಟ್ ಕೂಡ ಹೆಣ್ಣು ಭ್ರೂಣ ಹತ್ಯೆಯ ವಿಷಯದಲ್ಲಿ ಅಸಹಾಯಕತೆ, ಅಸಮರ್ಥತೆಯನ್ನು ಪ್ರದರ್ಶಿಸಕೂಡದೆಂದು ಸರ್ಕಾರಕ್ಕೆ ನಿರ್ದೇಶನ ಮಾಡಿದೆ. 1996ರ ಜನವರಿ 1ರಂದೇ ರಾಷ್ಟ್ರಾದ್ಯಂತ ಹೆರಿಗೆಗೆ ಮುನ್ನ ಲಿಂಗ ಪತ್ತೆ ಮಾಡುವ ತಂತ್ರಜ್ಞಾನ ದುರ್ಬಳಕೆ ಆಗದಂತೆ ಪಿ.ಎನ್.ಡಿ.ಟಿ. ಕಾಯಿದೆಯನ್ನು ಜಾರಿಗೆ ತರಲಾಗಿದೆ. ಇದೆಲ್ಲದರ ಜೊತೆಗೆ ವರ್ತಮಾನದ ಎಲ್ಲ ಸಮಸ್ಯೆಗಳಿಗೂ ಪ್ರತಿಕ್ರಿಯಿಸುವ ಸಂಘ ಸಂಸ್ಥೆಗಳು, ಸಾರ್ವಜನಿಕರು, ಇದನ್ನೊಂದು ಜಾಗೃತಿಯಾಗಿ ರೂಪಿಸಬೇಕು, ಕಲಾವಿದರು, ಸಾಂಸ್ಕೃತಿಕ ಲೋಕ ಸಾಧ್ಯವಾದರೆ ಬೀದಿನಾಟಕ, ಸಾಕ್ಷ್ಯಚಿತ್ರ, ಸಂವಾದಗಳನ್ನು ಏರ್ಪಡಿಸಿ ಜನಾಂದೋಲನ ಸೃಷ್ಟಿಸಬೇಕು.

ಯತ್ರ ನಾರ್ಯಂತೋ ಪೂಜ್ಯಂತೇ ರಮಂತೇ ತತ್ರ ದೇವತಃ

ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂದು ಭಾಷಣ ಕುಟ್ಟುವುದನ್ನು ಬಿಟ್ಟು ವಾಸ್ತವಿಕವಾಗಿ ಆಗಬೇಕಾದ ಹೆಣ್ಣುಭ್ರೂಣಗಳ ಸುರಕ್ಷತೆಯ ಕಡೆಗೆ ಕಣ್ಣು ಹಾಯಿಸಿದರೆ ಭಾರತದ ಅಭಿವೃದ್ಧಿಯ ದರ ಏರಿದಂತೆ, ಲಿಂಗಾನುಪಾತವೂ ಸರಿಸಮನಾಗಿ ಹೊಂದಾಣಿಕೆಯಾಗುತ್ತದೆ. ಇದಕ್ಕಾಗಿ ಸ್ವತಃ ದೊಡ್ಡ ದೊಡ್ಡ ಅಧಿಕಾರದಲ್ಲಿರುವ ಮಹಿಳೆಯರು, ಮಹಿಳಾ ರಾಜಕಾರಣಿಗಳು, ಮಹಿಳಾ ಉದ್ಯಮಿಗಳು, ಪ್ರಭಾವಿ ವಲಯದಲ್ಲಿ ಕೆಲಸ ಮಾಡುತ್ತಿರುವ ನಟಿಯರು, ಒಟ್ಟಾರೆ ಅನುಕೂಲಸ್ಥ, ವಿಚಾರಪೂರ್ಣ ಸಂವೇದನಾಶೀಲ ಮಹಿಳೆಯರು ಹಾಗೂ ಸಭ್ಯ ನಾಗರಿಕ ಸಾಮಾಜದ ಜವಾಬ್ದಾರಿ ಹೊತ್ತ ಎಲ್ಲರೂ ಇತ್ತ ನಿಗಾ ವಹಿಸಬೇಕಾದ ತುರ್ತು ಅಗ್ಯವಿದೆ. ಹಾಗಾದಾಗ ಮಾತ್ರ ನಮ್ಮ ಸರ್ವಜ್ಞ ಹೇಳಿದ ಹಾಗೆ

ಹೆಣ್ಣಿನಿಂದಲೇ ಇಹವು । ಹೆಣ್ಣಿನಿಂದಲೇ ಪರವು।
ಹೆಣ್ಣಿನಿಂದಲೇ ಸಕಲ ಸಂಪದವು,
ಹೆಣ್ಣೊಲ್ಲ ।ದಣ್ಣಗಳು ಯಾರು? ಸರ್ವಜ್ಞ

ಎಂಬಂತಾಗುತ್ತದೆ. ಅದಾಗದಿದ್ದರೆ, `born to succeed' ಎಂಬ ಪದಕ್ಕೆ ಅರ್ಥವೇ ಇರುವುದಿಲ್ಲ. ನಾವು 'ಹುಟ್ಟಿರುವುದೇ ನಮ್ಮ ಮೊದಲ ವಿಜಯ' ಎನ್ನುವುದು ಹೆಣ್ಣು ಭ್ರೂಣಗಳಿಗೆ ಅನ್ವಯಿಸುವುದೇ ಇಲ್ಲ. Born ಎಂಬ ಪದ ಕಿವಿಗೆ ಬೀಳುವ ಮುನ್ನವೇ popcorn ಥರಾ ಉದುರಿ ಹೋಗುತ್ತಿರುವ ಹೆಣ್ಣು ಭ್ರೂಣಗಳ ತಡೆಗೆ ನಿಮ್ಮ ಮಮಕಾರವೂ ಬೇಕು. ಏನಂತೀರಿ?

ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿಗೆ ಹುಟ್ಟುಹಬ್ಬದ ಸಂಭ್ರಮ



ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ, ಗ್ರಾಪಂ ಮಾಜಿ ಸದಸ್ಯರೂ ಆದ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಅವರ ಹುಟ್ಟುಹಬ್ಬಕ್ಕೆ ಗ್ರಾಮದ ಯಜಮಾನರಾದ ಮಲ್ಲುಗೌಡ, ಜಯರಾಮು, ಮಂಜುನಾಥ್ ಪ್ರಸಾದ್, ಸತೀಶ್, ಚೆಟ್ಟಿ ಹುಂಡಿ ಸುನಿಲ್, ಸಿದ್ದರಾಜು, ಶಿವಕುಮಾರ್, ತೋಷಿತ್ ರಾಮಸ್ವಾಮಿ, ವೈದಿಕ್ ಎಸ್ ಕುಮಾರ್ ಶುಭಾಶಯ ಕೋರಿದರು.

ನಾಳೆ ವಿಶ್ವ ಪರಿಸರ ದಿನಾಚರಣೆ

ಮೈಸೂರು, ಜೂ.3– ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ 2024ರ ವಿಶ್ವ ಪರಿಸರ ದಿನಾಚರಣೆ ಸಮಾರಂಭವನ್ನು ಜೂ.5ರಂದು ಬೆಳಗ್ಗೆ 11 ಗಂಟೆಗೆ ಟೌನ್‌ಹಾಲ್‌ನ ದೊಡ್ಡ ಗಡಿಯಾರ ಹತ್ತಿರದಲ್ಲಿ ಆಯೋಜಿಸಲಾಗಿದೆ. ಹಾಗೆಯೇ ಜೂ.1 ರಂದು ನಡೆದ ಚಿತ್ರಕಲಾ ಪ್ರಬಂಧ ಹಾಗೂ ಸಮೂಹ ಪರಿಸರ ಗೀತೆ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದು ನಗರದ ಪ್ರಾಕ-1ನ ಪರಿಸರ ಅಧಿಕಾರಿ ಪ್ರಕಟಣೆಯಲ್ಲಿ ಪತ್ರಿಕಾ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಜೂ.7ರಿಂದ ಮೈ ರಿಯಾಲಿಟಿ ಶೋ

ಮೈಸೂರು,ಜೂ.3(ಎಂಟಿವೈ)– ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಜೂ.7ರಿಂದ 10ರವರೆಗೆ ರಿಯಲ್ ಎಸ್ಟೇಟ್ ಎಕ್ಸ್ ಪೋ 'ಮೈ ರಿಯಾಲಿಟಿ 2024' ಆಯೋಜಿಸಲಾಗಿದೆ ಎಂದು ರಿಯಾಲಿಟಿ ಶೋ ಸಮಿತಿ ಅಧ್ಯಕ್ಷ ಕೆ.ಎನ್.ರವಿಶಂಕರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ, ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ಸ್ ಆಫ್ ಇಂಡಿಯಾ ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮೈ ರಿಯಾಲಿಟಿ ಶೋ ಏರ್ಪಡಿಸಲಾಗಿದೆ. ಈ ಪ್ರದರ್ಶನವು ರಿಯಲ್ ಎಸ್ಟೇಟ್‌ನಲ್ಲಿ ಇತ್ತೀಚಿನ ಟ್ರೆಂಡ್‌ಗಳು, ನಾವೀನ್ಯತೆಗಳು ಮತ್ತು ಅವಕಾಶಗಳನ್ನು ಒಳಗೊಂಡಿದೆ. ಇದು ವಿಶೇಷ ಪ್ರದರ್ಶನವಾಗಿದ್ದು, ಉದ್ಯಮ ತಜ್ಞರು, ಹೂಡಿಕೆದಾರರಿಗೆ, ಮನೆ ಖರೀದಿದಾರರಿಗೆ ಇದು ಅತ್ಯುತ್ತಮವಾದ ಪ್ರದರ್ಶನವಾಗಿದೆ. ಈ 4 ದಿನದ ಎಕ್ಸ್‌ಪೋ ಬೆಳಗ್ಗೆ 10ರಿಂದ ಸಂಜೆ 8 ರವರೆಗೆ ತೆರೆದಿರುತ್ತದೆ. ರೂ. 20 ಪ್ರವೇಶ ಶುಲ್ಕ ನಿಗದಿಪಡಿಸಲಾಗಿದ್ದು, ಖರೀದಿದಾರರು, ಹೂಡಿಕೆದಾರರಿಗೆ ಈ ಎಕ್ಸ್‌ಪೋ ಉತ್ತಮ ಮಾಹಿತಿ ಒದಗಿಸಲಿದೆ. ಕಳೆದ 16 ವರ್ಷದಿಂದ ಪ್ರದರ್ಶನವನ್ನು ಆಯೋಜಿಸಲಾಗುತ್ತಿದ್ದು, 17ನೇ ಆವೃತ್ತಿ ಎಕ್ಸ್‌ಪೋ ಆಕರ್ಷಣೀಯವಾಗಿದೆ ಎಂದರು.

ಇದು ಸಾರ್ವಜನಿಕ ಸ್ನೇಹಿ ಕಾರ್ಯವಾಗಿದ್ದು, ಪ್ರದರ್ಶನದಲ್ಲಿ ಪ್ಲಾಟಿನಂ, ಗೋಲ್ಡ್, ಸಿಲ್ವರ್ ಮತ್ತು ರೆಗ್ಯುಲರ್ ಎಂಬ 4 ಘಟಕಗಳ ಸ್ಟಾಲ್‌ಗಳನ್ನು ನಿರ್ಮಿಸಲಾಗಿದೆ. 30ಕ್ಕೂ ಹೆಚ್ಚು ಪ್ರದರ್ಶಕರು ಭಾಗವಹಿಸಲಿದ್ದಾರೆ. ಎಲ್ಲಾ ರಿಯಲ್ ಎಸ್ಟೇಟ್ ಡೆವಲಪರ್‌ಗಳು, ಪ್ರಮೋಟರ್‌ಗಳು ಮತ್ತು ಬ್ಯಾಂಕ್‌ಗಳನ್ನು ಒಂದೇ ಸೂರಿನಡಿ ಸೇರಿಸುವ ಪ್ರಯತ್ನ ಇಲ್ಲಿ ನಡೆಯಲಿದೆ. ಮಾಹಿತಿಗೆ ಮೊ. 9739837888 ಹಾಗೂ 9844277284 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಕ್ರೆಡಾಯ್ ಘಟಕದ ಅಧ್ಯಕ್ಷ ಡಿ.ಶ್ರೀಹರಿ, ಪ್ರಧಾನ ಕಾರ್ಯದರ್ಶಿ ಅರುಣ್ ಪಂಡಿತ್, ಅಶ್ವಿನ್ ಪಾಳೇಗಾರ್ ಮತ್ತು ಬಿಎಐನ ಪ್ರಧಾನ ಕಾರ್ಯದರ್ಶಿ ಪ್ರಭಾಕರ್, ಎ.ಎಸ್.ಯೋಗನರಸಿಂಹ ಇದ್ದರು.

ಸಚಿವ ಬೋಸರಾಜ್, ಡಾ.ಯತೀಂದ್ರ, ಸಿ.ಟಿ.ರವಿ ಸೇರಿ 11 ಮಂದಿ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಅವಿರೋಧ ಆಯ್ಕೆ ಖಚಿತ


ಮಾಜಿ ಶಾಸಕ ಡಾ.ಯತೀಂದ್ರ ನಾಮಪತ್ರ ಸಲ್ಲಿಸಿದರು.


ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.

ಬೆಂಗಳೂರು, ಜೂ. 3(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ, ಸಚಿವ ಎನ್.ಎಸ್. ಬೋಸರಾಜ್, ಬಿಲ್ಕಿಸ್ ಬಾನು, ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಜೆಡಿಎಸ್‌ನ ಟಿ.ಎನ್.ಜವರಾಯಿಗೌಡ ಸೇರಿದಂತೆ 11 ಮಂದಿ ವಿಧಾನಪರಿಷತ್ತಿಗೆ ಅವಿರೋಧ ಆಯ್ಕೆಯಾಗುವುದು ಖಚಿತವಾಗಿದೆ.

ವಿಧಾನಸಭೆಯಿಂದ ಪರಿಷತ್ತಿನ 11 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕಡೆಯ ದಿನವಾದ ಇಂದು ಮೂರು ರಾಜಕೀಯ ಪಕ್ಷಗಳು ತಮ್ಮ ಸಂಖ್ಯಾಬಲದ ಮೇಲೆ ಗೆಲುವು ಸಾಧ್ಯವಿರುವಷ್ಟು ಅಭ್ಯರ್ಥಿಗಳನ್ನಷ್ಟೇ ಕಣಕ್ಕಿಳಿಸಿರುವುದರಿಂದ ನಾಮಪತ್ರ ಸಲ್ಲಿಸಿರುವ ಅಷ್ಟು ಮಂದಿಯೂ ಅವಿರೋಧ ಆಯ್ಕೆ ಆಗಲಿದ್ದಾರೆ.

ಆಡಳಿತಾರೂಢ ಕಾಂಗ್ರೆಸ್‌ಗೆ ಸಂಖ್ಯಾಬಲದ ಮೇಲೆ ಏಳು ಸ್ಥಾನಗಳು ದಕ್ಕಲಿದ್ದು ಈ ಸ್ಥಾನಗಳಿಗೆ ಬೋಸರಾಜು, ಯತೀಂದ್ರ, ಕೆ.ಗೋವಿಂದರಾಜು, ಐವಾನ್ ಡಿಸೋಜ, ಬಿಲ್ಕಿಸ್ ಬಾನು, ಜಗದೇವ್ ಗುತ್ತೇದಾರ್ ಹಾಗೂ ವಸಂತ ಕುಮಾರ್ ಪಕ್ಷದ ಅಭ್ಯರ್ಥಿಗಳಾಗಿ ಚುನಾವಣಾಧಿಕಾರಿಯೂ ಆಗಿರುವ ವಿಧಾನ ಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾ ಲಾಕ್ಷಿ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಪ್ರತಿಪಕ್ಷ ಬಿಜೆಪಿಗೆ ಮೂರು ಸ್ಥಾನ ದಕ್ಕಲಿದ್ದು ಆ ಸ್ಥಾನಗಳಿಗೆ ಸಿ.ಟಿ.ರವಿ, ಎನ್.ರವಿಕುಮಾರ್, ಎಂ.ಜಿ. ಮುಳೆ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದರು. ಇನ್ನೊಂದು ಸ್ಥಾನ ಜೆಡಿಎಸ್‌ಗೆ ದಕ್ಕುತ್ತಿದ್ದು, ಆ ಪಕ್ಷದ ಹಿರಿಯ ಮುಖಂಡ ಟಿ.ಎನ್.ಜವರಾಯಿಗೌಡ ನಾಮಪತ್ರ ಸಲ್ಲಿಸಿದ್ದಾರೆ.

ನಾಮಪತ್ರ ಪರಿಶೀಲನೆ ಜೂನ್ 4ರಂದು ನಡೆಯಲಿದ್ದು, ನಾಮಪತ್ರ ಹಿಂತೆಗೆದುಕೊಳ್ಳಲು ಜೂನ್ 6 ಕಡೆಯ ದಿನ. ಅಂದೇ ಚುನಾವಣಾಧಿಕಾರಿ ಅಧಿಕೃತವಾಗಿ ಜಯಗಳಿಸಿದವರ ಹೆಸರು ಘೋಷಿಸಲಿದ್ದಾರೆ.

ಯಾವುದೇ ರಾಜಕೀಯ ಪಕ್ಷ ತಮಗಿಲ್ಲದ ಮತ ಕಸಿಯಲು ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದಿರುವುದರಿಂದ ಅವಿರೋಧ ಆಯ್ಕೆಗೆ ರಹದಾರಿ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಸಚಿವರುಗಳು ತಮ್ಮ ಪಕ್ಷದ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಖುದ್ದು ಹಾಜರಿದ್ದರು.

ಜವರಾಯಿಗೌಡ ನಾಮಪತ್ರ ಸಲ್ಲಿಸುವಾಗ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ್, ಕೋಟಾ ಶ್ರೀನಿವಾಸ ಪೂಜಾರಿ, ಮಾಜಿ ಮುಖ್ಯಮಂತ್ರಿ ಸದಾನಂದಗೌಡ ತಮ್ಮ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಹಾಜರಿದ್ದರು.

'ವೇಣು ಬ್ರಹ್ಮ' ಪ್ರಶಸ್ತಿ ಪ್ರದಾನ


ಮೈಸೂರಿನ ನಾದಬ್ರಹ್ಮ ಸಭಾಂಗಣದಲ್ಲಿ ಹಿರಿಯ ಕಲಾವಿದ ವಿದ್ವಾನ್ ಹೆಚ್.ಎಸ್.ವೇಣುಗೋಪಾಲ್ ಅವರಿಗೆ ವಿದ್ವಾನ್ ಟಿ.ಆರ್.ಮಹಾಲಿಂಗಂ ಸ್ಮರಣಾರ್ಥ ಈ ಸಾಲಿನ 'ವೇಣು ಬ್ರಹ್ಮ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜೂ. 3(ಎಸ್‌ಪಿಎನ್)– ಹಿರಿಯ ಕಲಾವಿದ ವಿದ್ವಾನ್ ಹೆಚ್.ಎಸ್. ವೇಣುಗೋಪಾಲ್ ಅವರಿಗೆ ವಿದ್ವಾನ್ ಟಿ.ಆರ್.ಮಹಾಲಿಂಗಂ ಸ್ಮರಣಾರ್ಥ ಈ ಸಾಲಿನ 'ವೇಣು ಬ್ರಹ್ಮ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಭಾಂಗಣದಲ್ಲಿ ನಾದಬ್ರಹ್ಮ ಸಂಗೀತ ಸಭಾ ಹಾಗೂ ವಿದ್ವಾನ್ ಟಿ.ಆರ್.ಮಹಾಲಿಂಗಂ ಸಂಸ್ಮರಣಾ ವೇದಿಕೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಕಲಾಪೋಷಕ ಟಿ.ಆರ್.ಹರೀಶ್ ನೀಡಿ, ಗೌರವಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿದ್ವಾನ್ ಹೆಚ್.ಎಸ್.ವೇಣುಗೋಪಾಲ್, ಟಿ.ಆರ್. ಮಹಾಲಿಂಗಂ ಅವರು, ತಮ್ಮ ಏಳನೇ ವಯಸ್ಸಿನಲ್ಲಿ ಮೊದಲ ಸಂಗೀತ ಕಛೇರಿ ನಡೆಸಿಕೊಟ್ಟಿದ್ದರು. ಹೊಸಹೊಸ ರಾಗ ಸಂಯೋಜನೆಯಲ್ಲಿ ಕೊಳಲು ವಾದನ ನುಡಿಸಿ ಪ್ರೇಕ್ಷಕರ ಸೆಳೆಯವಲ್ಲಿ ಯಶಸ್ವಿಯಾಗಿದ್ದರು. ಇವರ ಸಂಗೀತ ಸಾಧನೆಗೆ ಹಲವು ಸಂಘ–ಸಂಸ್ಥೆಗಳು ಗುರುತಿಸಿ ಸನ್ಮಾನಿಸಿವೆ ಎಂದರು.

ಅದೇ ರೀತಿ ಕೇಂದ್ರ ಸರ್ಕಾರವೂ ಟಿ.ಆರ್.ಮಹಾಲಿಂಗಂ ಅವರಿಗೆ ಸಂಗೀತ ಕ್ಷೇತ್ರದ ಸಾಧನೆಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು, ವಿದೇಶದಲ್ಲೂ ಸಂಗೀತ ಕಛೇರಿ ನಡೆಸಿಕೊಟ್ಟು ಭಾರತೀಯ ಪರಂಪರೆಗೆ ಮೆರಗು ತಂದಿದ್ದರು. ಅಂತಹವರ ಹೆಸರಿನಲ್ಲಿ ನನ್ನನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ ಎಂದರು. ವೇದಿಕೆಯಲ್ಲಿ ನಾದಬ್ರಹ್ಮ ಸಂಗೀತ ಸಭಾದ ಕೆಎಸ್‌ಎನ್ ಪ್ರಸಾದ್ ಸೇರಿದಂತೆ ಅನೇಕರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 3–ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಿದೆ. ರಾಮಕೃಷ್ಣನಗರದ ವಾರ್ಡ್ ಸಂಖ್ಯೆ 58ರ ನಿವಾಸಿಗಳ ಯಾವುದೇ ಶಾಲೆಯ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಈ ಪುರಸ್ಕಾರದ ಫಲಾನುಭವಿಗಳಾಗಿರುತ್ತಾರೆ. ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಜೂ.16ರ ಭಾನುವಾರ ಬೆಳಗ್ಗೆ 10 ಗಂಟೆಗೆ ರಮಾಗೋವಿಂದ ರಂಗಮಂದಿರದಲ್ಲಿ ಗಣ್ಯರ ಸಮ್ಮುಖದಲ್ಲಿ ನಡೆಯಲಿದೆ. ಅರ್ಹ ಹಾಗೂ ಆಸಕ್ತ ವಿದ್ಯಾರ್ಥಿಗಳು ತಮ್ಮ ಸ್ವವಿವರ ಅಂಕಪಟ್ಟಿ ಪ್ರತಿ ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಇದೇ ಜೂ.10ರೊಳಗೆ ಸೂರ್ಯ, ಎಲ್–26, ಕೆ ಬ್ಲಾಕ್, 6ನೇ ಬಿ ಮುಖ್ಯರಸ್ತೆ, ರಾಮಕೃಷ್ಣನಗರ, ಮೈಸೂರು22 ಇಲ್ಲಿಗೆ ಖುದ್ದಾಗಿ ಇಲ್ಲವೇ ಅಂಚೆ ಮುಖಾಂತರ ತಲುಪಿಸಬಹುದು. ಮಾಹಿತಿಗೆ 9964790442, 8310306882 ಸಂಪರ್ಕಿಸಬಹುದು.

ಮೆರವಣಿಗೆ, ಪ್ರಚೋದನಕಾರಿ ಭಾಷಣ ನಿಷಿದ್ಧ

ಮೈಸೂರು, ಜೂ.3– ಜೂ.4 ರಂದು ಲೋಕಸಭಾ ಸಾರ್ವತ್ರಿಕ ಚುನಾವಣೆಯ ಮತ ಎಣಿಕೆ ಕಾರ್ಯ ನಡೆಯಲಿದ್ದು, ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ಜೂ.3 ರ ಮಧ್ಯರಾತ್ರಿ 12 ಗಂಟೆಯಿಂದ ಜೂ.4 ಮಧ್ಯರಾತ್ರಿಯವರೆಗೆ ಕಲಂ 144 ರಡಿ ಕೆಳಕಂಡ ಷರತ್ತುಗಳನ್ನು ವಿಧಿಸಿ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಗಿದೆ.

ಈ ದಿನಗಳಂದು ಜಿಲ್ಲಾ ವ್ಯಾಪ್ತಿಯಲ್ಲಿ 5ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು ಮೆರವಣಿಗೆ ಅಥವಾ ಸಭೆ ಸಮಾರಂಭ ಜರುಗಿಸುವುದನ್ನು ನಿಷೇಧಿಸಲಾಗಿದ್ದು, ಗೆದ್ದ ಅಭ್ಯರ್ಥಿಗಳ ವಿಜಯೋತ್ಸವ ಮೆರವಣಿಗೆಯನ್ನು ನಿಷೇಧ ಪಟಾಕಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ವಾಸದ ಮನೆಗಳ ಮುಂದೆ ಸಿಡಿಸುವುದು ನಿಷೇಧ. ಯಾವುದೇ ವ್ಯಕ್ತಿ ತನ್ನೊಂದಿಗೆ ಸ್ಫೋಟಕ ವಸ್ತು ಮತ್ತು ಮಾರಕಾಸ್ತ್ರಗಳನ್ನು ಒಯ್ಯುವುದನ್ನು ನಿಷೇಧಿಸಿದ್ದು, ಯಾವುದೇ ಮೆರವಣಿಗೆಗೆ ನಡೆಸುವುದು ಹಾಗೂ ಪ್ರಚೋದನಕಾರಿ ಭಾಷಣ ಮಾಡುವುದನ್ನು ನಿಷೇಧಿಸಲಾಗಿದೆ. ಧ್ವನಿವರ್ಧಕ, ಡಿಜೆ ಉಪಯೋಗಿಸುವುದು ಮತ್ತು ಬೈಕ್ ರ್‍ಯಾಲಿ ನಡೆಸುವುದನ್ನು ನಿಷೇಧಿಸಲಾಗಿದೆ ಈ ನಿಷೇದಾಜ್ಞೆಯು ಮದುವೆ ಶವಸಂಸ್ಕಾರ ಕಾರ್ಯಗಳು ಧಾರ್ಮಿಕ ಕಾರ್ಯಗಳಿಗೆ ಮತ್ತು ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ನೇಮಿಸಲ್ಪಟ್ಟಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಹಾಗೂ ಚುನಾವಣಾ ಕಾರ್ಯನಿರತ ಅಧಿಕಾರಿಯ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ಡಾ.ಕೆ.ವಿ ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವ ಜಯಂತಿ ಕಾರ್ಯಕ್ರಮದ ವೇದಿಕೆ ನಿರ್ಮಾಣಕ್ಕೆ ಗುದ್ದಲಿಪೂಜೆ


ಮೈಸೂರಿನಲ್ಲಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮದ ವೇದಿಕೆ ನಿರ್ಮಾಣಕ್ಕೆ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಬಳಗದ ನಿಕಟಪೂರ್ವ ಅಧ್ಯಕ್ಷ ಹಡಜನ ಲಿಂಗರಾಜು, ಹಿನಕಲ್ ಬಸವರಾಜು, ಬ್ಯಾತಹಳ್ಳಿ ನಾಗರಾಜು, ದೂರ ಶಿವಕುಮಾರ್, ಸಕ್ಕಳ್ಳಿ ಮಹದೇವಸ್ವಾಮಿ, ಮೂಗೂರು ನಂಜುಂಡಸ್ವಾಮಿ, ಕಾರ್ಯದರ್ಶಿಗಳಾದ ಸ್ವಾಮಿ, ಶ್ರೀಮತಿ ಜಯ ಗೌಡರು, ಶ್ರೀಮತಿ ಮಲ್ಲಿಗೆ ವೀರೇಶ್ ಹಾಗೂ ಮುಖಂಡರು ಉಪಸ್ಥಿತರಿದ್ದರು.

ವಾಲ್ಮೀಕಿ ನಿಗಮದಿಂದ ಹಣ ಅಕ್ರಮ ವರ್ಗಾವಣೆ ಪ್ರಕರಣ

ಸಚಿವ ನಾಗೇಂದ್ರ ರಾಜೀನಾಮೆ ಕೇಳಿಲ್ಲ

ಬೆಂಗಳೂರು, ಜೂ. 3(ಕೆಎಂಶಿ)–ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ನಾಗೇಂದ್ರ ರಾಜೀನಾಮೆ ಕೇಳಿಲ್ಲ ಎಂದು



ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮಗೆ ಯಾರೂ, ಯಾವ ಬೆದರಿಕೆಯನ್ನು ಹಾಕಿಲ್ಲ, ಪ್ರಾಥಮಿಕ ವರದಿ ಪಡೆದು ನಂತರ ತೀರ್ಮಾನಿಸಲಾಗುವುದು ಎಂದರು.

ವಿಧಾನಸಭೆಯಿಂದ ವಿಧಾನಪರಿಷತ್ತಿನ 11 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ ಗೆಲುವಿಗೆ 19ರಿಂದ 20 ಮತಗಳ ಅಗತ್ಯವಿದ್ದು, ನಾಮಪತ್ರಗಳ ಪರಿಶೀಲನೆ ನಂತರ ಸ್ಪಷ್ಟ ಚಿತ್ರಣ ತಿಳಿಯಲಿದೆ, ಚುನಾವಣೆ ನಡೆದರೂ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆ ಎಂದರು. ಲೋಕಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆ ಒಪ್ಪಲು ಸಾಧ್ಯವಿಲ್ಲ, ಕರ್ನಾಟಕದಲ್ಲಿ ನಾವು ಕನಿಷ್ಠ 15 ಸ್ಥಾನಗಳನ್ನು ಗೆಲ್ಲುತ್ತೇವೆ, ಈ ಸಮೀಕ್ಷೆಯನ್ನು ನಾವು ಸಂಪೂರ್ಣ ತಳ್ಳಿಹಾಕುತ್ತೇವೆ ಎಂದರು.

ಬೆಂಗಳೂರಿನಲ್ಲಿ ಒಳ್ಳೆ ಮಳೆಯಾಗಿದ್ದು, ಮಳೆಗೆ ಸಂಬಂಧಿಸಿದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಈಗಾಗಲೇ ಸೂಚಿಸಲಾಗಿದೆ, ಮಳೆ ಜಾಸ್ತಿಯಾದಾಗ ಸಮಸ್ಯೆಗಳು ಉಂಟಾಗುತ್ತವೆ, ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.

ನ್ಯಾಯಮೂರ್ತಿಗಳಿಗೆ ಮನವಿ ಸಲ್ಲಿಕೆ


ಮೈಸೂರು ನಗರ ವಕೀಲರ ವಿವಿಧೋದ್ದೇಶ ಸಹಕಾರ ಸಂಘಕ್ಕೆ ಸಹಕಾರ ಭವನ ನಿರ್ಮಿಸಲು ಕಟ್ಟಡ ಅಥವಾ ಜಾಗವನ್ನು ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ನೀಡುವಂತೆ ಮೈಸೂರು ವಕೀಲರ ಸಂಘದಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ಮೈಸೂರು ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿಗೆ ಸಂಘದ ಅಧ್ಯಕ್ಷರಾದ ಬಿಎಸ್ ಚಂದ್ರಶೇಖರ ಮನವಿ ಸಲ್ಲಿಸಿದರು. ಸಂಘದ ನಿರ್ದೇಶಕರಾದ ಚಿನ್ನಸ್ವಾಮಿ ಮತ್ತಿತರರು ಇದ್ದಾರೆ.

ಗಳಿಕೆಯಲ್ಲಿ ಶೇ.20ರಷ್ಟನ್ನು ಸಮಾಜ ಸೇವೆಗೆ ಮೀಸಲಿಡಿ

ಅಲಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್ ಜಿಲ್ಲೆ–255 (ಎಸ್)ಪದಾಧಿಕಾರಿಗಳ ಪದಗ್ರಹಣದಲ್ಲಿ ಸಿರಿ ಸಂಭ್ರಮ–ಕನ್ನಡ ಗೀತೆಗಳ ಗಾಯನ



ಮೈಸೂರು, ಜೂ. 3– ಪ್ರತಿಯೊಬ್ಬರೂ ತಮ್ಮ ಗಳಿಕೆಯಲ್ಲಿ ಶೇ.20ರಷ್ಟನ್ನು ಸಮಾಜ ಸೇವೆಗೆ ಮೀಸಲಿಡಬೇಕು ಎಂದು ಅಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಅಧ್ಯಕ್ಷ ಸಿ.ಬಾಲಚಂದ್ರನ್ ಕರೆ ನೀಡಿದರು.

ನಗರದ ಹುಣಸೂರು ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ನಡೆದ ಅಲಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್ ಜಿಲ್ಲೆ–255 [ಎಸ್] ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಮೂಲಕ ಅಗತ್ಯವಿರುವವರಿಗೆ ಸಹಾಯಹಸ್ತ ಚಾಚಬೇಕು ಎಂದು ತಿಳಿಸಿದರು.

ಭಾರತೀಯರಿಂದಲೇ ಆರಂಭವಾದ ಮೊದಲ ಅಂತಾರಾಷ್ಟ್ರೀಯ ಕ್ಲಬ್ ಇದಾಗಿದ್ದು, ಈಗ ಬೇರೆ ಬೇರೆ ದೇಶಗಳಲ್ಲೂ ಘಟಕಗಳು ಆರಂಭವಾಗಿವೆ ಎಂದರು.

ಪದಾಧಿಕಾರಿಗಳ ಪದಗ್ರಹಣ ನೆರವೇರಿಸಿ ಮಾತನಾಡಿದ ಅಲಯನ್ಸ್ ಕ್ಲಬ್ ಸಂಸ್ಥಾಪಕ ತಿರುಪತಿ ರಾಜು, ಪ್ರತಿ ಕ್ಲಬ್‌ನಲ್ಲಿಯೂ ಮಕ್ಕಳ ಹಾಗೂ ಯುವ ಕ್ಲಬ್‌ಗಳನ್ನು ಆರಂಭಿಸಬೇಕು. ಆ ಮೂಲಕ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದರು.

ಅಲಯನ್ಸ್ 2ನೇ ಅಂತಾರಾಷ್ಟ್ರೀಯ ಅಧ್ಯಕ್ಷ ಡಾ.ಡಿಬಿಜಿ ಶಾಸ್ತ್ರಿ, ಸೌತ್ ಮಲ್ಟಿಪಲ್ ಕೌನ್ಸಿಲ್ ಚೇರ್ಮನ್ ಎಸ್. ರಾಜೇಂದ್ರನ್, ಅಂತಾರಾಷ್ಟ್ರೀಯ ನಿರ್ದೇಶಕ ರಾಜೇಶ್ವರ ರಾವ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು.

ನಾಗರಾಜ ವಿ.ಬೈರಿ ಪ್ರಾಸ್ತಾವಿಕ ಭಾಷಣ ಮಾಡಿ, ಸಿ.ಬಾಲಚಂದ್ರನ್ ಹಾಗೂ ತಿರುಪತಿರಾಜು ಅವರನ್ನು ಪರಿಚಯಿಸಿದರು. ಜಿಲ್ಲಾ ರಾಜ್ಯಪಾಲರನ್ನು ಎ.ಸಿ.ರವಿ ಪರಿಚಯಿಸಿದರು. ಅಲಯನ್ಸ್ ಕ್ಲಬ್ ಜಿಲ್ಲಾ ರಾಜ್ಯಪಾಲ ಬಾಲಕೃಷ್ಣ ರಾಜು– ಸಿರಿಬಾಲು ತಮ್ಮ ತಂಡವನ್ನು ಸಭೆಗೆ ಪರಿಚಯಿಸಿದರು. ಹಿಂದಿನ ಅಂತಾರಾಷ್ಟ್ರೀಯ ನಿರ್ದೇಶಕ ಜಿ.ಪಿ.ದಿವಾಕರ್, ಕಮಿಟಿ ಚೇರ್ಮನ್ನರಾದ ಕೆ.ಎಂ.ಮುನಿಯಪ್ಪ, ಅಜಂತ ರಂಗಸ್ವಾಮಿ, ಪ್ರಥಮ ಜಿಲ್ಲಾ ಉಪರಾಜ್ಯಪಾಲ ಎಸ್.ವೆಂಕಟೇಶ್, 2ನೇ ಜಿಲ್ಲಾ ಉಪರಾಜ್ಯಪಾಲ ಮಹಬಲೇಶ್ವರ ಭೈರಿ, 3ನೇ ಜಿಲ್ಲಾ ಉಪರಾಜ್ಯಪಾಲ ಎಂ.ಎಸ್. ಸಂತೋಷ್‌ಕುಮಾರ್, ಹಿಂದಿನ ಜಿಲ್ಲಾ ರಾಜ್ಯಪಾಲ ಜಿ.ಎಸ್.ನಂಜುಂಡಸ್ವಾಮಿ, ಪಿಆರ್‌ಓ ಎನ್.ಬೆಟ್ಟೇಗೌಡ ವಿಶೇಷ ಆಹ್ವಾನಿತರಾಗಿದ್ದರು. ಶೋಭಾ ಸಿರಿಬಾಲು ಇದ್ದರು. ಸುನೀತಾ ಬಿ.ಗೌಡ, ಉಷಾ ನಂದಿನಿ, ಭಾರ್ಗವಿ, ಸರಸ್ವತಿ, ರಮ್ಯಾ ರವಿ, ಸುನಿಲ್‌ಕುಮಾರ್, ಜಿ.ಶ್ರೀನಿವಾಸ್, ವಿ.ವೆಂಕಟೇಶ್, ವೆಂಕಟರಮಣಪ್ಪ, ವೆಂಕಟ ಸುಬ್ಬರಾವ್, ಲಕ್ಷ್ಮಿದೇವಿ, ಶ್ರೀಕಾಂತ್, ಶಶಿಕುಮಾರ್, ಮರಿಶೆಟ್ಟಿ, ಮಹದೇವಪ್ಪ, ಎಂ.ಎನ್.ಚಂದ್ರಶೇಖರ್, ನಂದೀಶ್, ರವಿ, ಪುಟ್ಟಸ್ವಾಮಿ, ಡಾ.ಚೇತನ, ಡಾ.ಕಿರಣ್‌ಕುಮಾರ್, ಗೀತಾ ವೇಣು, ಎಸ್‌ಬಿಎಂ ರಾವ್, ಶಂಕರ್, ಶ್ವೇತಾ ದಿನೇಶ್, ಆಕಾಶ್ ಭೈರಿ, ಪಿ.ಎಸ್.ವಾಲೇಕರ್, ದೇವರತ್ನ, ರೇಖಾ, ನಿರಂಜನ್, ಶಿವಣ್ಣ, ಶೇಖರ್, ಡಾ.ರಾಜು, ಎ.ಸಿ. ರವಿ, ಕಿರಣ್‌ಕುಮಾರ್ ಇಂದಿರಾ ವೆಂಕಟೇಶ್, ಡಾ.ಕೃಷ್ಣಪ್ಪ, ಡಾ.ಬಿ.ಎನ್. ರವೀಶ್, ಚೇತನಕುಮಾರ್, ಕಿರಣ್‌ಕುಮಾರ್, ಕೇತ್ರಪಾಲ್, ಲಕ್ಷ್ಮೀರಾಜು ಉಪಸ್ಥಿತರಿದ್ದರು.

ಎಂ.ಕಾಂ ವಿದ್ಯಾರ್ಥಿನಿ ಸಹನಾ ಮಾಚಯ್ಯರಿಗೆ ಅಭಿನಂದನೆ

ಮೈಸೂರು, ಜೂ. 3– ಮೈಸೂರಿನ ಎಂಎಂಕೆ ಮತ್ತು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ ಸ್ನಾತಕೋತ್ತರ ದ್ವಿತೀಯ ಎಂ.ಕಾಂ. ವಿದ್ಯಾರ್ಥಿನಿ ಸಹನಾ ಮಾಚಯ್ಯ ಅವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ 2023ರ ಕೆಸೆಟ್ ರಾಜ್ಯಮಟ್ಟದ ಅರ್ಹತಾ ಪರೀಕ್ಷೆಯಲ್ಲಿ ಸಾಮಾನ್ಯ ವರ್ಗದಲ್ಲಿ (ಜಿ.ಎಂ.) ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.


ಸಹನಾ ಮಾಚಯ್ಯ ಅವರನ್ನ ಪ್ರಾಂಶುಪಾಲರು ಅಭಿನಂದಿಸಿದರು.

ಎನ್.ಎಸ್.ತಾರಾನಾಥರಿಗೆ ಚಿದಾನಂದ ಪ್ರಶಸ್ತಿ



ಮೈಸೂರು, ಜೂ. 3–ಹಿರಿಯ ವಿದ್ವಾಂಸ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ತಾರಾನಾಥ್ ಅವರು 2024ನೇ ಸಾಲಿನ ಚಿದಾನಂದ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ವ್ಯಾಕರಣ, ಛಂದಸ್ಸು, ಶಾಸನಶಾಸ್ತ್ರ ಹಾಗೂ ತೌಲನಿಕ ಅಧ್ಯಯನಗಳ ಕ್ಷೇತ್ರಗಳಲ್ಲಿ ಸಲ್ಲಿಸಿರುವ ವಿಶಿಷ್ಟ ಸೇವೆಗಾಗಿ ಡಾ.ತಾರಾನಾಥ್ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿಯು ಖ್ಯಾತ ವಿದ್ವಾಂಸರಾದ ಡಾ.ಎಂ.ಚಿದಾನಂದಮೂರ್ತಿಯವರ ಹೆಸರಿನಲ್ಲಿ ಕಳೆದ 31 ವರ್ಷಗಳಿಂದ ಪ್ರತಿ ವರ್ಷ ಒಬ್ಬ ಸಂಶೋಧಕರಿಗೆ ಈ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಪ್ರಶಸ್ತಿಯು 10 ಸಾವಿರ ರೂ.ಗಳು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ.

ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಮೈಸೂರು ವಿವಿ ತಂಡ



2023–24ನೇ ಸಾಲಿನ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಪುರುಷರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯು ಮೇ 31ರಿಂದ ಜೂ.3ರವರೆಗೆ ಚೆನ್ನೈನ JEPPIAR ವಿಶ್ವವಿದ್ಯಾನಿಲಯದಲ್ಲಿ ನಡೆಯಿತು. ಈ ಪಂದ್ಯಾವಳಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪುರುಷರ ತಂಡ ಭಾಗವಹಿಸಿತ್ತು. ಚಿತ್ರದಲ್ಲಿ (ನಿಂತಿರುವವರು ಬಲದಿಂದ): ಚೇತನ್ ಎಸ್, ಸುವಾಸ್.ಎಂ, ರವಿಕಿರಣ್.ಎಂ, ಸೂರ್ಯ, ಚೇತನ್ ಕುಮಾರ್, ಚೇತನ್ ಜಿ.ಎಸ್, ಮನೋಜ್ ಕುಮಾರ್.ಬಿ.ಆರ್, ಪ್ರದೀಪ್ ಕುಮಾರ್ ಎನ್.ಎಂ, ಸಚಿನ್ (ಕುಳಿತಿರುವವರು) ಮಹೇಂದ್ರ.ಸಿ (ತರಬೇತುದಾರರು), ರಮೇಶ್ (ವ್ಯವಸ್ಥಾಪಕರು) ಡಾ.ಸಿ. ವೆಂಕಟೇಶ್, ನಿರ್ದೇಶಕರು, ದರ್ಶನ್.ಆರ್.ಸಿ (ನಾಯಕ)

ವಾಲ್ಮೀಕಿ ನಿಗಮದ ಹಗರಣ

ಆರೋಪಿಗಳ ಸಮ್ಮುಖದಲ್ಲಿ ಸ್ಥಳ ಮಹಜರು, ಮಹತ್ವದ ದಾಖಲೆ ಜಪ್ತಿ

ಬೆಂಗಳೂರು: ವಾಲ್ಮೀಕಿ ನಿಗಮದ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಗಮದ ಕಚೇರಿಗೆ ಇಬ್ಬರು ಆರೋಪಿಗಳನ್ನು ಕರೆದೊಯ್ದು ಎಸ್‌ಐಟಿ ಮಹಜರು ನಡೆಸಿದೆ.

ಸ್ಥಳ ಮಹಜರು ವೇಳೆ ಡಿಜಿಟಲ್ ಸಾಕ್ಷಿಗಳಿಗಾಗಿ ಎಸ್‌ಐಟಿ ಹುಡುಕಾಟ ನಡೆಸಿದ್ದು, ಈ ವೇಳೆ ಮಹತ್ವದ ದಾಖಲೆಗಳನ್ನು ಜಪ್ತಿಮಾಡಿದೆ. ಆರೋಪಿಗಳು ಬ್ಯಾಂಕ್‌ಗೆ ನೀಡಿದ್ದ ನಕಲಿ ಪತ್ರಗಳು, ನಕಲಿ ಸೀಲ್‌ಗಳನ್ನು, ಸಚಿವರ ಆಪ್ತರು ಕಚೇರಿಗೆ ಬಂದಾಗ ಸಹಿ ಮಾಡಿರುವ ನೋಂದಣಿ ಬುಕ್‌ನ್ನು ಎಸ್‌ಐಟಿ ಜಪ್ತಿ ಮಾಡಿದೆ ಡಿವೈಎಸ್ಪಿ ಅಂಜು ಮಾಲಾ ಅವರ ನೇತೃತ್ವದ ಎಸ್‌ಐಟಿ ಅಧಿಕಾರಿಗಳ ತಂಡ ನಿಗಮದ ಕಚೇರಿ ಮೇಲೆ ದಾಳಿ ಮಾಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರೊಬ್ಬರ ಆಪ್ತನಾದ ನೆಕ್ಕುಂಟಿ ನಾಗರಾಜ್ ಎಂಬಾತನನ್ನು ಎಸ್‌ಐಟಿ ವಶಕ್ಕೆ ಪಡೆದಿದೆ.

ಏನಿದು ಪ್ರಕರಣ: ವಾಲ್ಮೀಕಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಅವರು ಶಿವಮೊಗ್ಗದ ತಮ್ಮ ನಿವಾಸದಲ್ಲಿ ಡೆತ್ ನೋಟ್ ಬರೆದಿಟ್ಟು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ನಿಗಮದಲ್ಲಿ 85 ಕೋಟಿ ರೂ. ಹಗರಣ ನಡೆದಿದೆ, ಇದರಲ್ಲಿ ನನ್ನ ತಪ್ಪು ಏನೂ ಇಲ್ಲ ಎಂದು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ಬಹುಕೋಟಿ ಹಗರಣ ಪ್ರಕರಣದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ್ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ಅವರನ್ನು ಬಂಧಿಸಲಾಗಿತ್ತು. ಆರೋಪಿಗಳನ್ನು 6 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿ, ಎಸಿಎಂಎಂ ಕೋರ್ಟ್ ಆದೇಶಿಸಿತ್ತು. ವಾಲ್ಮೀಕಿ ನಿಗಮ ಹಗರಣ ಪ್ರಕರಣದ ಸಮಗ್ರ ತನಿಖೆ ನಡೆಸಲು ಸಿಐಡಿ ಆರ್ಥಿಕ ಅಪರಾಧಗಳ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಖರ್ಬೀಕರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ಸರ್ಕಾರ ರಚಿಸಿತ್ತು. ತಂಡ ರಚನೆಯಾದ ಎರಡು ಗಂಟೆಗಳಲ್ಲೇ ವಾಲ್ಮೀಕಿ ನಿಗಮದ ಎಂಡಿ ಪದ್ಮನಾಭ್ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ಅವರನ್ನ ಎಸ್‌ಐಟಿ ಬಂಧಿಸಿತ್ತು.

ರೇವ್ ಪಾರ್ಟಿ ಪ್ರಕರಣ: ನಟಿ ಹೇಮಾಗೆ 14 ದಿನಗಳ ನ್ಯಾಯಾಂಗ ಬಂಧನ



ಬೆಂಗಳೂರು: ರೇವ್ ಪಾರ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ದಿಕ್ಕು ತಪ್ಪಿಸುವ ಯತ್ನ ಮಾಡಿದ್ದ ಆರೋಪದ ಮೇಲೆ ತೆಲಗು ನಟಿ ಹೇಮಾ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಬಂಧನಕ್ಕೊಳಗಾದ ನಟಿಯನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ನಾಲ್ಕನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಮ್ ಎಫ್‌ಸಿ ನ್ಯಾಯಾಧೀಶರಾದ ಸಲ್ಮಾ ಎ.ಎಸ್ ಅವರಿದ್ದ ಪೀಠ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದೆ.

ಇತ್ತೀಚೆಗೆ ಡ್ರಗ್ಸ್ ಸೇವನೆಗೆ ಸಂಬಂಧಿಸಿದಂತೆ ಹೇಮಾ ರಿಪೋರ್ಟ್ ಪಾಸಿಟೀವ್ ಬಂದಿತ್ತು. ಈ ವೇಳೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೊದಲು ವಿಚಾರಣೆಗೆ ಹಾಜರಾಗುವಂತೆ ಅವರಿಗೆ ನೋಟಿಸ್ ನೀಡಲಾಗಿತ್ತು. ಆದರೆ ಅವರು ಅನಾರೋಗ್ಯದ ನೆಪ ಹೇಳಿ ವಿಚಾರಣೆಗೆ ಹಾಜರಾಗದೇ ಸಮಯಾವಕಾಶ ಕೇಳಿದ್ದರು. ಹಾಜರಾಗದ ಹಿನ್ನೆಲೆಯಲ್ಲಿ ಸಿಸಿಬಿ ಅಧಿಕಾರಿಗಳು 2ನೇ ನೋಟಿಸ್ ಕೂಡ ನೀಡಿದ್ದರು. ಇಂದು ಸಂಜೆ 4 ಗಂಟೆಗೆ ಬೆಂಗಳೂರಿಗೆ ಆಗಮಿಸಿರುವ ಅವರು ಬುರ್ಖಾ ತೊಟ್ಟು ಅಧಿಕಾರಿಗಳ ಮುಂದೆ ಹಾಜರಾಗಿದ್ದರು. ಈ ವೇಳೆ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಸಿಸಿಬಿ ಪೊಲೀಸರು ವಿಚಾರಣೆ ನಡೆಸುತ್ತಿದ್ದು, ಅವರು ಸಮರ್ಪಕ ಉತ್ತರ ನೀಡಿಲ್ಲ. ಅವರನ್ನು ಕೆಸಿ ಜನರಲ್ ಆಸ್ಪತ್ರೆಗೆ ಮೆಡಿಕಲ್ ಟೆಸ್ಟ್‌ಗಾಗಿ ಪೊಲೀಸರು ಕರೆದೊಯ್ದಿದ್ದಾರೆ. ವೈದ್ಯರು ನಟಿ ಹೇಮಾ ಅವರ ಹೇರ್ ಸ್ಯಾಂಪಲ್ ಸಂಗ್ರಹಿಸಿದ್ದಾರೆ. ಅಲ್ಲದೇ ಅವರಿಗೆ ಜ್ವರ ಇರುವ ಹಿನ್ನೆಲೆ ಚಿಕಿತ್ಸೆ ನೀಡಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 4 ಜೂನ್ 2024

ಇಂದು ಲೋಕಸಭಾ ಚುನಾವಣಾ ಮತ ಎಣಿಕೆಗೆ ಜಿಲ್ಲಾಡಳಿತ ಸಜ್ಜು

ಗೆಲುವಿನ ಮಾಲೆ ಕುಮಾರಸ್ವಾಮಿಗೋ, ಸ್ಟಾರ್‌ಚಂದ್ರುಗೋ ಎಂಬ ಬಗ್ಗೆ ಜಿಲ್ಲೆಯಲ್ಲಿ ಹೆಚ್ಚಿದ ಕುತೂಹಲ

ಮಂಡ್ಯ, ಜೂ.3– ಕಳೆದ ಒಂದೂವರೆ ತಿಂಗಳ ಹಿಂದೆ ನಡೆದಿದ್ದ ಮಂಡ್ಯ ಲೋಕಸಭಾ ಚುನಾವಣೆಯ ಫಲಿತಾಂಶ ಮಂಗಳವಾರ ಪ್ರಕಟವಾಗಲಿದ್ದು, ಮತ ಎಣಿಕೆಗೆ ಜಿಲ್ಲಾಡಳಿತ ಸಕಲ ರೀತಿಯಲ್ಲೂ ಸಜ್ಜುಗೊಂಡಿದ್ದು, ಇತ್ತ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಗೆಲ್ಲಲಿದ್ದಾರೋ ಅಥವಾ ಕಾಂಗ್ರೆಸ್‌ನ ಸ್ಟಾರ್ ಚಂದ್ರು ಗೆಲ್ಲಲಿದ್ದಾರೋ ಎಂಬ ಬಗ್ಗೆ ಜಿಲ್ಲೆಯ ಜನರಲ್ಲಿ ಕುತೂಹಲ ಗರಿಗೆದರಿದೆ.

ನಗರದ ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಚುನಾವಣಾ ಮತ ಎಣಿಕೆ ನಡೆಯಲಿದ್ದು, ಬೆಳಿಗ್ಗೆ 7ಗಂಟೆಗೆ ಸ್ಟ್ರಾಂಗ್ ರೂಂ ತೆರೆಯಲಿದೆ. ಬಳಿಕ ಎಂಟು ಗಂಟೆಯಿಂದ ಮತ ಎಣಿಕೆ ನಡೆಯಲಿದ್ದು, ಜಿಲ್ಲಾಡಳಿತ ಅಂತಿಮ ಸಿದ್ಧತೆಯನ್ನು ಮುಗಿಸಿದೆ. ಇಂದು ಮತ ಎಣಿಕೆ ನಡೆಯುವ ಮಂಡ್ಯ ವಿವಿಗೆ ಚುನಾವಣಾ ವೀಕ್ಷಕ ನೀರಜ್‌ಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್, ಎಸ್ಪಿ ಎನ್.ಯತೀಶ್ ಸೇರಿದಂತೆ ಪ್ರಮುಖ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಮತ ಎಣಿಕೆ ನಡೆಯುವ ಮಂಡ್ಯ ವಿವಿಗೆ ಜಿಲ್ಲಾಧಿಕಾರಿ ಡಾ.ಕುಮಾರ ಭೇಟಿ ನೀಡಿದರು.

ಎಣಿಕಾ ಕೇಂದ್ರದ ಬಳಿ ಬ್ಯಾರಿಕೇಟ್, ಕಂಬಗಳನ್ನು ಕಟ್ಟಿ ಎಲ್ಲಾ ರೀತಿ ಸಿದ್ಧತೆಗೊಳಿಸಿದ್ದು, ನೂರಾರು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಚುನಾವಣಾಧಿಕಾರಿಗಳು, ಸಿಬ್ಬಂದಿಗಳು, ಪತ್ರಕರ್ತರು ಹಾಗೂ ಏಜೆಂಟ್‌ಗಳನ್ನು ಹೊರತುಪಡಿಸಿ ಉಳಿದವರಿಗೆ ಮತ ಎಣಿಕಾ ಕೇಂದ್ರದ ಒಳಗೆ ಪ್ರವೇಶ ನಿಷೇಧಿಸಲಾಗಿದೆ. ಏಜೆಂಟ್‌ಗಳು ಮೊಬೈಲ್‌ನ್ನು ಕೇಂದ್ರದ ಒಳಗೆ ತೆಗೆದುಕೊಂಡು ಹೋಗಲು ನಿರ್ಬಂಧಿಸಲಾಗಿದ್ದು, ಎಲ್ಲರಿಗೂ ಸಹ ಗುರುತಿನ ಚೀಟಿ ವಿತರಣೆ ಮಾಡಲಾಗಿದೆ.

ಎಣಿಕಾ ಕೇಂದ್ರಕ್ಕೆ ನಿಯೋಜಿಸಲಾಗಿರುವ ಚುನಾವಣಾ ಸಿಬ್ಬಂದಿಗಳು ಮಂಗಳವಾರ ಬೆಳಿಗ್ಗೆ 5 ಗಂಟೆಯ ವೇಳೆಗೆ ಮತ ಎಣಿಕಾ ಕೇಂದ್ರಕ್ಕೆ ಬಂದು ತಮ್ಮ ನಿರ್ದಿಷ್ಟ ಜಾಗದಲ್ಲಿ ಕಾರ್ಯನಿರ್ವಹಿಸಲು ಸನ್ನದ್ಧರಾಗಬೇಕಾಗಿದ್ದು, ಇದಕ್ಕಾಗಿ ಜಿಲ್ಲಾಧಿಕಾರಿ ಡಾ. ಕುಮಾರ, ಎಡಿಸಿ ನಾಗರಾಜು ಸೇರಿದಂತೆ ಜಿಲ್ಲೆಯ ಪ್ರಮುಖ ಅಧಿಕಾರಿಗಳ ನೇತೃತ್ವದಲ್ಲಿ ಹಲವು ಬಾರಿ ಸಭೆಗಳನ್ನು ನಡೆಸಲಾಗಿದೆ.


ಮುಡಿಕೊಟ್ಟ ಹೆಚ್‌ಡಿಕೆ ಅಭಿಮಾನಿ: ಮಂಡ್ಯ ನಗರದ ಗುತ್ತಲು ಬಡಾವಣೆಯ ಲಿಂಗೇಗೌಡ ಎಂಬ ಕುಮಾರಸ್ವಾಮಿ ಅಭಿಮಾನಿಯೊಬ್ಬರು ಹೆಚ್‌ಡಿಕೆ ಗೆದ್ದಾಗಿದೆ ಎಂದು ಮುಡಿ ಕೊಟ್ಟಿದ್ದಾರೆ. ನಗರದ ಅರ್ಕೇಶ್ವರ ದೇಗುಲದಲ್ಲಿ ದೇವರಿಗೆ ಮುಡಿ ಸಮರ್ಪಿಸಿದ ಲಿಂಗೇಗೌಡ, ಕುಮಾರಸ್ವಾಮಿ ಗೆದ್ದರೆ ಮುಡಿಕೊಡುವೆ ಎಂದು ಹರಕೆ ಹೊತ್ತಿದ್ದೆ. ಆದರೆ ಸಮೀಕ್ಷಾ ವರದಿಗಳು ಹಾಗೂ ಜನರ ಮಾತುಗಳನ್ನು ಕೇಳಿದರೆ ಈಗಾಗಲೇ ಹೆಚ್ಡಿಕೆ ಗೆದ್ದಾಗಿದ್ದು, ಈ ನಿಟ್ಟಿನಲ್ಲಿ ಮುಡಿ ಸಮರ್ಪಿಸಿದ್ದೇನೆ. ನಾಳೆ ಹೆಚ್ಡಿಕೆ ಎಷ್ಟು ಲೀಡ್ ಪಡೆಯಲಿದ್ದಾರೆ ಎಂಬ ಕುತೂಹಲವಿದ್ದು, ಅವರು ಪ್ರಧಾನಿ ಸಂಪುಟದಲ್ಲಿ ಮಂತ್ರಿಯಾಗಲಿದ್ದಾರೆ ಎಂದು ಭವಿಷ್ಯ ನುಡಿದರು.

ಗೆಲುವಿನ ಮಾಲೆ ಯಾರಿಗೆ?: ಪ್ರತಿ ಬಾರಿಯೂ ಹೈವೋಲ್ಟೇಜ್ ರಣಕಣವಾಗುವ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅಖಾಡಕ್ಕಿಳಿದ್ದರೆ ಕಾಂಗ್ರೆಸ್‌ನಿಂದ ಉದ್ಯಮಿ ಸ್ಟಾರ್ ಚಂದ್ರು (ವೆಂಕಟರಮಣೇಗೌಡ) ಸ್ಪರ್ಧಿಸಿದ್ದರು. ಇಬ್ಬರ ನಡುವೆ ತುರುಸಿನ ಪ್ರಚಾರ ನಡೆದಿತ್ತು. ಎರಡು ಪಕ್ಷದ ಅಭ್ಯರ್ಥಿಗಳು ತಾವೇನು ಕಡಿಮೆ ಇಲ್ಲ ಎಂಬಂತೆ ಚುನಾವಣೆಯನ್ನು ಮಾಡಿದ್ದು, ಗೆಲುವು ಯಾರಿಗೆ ಎಂಬುದು ಕುತೂಹಲ ಕೆರಳಿಸಿದೆ.

ಜಿಲ್ಲೆಯ ಮತದಾರರು ಇದೀಗ ಫಲಿತಾಂಶದ ದಿನ ಹತ್ತಿರ ಬರುತ್ತಿದ್ದಂತೆಯೇ ಗೆಲುವಿನ ಮಾಲೆ ಯಾರಿಗೆ ಎಂದು ಕುತೂಹಲದಿಂದ ಕಾಯುತ್ತಿದ್ದು, ಟೀ ಅಂಗಡಿಗಳು, ಶೇವಿಂಗ್ ಶಾಪ್‌ಗಳು, ಹೋಟೆಲ್‌ಗಳು, ಹಳ್ಳಿಕಟ್ಟೆಗಳು ಸೇರಿದಂತೆ ಜನನಿಬಿಡ ಪ್ರದೇಶದಲ್ಲಿ ಚರ್ಚೆಗಳು ನಡೆಯುತ್ತಿವೆ.

ನಾಳೆ ಫಲಿತಾಂಶದ ದಿನವಾಗಿರುವುದರಿಂದ ಜನ ಮಧ್ಯಾಹ್ನದ ತನಕ ಟಿವಿ ಬಿಟ್ಟು ಹೊರಗೆ ಬರುವ ಮನಸ್ಸು ಮಾಡುವುದಿಲ್ಲ. ಜೊತೆಗೆ ಹೋಟೆಲ್‌ಗಳು, ಟೀ ಶಾಪ್‌ಗಳು, ಇನ್ನಿತರ ಸ್ಥಳಗಳಲ್ಲಿ ಟೀವಿ ಮುಂದೆ ಜನಸಾಗರ ನೆರೆಯುವ ಸಾಧ್ಯತೆ ಇದ್ದು, ಫಲಿತಾಂಶದ ಬಗ್ಗೆ ಜನ ಕುತೂಹಲದಿಂದ ಕಾಯುತ್ತಿದ್ದಾರೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ನಷ್ಟವಾದ ಕುಟುಂಬಕ್ಕೆ ಆರ್ಥಿಕ ನೆರವು



ಕೆ.ಆರ್.ಪೇಟೆ, ಜೂ.3–ಪಟ್ಟಣದ ಅಗ್ರಹಾರ ಬಡಾವಣೆಯಲ್ಲಿ ಕೂಲಿ ಕಾರ್ಮಿಕರಾದ ಸೋಮಶೇಖರ್ ಮತ್ತು ಗಾಯಿತ್ರಿ ದಂಪತಿ ವಾಸವಿದ್ದ ಮನೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ದಿನ ಬಳಕೆ ಹಾಗೂ ಗೃಹೋಪಯೋಗಿ ವಸ್ತುಗಳ ಸುಟ್ಟು ನಾಶವಾಗಿದ್ದು ಈ ಕುಟುಂಬಕ್ಕೆ ಜೆಡಿಎಸ್ ಮುಖಂಡರು ಹಾಗೂ ಮನ್ ಮುಲ್ ಹಿರಿಯ ನಿರ್ದೇಶಕ ಡಾಲು ರವಿ ಆರ್ಥಿಕ ನೆರವು ನೀಡಿ ಸಾಂತ್ವನ ಹೇಳಿದರು.

ವೇಳೆ ಮಾತನಾಡಿದ ಅವರು, ಕೂಲಿ ಮಾಡಿ ಜೀವನ ನಡೆಸುವ ಸೋಮಶೇಖರ್ ಮತ್ತು ಗಾಯಿತ್ರಿ ದಂಪತಿ ಕೂಲಿಗೆಂದು ಹೋಗಿದ್ದಾಗ ವಿದ್ಯುತ್ ಅವಘಡ ಉಂಟಾಗಿ ಮನೆಗೆ ಬೆಂಕಿ ಹೊತ್ತಿಕೊಂಡು ದಿನಸಿ ಸಾಮಗ್ರಿಗಳು, ಬಟ್ಟೆ–ಬರೆ, ಟಿವಿ, ಸೇರಿದಂತೆ ಗೃಹೋಪಯೋಗಿ ವಸ್ತುಗಳು ಸುಟ್ಟು ನಾಶವಾಗಿವೆ. ಅದೃಷ್ಟವಶಾತ್ ಇವರು ಮನೆಯಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಹಾಗಾಗಿ ಈ ಘಟನೆಯಿಂದ ಬೀದಿಗೆ ಬಿದ್ದಿರುವ ಸೋಮಶೇಖರ್ ದಂಪತಿಗೆ ತಾಲೂಕು ಆಡಳಿತವು ಸೂಕ್ತ ಪರಿಹಾರ ನೀಡಬೇಕು ಎಂದು ಡಾಲು ರವಿ ಒತ್ತಾಯ ಮಾಡಿದರು.

ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾಗೃತಿ ಜಾಥಾ



ಶ್ರೀರಂಗಪಟ್ಟಣ, ಜೂ. 3– ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ನಿಷೇಧ ಕಾಯಿದೆಗೆ ಆಂದೋಲನ ಕಾರ್ಯಕ್ರಮಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಎಸ್ ರಾಜಮೂರ್ತಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಮಕ್ಕಳ ಹಕ್ಕುಗಳನ್ನು ಕಸಿದುಕೊಳ್ಳುವ ಹಲವಾರು ಅನಿಷ್ಟ ಪದ್ಧತಿಗಳ ಪೈಕಿ ಬಾಲ್ಯ ವಿವಾಹವೂ ಒಂದು. ಕಾಯಿದೆ ಪ್ರಕಾರ ಹೆಣ್ಣು ಮಕ್ಕಳಿಗೆ 18 ವರ್ಷ ತುಂಬುವ ಮೊದಲೇ ಬಾಲ್ಯ ವಿವಾಹ ಮಾಡಿದರೆ ಪೋಷಕರಿಗೆ 2 ವರ್ಷಗಳ ಕಠಿಣ ಜೈಲುವಾಸ, 1 ಲಕ್ಷ ದಂಡ ಇದೆ. ಇದು ಜಾಮೀನು ರಹಿತ ಹಾಗೂ ವಿಚಾರಣಾರ್ಹ ಅಪರಾಧವಾಗಿದೆ. ಬಾಲ್ಯ ವಿವಾಹದ ಬಗ್ಗೆ ದೂರು ನೀಡಿದವರ ಮಾಹಿತಿಯನ್ನೂ ಗೌಪ್ಯವಾಗಿಡುವುದು ಸರ್ಕಾರ ಹಾಗೂ ಅಧಿಕಾರಿಗಳ ಕರ್ತವ್ಯ ಎಂದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾಕ್ಟರ್ ಮೃಣಾಲಿನಿ ಮಾತನಾಡಿದರು. ನಂತರ ಬೀದಿಗಳಲ್ಲಿ ಜಾಥಾ ನಡೆಸಿ ಬಾಲ್ಯ ವಿವಾಹ ನಿಷೇಧ ಕಾಯ್ದೆ ಹೆಣ್ಣು ಮಕ್ಕಳ ಭ್ರೂಣ ಹತ್ತೆ ನಿಷೇಧ ಕಾಯ್ದೆಗೆ ಬಗ್ಗೆ ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕರಾದ ಪುಷ್ಪಾವತಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಸಿಬ್ಬಂದಿಗಳು, ಸ್ತ್ರೀಶಕ್ತಿ ಸಂಘದ ಸದಸ್ಯರು ಹಾಜರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ: ಜಿಲ್ಲೆಯಲ್ಲಿ ಶೇ.91.60ರಷ್ಟು ಮತದಾನ

ಮಂಡ್ಯ, ಜೂ. 3– ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನ ಸೋಮವಾರ ನಡೆದಿದ್ದು, ಮಂಡ್ಯ ಜಿಲ್ಲೆಯಲ್ಲಿ ಶೇ.91.60ರಷ್ಟು ಮತದಾನವಾಗಿದೆ.

ಜಿಲ್ಲೆಯಲ್ಲಿ ಒಟ್ಟು 5403 ಮಂದಿ ಮತದಾನದ ಹಕ್ಕು ಹೊಂದಿದ್ದು ಈ ಪೈಕಿ 4949 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಮಂಡ್ಯ, ಮೈಸೂರು, ಚಾಮರಾಜನಗರ, ಹಾಗೂ ಹಾಸನ ಜಿಲ್ಲೆಗಳನ್ನು ಒಳಗೊಂಡಿರುವ ದಕ್ಷಿಣ ಶಿಕ್ಷಕರ ಕ್ಷೇತ್ರಗಳ ಪೈಕಿ ಮಂಡ್ಯ ಜಿಲ್ಲೆಯಲ್ಲಿ ಶಾಂತಿಯುತವಾಗಿ ಮತದಾನ ನಡೆದಿದೆ.

ಮಂಡ್ಯ ಜಿಲ್ಲೆಯ ಏಳು ತಾಲೂಕುಗಳ ಪೈಕಿ ಮಂಡ್ಯ ತಾಲೂಕಿನ ಬೂತ್ ತಾಲೂಕು ಪಂಚಾಯಿತಿ ಕಚೇರಿಯ ರೂಂ.1ರಲ್ಲಿ 630 ಮಂದಿ ಮತ ಚಲಾಯಿಸಬೇಕಿದ್ದು, 587 ಮಂದಿ ಹಕ್ಕು ಚಲಾಯಿಸದರೆ ಅದೇ ಬೂತ್‌ನ ರೂಂ.2ರಲ್ಲಿ 554 ಮಂದಿ ಮತದಾರರ ಪೈಕಿ 501 ಮಂದಿ ಹಕ್ಕು ಚಲಾಯಿಸಿದ್ದಾರೆ. ಇನ್ನು ಮಂಡ್ಯ ತಾಲೂಕಿನ ಸಾಮರ್ಥ್ಯ ಸೌಧದ ಬೂತ್‌ನಲ್ಲಿ 801 ಮಂದಿ ಮತದಾನದ ಹಕ್ಕು ಹೊಂದಿದ್ದು, ಅಲ್ಲಿ 720 ಮಂದಿ ಹಕ್ಕು ಚಲಾಯಿಸಿದ್ದಾರೆ.

ಹಾಗೆಯೇ ಕೆ.ಆರ್.ಪೇಟೆಯಲ್ಲಿ 464 ಮಂದಿ ಮತದಾನದ ಹಕ್ಕು ಹೊಂದಿದ್ದು, ಈ ಪೈಕಿ 439 ಮಂದಿ ಹಕ್ಕು ಚಲಾಯಿಸಿದ್ದಾರೆ. ಇನ್ನು ನಾಗಮಂಗಲದಲ್ಲಿ 443 ಮಂದಿ ಮತದಾನದ ಹಕ್ಕು ಹೊಂದಿದ್ದರೆ ಈ ಪೈಕಿ 429 ಮಂದಿ ಹಕ್ಕು ಚಲಾಯಿಸಿದ್ದಾರೆ. 446 ಮತ ಹೊಂದಿದ್ದ ಪಾಂಡವಪುರದಲ್ಲಿ 415 ಮತ ಚಲಾವಣೆಯಾದರೆ, 967 ಮತ ಹೊಂದಿದ್ದ ಮದ್ದೂರಿನಲ್ಲಿ 902 ಮಂದಿ ಹಕ್ಕು ಚಲಾಯಿಸಿದ್ದಾರೆ. ಹಾಗೆಯೇ 431 ಮತ ಹೊಂದಿದ್ದ ಶ್ರೀರಂಗಪಟ್ಟಣದಲ್ಲಿ 355 ಹಕ್ಕು ಚಲಾವಣೆಯಾದರೆ ಮಳವಳ್ಳಿ ತಾಲ್ಲೂಕಿನ 667 ಮತಗಳ ಪೈಕಿ 601 ಮಂದಿ ಹಕ್ಕು ಚಲಾಯಿಸಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ 5403 ಮತದಾರರ ಪೈಕಿ 4949 ಮತದಾರರು ಹಕ್ಕು ಚಲಾಯಿಸಿದ್ದಾರೆ.



ಕೆ.ಆರ್.ಪೇಟೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನದ ದೃಶ್ಯ

ಮತದಾನ ಆರಂಭದ ಸಂದರ್ಭದಲ್ಲಿ ಮತದಾರರ ಸಂಖ್ಯೆ ವಿರಳವಾಗಿತ್ತು. ಹೊತ್ತು ಕಳೆದಂತೆ ಮತಗಟ್ಟೆಯತ್ತ ಮತದಾರರು ಆಗಮಿಸಿ ಹಕ್ಕು ಚಲಾಯಿಸಿದರು. ಮತಗಟ್ಟೆಯ ಹೊರಭಾಗದಲ್ಲಿ ತಮ್ಮ ಬೆಂಬಲಿತ ಅಭ್ಯರ್ಥಿಗಳ ಪರವಾಗಿ ವಿವಿಧ ಪಕ್ಷಗಳ ಮುಖಂಡರು, ಕಾರ್ಯಕರ್ತರು ಪ್ರಚಾರ ಕಾರ್ಯದಲ್ಲಿ ನಿರತರಾಗಿ ಮತಯಾಚಿಸಿದರು. ಜಿಲ್ಲಾ ಕೇಂದ್ರ ಮಂಡ್ಯ ನಗರದ ತಾಲೂಕು ಕಚೇರಿಯ ಎರಡು ಮತ ಕೇಂದ್ರ ಮತ್ತು ತಾಲೂಕು ಪಂಚಾಯಿತಿ ಕಚೇರಿಯಲ್ಲಿ ತೆರೆದಿರುವ ಮತಗಟ್ಟೆಯಲ್ಲಿ ಪ್ರೌಢಶಾಲೆಗಳ ಶಿಕ್ಷಕರು, ಪಿಯು ಹಾಗೂ ಪದವಿ ಕಾಲೇಜುಗಳ ಉಪನ್ಯಾಸಕರು, ಪ್ರಾಧ್ಯಾಪಕರು, ವಿಶ್ವವಿದ್ಯಾಲಯಗಳ ಬೋಧಕರು ತಮ ಪ್ರಾಶಸ್ತ್ಯದ ಮತ ಹಾಕಿದರು.

ತಾಲೂಕು ಕೇಂದ್ರಗಳಾದ ಮಳವಳ್ಳಿ, ಮದ್ದೂರು, ನಾಗಮಂಗಲ, ಪಾಂಡವಪುರ ಕೆ.ಆರ್.ಪೇಟೆ ಹಾಗೂ ಶ್ರೀರಂಗಪಟ್ಟಣದ ಮಿನಿ ವಿಧಾನಸೌಧದ ಮತಗಟ್ಟೆಗಳಲ್ಲಿ ಮತದಾನ ಸುಗಮವಾಗಿ ನಡೆದಿದ್ದು, ಸುಶಿಕ್ಷಿತ ಮತದಾರರು ಮತಗಟ್ಟೆಗಳ ಎದುರು ಸರದಿ ಸಾಲಿನಲ್ಲಿ ನಿಂತು ಹಕ್ಕು ಚಲಾಯಿಸುವ ಮೂಲಕ ಮತದ ಮಹತ್ವ ಸಾರಿದ್ದಾರೆ.

ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಮರಿತಿಬ್ಬೇಗೌಡ ಮತ್ತು ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಕಣದಲ್ಲಿರುವ ಕೆ.ವಿವೇಕಾನಂದ ನಡುವೆ ನೇರ ಹಣಾಹಣಿ ಇದ್ದು, ಇವರ ಜೊತೆಗೆ ನಾಗೇಂದ್ರ ಬಾಬು (ಕೆಜೆಪಿ), ಮಾಜಿ ಶಾಸಕ ವಾಟಾಳ್ ನಾಗರಾಜ್ (ಕನ್ನಡ ಚಳವಳಿ ವಾಟಾಳ್ ಪಕ್ಷ), ಹಾಗೂ ಪಕ್ಷೇತರರಾದ ಅನಿಲ್ ಕುಮಾರ್, ಅಂಬರೀಷ್, ನಿವೃತ್ತ ಡಿಡಿಪಿಯು ನಾಗಮಲ್ಲೇಶ್, ನಿಂಗರಾಜು, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಬಿಎಸ್ಪಿ ಬೆಂಬಲಿತ ಅಭ್ಯರ್ಥಿ ಆರ್.ಮಹೇಶ್, ರಾಜು ರವರ ಗೆಲುವಿನ ಹಣೆಬರಹವನ್ನು ಮತದಾರರು ಬರೆದಿದ್ದು, ಜೂನ್ 6 ರಂದು ಫಲಿತಾಂಶ ಹೊರ ಬೀಳಲಿದೆ.

ಒಂದನೇ ಪುಟದಿಂದ



ಮತ ಎಣಿಕೆ ಕಾರ್ಯ

ಪ್ರಾರಂಭವಾಗಲಿದೆ ಎಣಿಕೆ ಮೇಲ್ವಿಚಾರಕರು, ಎಣಿಕೆ ಸಹಾಯಕರು ಮತ್ತು ಮೈಕ್ರೋ ವೀಕ್ಷಕರು ಸೇರಿದಂತೆ 13,173 ಎಣಿಕೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅವರು ಹೇಳಿದ್ದಾರೆ.

"ಸಿಬ್ಬಂದಿಗೆ ಅಗತ್ಯವಿರುವ ಎಲ್ಲಾ ತರಬೇತಿಯನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಪ್ರತಿ ಎಣಿಕೆ ಕೇಂದ್ರದಲ್ಲಿ ಇವಿಎಂ ಮತ್ತು ಅಂಚೆ ಮತಪತ್ರಗಳನ್ನು ಪ್ರತ್ಯೇಕ ಕೊಠಡಿಗಳಲ್ಲಿ ಎಣಿಕೆ ಮಾಡಲಾಗುತ್ತದೆ. ಈ ಪ್ರತಿ ಎಣಿಕೆ ಕೇಂದ್ರಗಳಲ್ಲಿ ಅಗತ್ಯ ಸೌಲಭ್ಯಗಳೊಂದಿಗೆ (ಕಂಪ್ಯೂಟರ್‌ಗಳು, ಜೆರಾಕ್ಸ್, ಫ್ಯಾಕ್ಸ್, ಪ್ರಿಂಟರ್‌ಗಳೊಂದಿಗೆ) ಮಾಧ್ಯಮ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಮೂಲಕ ವರದಿಗಾರರು ತಮ್ಮ ಮಾಧ್ಯಮ ಸಂಸ್ಥೆಗಳಿಗೆ ವರದಿ ಮಾಡಲು ಸಹಾಯಕವಾಗಲಿದೆ" ಎಂದು ತಿಳಿಸಿದರು.

ಎಲ್ಲೆಲ್ಲಿ ಮತ ಎಣಿಕೆ: ಬೆಂಗಳೂರು ಕ್ಷೇತ್ರದ ಮೌಂಟ್ ಕಾರ್ಮೆಲ್ ಕಾಲೇಜು, ವಸಂತನಗರ (ಬೆಂಗಳೂರು ಕೇಂದ್ರ ಕ್ಷೇತ್ರ), ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್, ವಿಠಲ್ ಮಲ್ಯ ರಸ್ತೆ(ಬೆಂಗಳೂರು ಉತ್ತರ ಕ್ಷೇತ್ರ) ಮತ್ತು ಜಯನಗರದ ಎಸ್‌ಎಸ್‌ಎಂಆರ್‌ವಿ ಕಾಲೇಜು (ಬೆಂಗಳೂರು ದಕ್ಷಿಣ ಕ್ಷೇತ್ರ) ಮತ ಎಣಿಕೆ ಕೇಂದ್ರಗಳಲ್ಲಿ 2,400ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂರು ಲೋಕಸಭಾ ಕ್ಷೇತ್ರಗಳ ಮತ ಎಣಿಕೆಯನ್ನು ಬಿಗಿ ಭದ್ರತೆಯಲ್ಲಿ ಸುಗಮವಾಗಿ ನಡೆಸಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ.

ಬಿಗಿ ಪೊಲೀಸ್ ಭದ್ರತೆ: ಮತ ಎಣಿಕೆಗಾಗಿ ಬೆಂಗಳೂರು ನಗರ ಪೊಲೀಸ್ ಘಟಕದಿಂದ ಒಟ್ಟು 1,524 ಅಧಿಕಾರಿಗಳು, ಸಿಬ್ಬಂದಿ, 13 ಸಶಸ್ತ್ರ ಮೀಸಲು ಘಟಕಗಳು ಮತ್ತು ನಾಲ್ಕು ತ್ವರಿತ ಪ್ರತಿಕ್ರಿಯೆ ತಂಡಗಳನ್ನು ನಿಯೋಜಿಸಲಾಗಿದ್ದು, ಈಗಾಗಲೇ ಸಿವಿಲ್ ಮತ್ತು ನಗರ ಸಶಸ್ತ್ರ ಮೀಸಲು ಘಟಕಗಳು ಸೇರಿದಂತೆ 516 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಮೂರು ಪಾಳಿಗಳಲ್ಲಿ ಸ್ಟ್ರಾಂಗ್ ರೂಮ್ ಭದ್ರತಾ ಕರ್ತವ್ಯವನ್ನು ನಿರ್ವಹಿಸಲು ನಿಯೋಜಿಸಲಾಗಿದೆ. ಮತ ಎಣಿಕೆ ಕೇಂದ್ರಗಳ ಸುತ್ತ ಸಂಚಾರ ದಟ್ಟಣೆಗೆ ಅಡ್ಡಿಯಾಗದಂತೆ 400 ಕ್ಕೂ ಹೆಚ್ಚು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಮೂರು ಮತ ಎಣಿಕೆ ಕೇಂದ್ರಗಳಲ್ಲಿನ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ನಗರದ ಒಟ್ಟು 2,400 ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಮತ ಎಣಿಕೆ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಮದ್ಯ ಮಾರಾಟ ನಿಷೇಧ: ಸೋಮವಾರ ಮಧ್ಯರಾತ್ರಿಯಿಂದ ಜೂನ್ 4ರ ಮಧ್ಯರಾತ್ರಿಯವರೆಗೆ ನಗರ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ ಮತ್ತು ಮಂಗಳವಾರ ಬೆಳಗ್ಗೆ 6ರಿಂದ ಮಂಗಳವಾರ ಮಧ್ಯರಾತ್ರಿಯವರೆಗೆ ಬೆಂಗಳೂರಿನಲ್ಲಿ ಸಿಆರ್‌ಪಿಸಿ ಸೆಕ್ಷನ್ 144 ಅಡಿಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಮತ್ತು ನಗರ ಸಶಸ್ತ್ರ ಮೀಸಲು ತುಕಡಿಗಳನ್ನು ನಗರದ ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸಲಾಗುವುದು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

474 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ

ಆರಂಭಗೊಳ್ಳಲಿದೆ. ಸಂಬಂಧಪಟ್ಟ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ಮತ ಎಣಿಕೆ ನಡೆಯಲಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಲು ಪೊಲೀಸ್ ಬಂದೋಬಸ್ತ್ ಅನ್ನು ಈಗಾಗಲೇ ಮಾಡಲಾಗಿದೆ. ಮತ ಎಣಿಕೆ ಹಿನ್ನಲೆಯಲ್ಲಿ ನಾಳೆ ಮುಂಜಾನೆ 6 ಗಂಟೆಯಿಂದ ಮಧ್ಯರಾತ್ರಿವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ. ಮತ ಎಣಿಕೆ ಕೇಂದ್ರದ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕೇಂದ್ರ ಚುನಾವಣಾ ಆಯೋಗ ನೇಮಿಸಿರುವ ವೀಕ್ಷಕರು ಪ್ರತಿ ಕೇಂದ್ರದಲ್ಲೂ ಮೇಲ್ವಿಚಾರಣೆ ನಡೆಸಲಿದ್ದಾರೆ.

ರಾಜ್ಯದ 28 ಕ್ಷೇತ್ರಗಳಲ್ಲೂ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೆ, ಎನ್‌ಡಿಎ ಮೈತ್ರಿಕೂಟದಿಂದ ಬಿಜೆಪಿ 25 ಹಾಗೂ ಜೆಡಿಎಸ್ ಮೂರು ಕ್ಷೇತ್ರಗಳಲ್ಲಿ ತನ್ನ ಉಮೇದುವಾರರನ್ನು ನಿಲ್ಲಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ಮೈಸೂರು–ಕೊಡಗು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತವರು ಜಿಲ್ಲೆ ಗುಲ್ಬರ್ಗ, ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಕಣಕ್ಕಿಳಿದಿರುವ ಮಂಡ್ಯ ಲೋಕಸಭಾ ಕ್ಷೇತ್ರಗಳ ಫಲಿತಾಂಶ ತೀವ್ರ ಕುತೂಹಲ ಮೂಡಿಸಿವೆ. ಈ ನಾಲ್ಕರಲ್ಲಿ ಮೂರು ಕ್ಷೇತ್ರಗಳು ಕಾಂಗ್ರೆಸ್ ಮುಖಂಡರಿಗೆ ಪ್ರತಿಷ್ಠೆಯಾಗಿದೆ. ಇನ್ನು ಕುಮಾರಸ್ವಾಮಿಗೆ ರಾಜಕೀಯ ಭವಿಷ್ಯ ನಿರ್ಧಾರದ ಕ್ಷಣವಾಗಲಿದೆ. ಪ್ರಸಕ್ತ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸಬೇಕೆಂದು ಕಾಂಗ್ರೆಸ್ 28ರ ಪೈಕಿ 20ರಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶ ಮಾಡಿಕೊಟ್ಟಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ಅಳಿಯ ರಾಧಾಕೃಷ್ಣ ಅವರನ್ನು ಗುಲ್ಬರ್ಗದಿಂದ, ಉಪಮುಖ್ಯಮಂತ್ರಿ ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಬೆಂಗಳೂರು ಗ್ರಾಮಾಂತರದಿಂದ, ಸಚಿವರಾದ ಮಹದೇವಪ್ಪ ಪುತ್ರ, ಎಸ್.ಎಸ್.ಮಲ್ಲಿಕಾರ್ಜುನ್ ಪತ್ನಿ, ಸತೀಶ್ ಜಾರಕಿಹೊಳಿ ಪುತ್ರಿ, ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ, ಈಶ್ವರ ಖಂಡ್ರೆ ಪುತ್ರ, ರಾಮಲಿಂಗಾ ರೆಡ್ಡಿ ಪುತ್ರಿ ಹಾಗೂ ಶಿವಾನಂದ ಪಾಟೀಲ್ ಪುತ್ರ ಇದೇ ಮೊದಲ ಬಾರಿಗೆ ಕಣಕ್ಕಿಳಿದಿದ್ದಾರೆ. ಇನ್ನು ಬಿಜೆಪಿಯಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ ಶಿವಮೊಗ್ಗದಿಂದಲೂ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ ಧಾರವಾಡ, ಭಗವಂತ ಖೂಬಾ ಬೀದರ್, ಶೋಭಾ ಕರಂದ್ಲಾಜೆ ಬೆಂಗಳೂರು ಉತ್ತರ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಬೆಳಗಾವಿ, ಬಸವರಾಜ ಬೊಮ್ಮಾಯಿ ಹಾವೇರಿಯಿಂದ ಕಣದಲ್ಲಿದ್ದಾರೆ.

ಹೃದಯ ತಜ್ಞ ಡಾ.ಮಂಜುನಾಥ್ ಬೆಂಗಳೂರು ಗ್ರಾಮಾಂತರ, ಮಾಜಿ ಉಪಮುಖ್ಯಮಂತ್ರಿಗಳಾದ ಗೋವಿಂದ್ ಕಾರಜೋಳ್ ಚಿತ್ರದುರ್ಗ, ಬಿ.ಶ್ರೀರಾಮುಲು ಬಳ್ಳಾರಿಯಿಂದ ಚುನಾವಣಾ ಕಣದಲ್ಲಿದ್ದಾರೆ. ಪ್ರಮುಖ ರಾಜಕೀಯ ಪಕ್ಷಗಳ 56 ಅಭ್ಯರ್ಥಿಗಳೂ ಸೇರಿದಂತೆ ಒಟ್ಟಾರೆ 474 ಅಭ್ಯರ್ಥಿಗಳ ರಾಜಕೀಯ ಹಣೆಬರಹವನ್ನು ರಾಜ್ಯದ ಮತದಾರರು ಈಗಾಗಲೇ ಬರೆದಿದ್ದಾರೆ.

ಮೆಕ್ಸಿಕೊ ಅಧ್ಯಕ್ಷೆಯಾಗಿ ಶೈನ್‌ಬಾಮ್ ಆಯ್ಕೆ: ಉನ್ನತ ಹುದ್ದೆಗೇರಿದ ಮೊದಲ ಮಹಿಳೆ

ಮೆಕ್ಸಿಕೊ ಸಿಟಿ: ಕ್ಲಾಡಿಯಾ ಶೈನ್ ಬಾಮ್ ಅವರು ಮೆಕ್ಸಿಕೊ ದೇಶದ ಮೊದಲ ಮಹಿಳಾ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅಪರಾಧ ಪ್ರಕರಣಗಳು ಮತ್ತು ಲಿಂಗ ಆಧಾರಿತ ಹಿಂಸಾಚಾರಕ್ಕೆ ಕುಖ್ಯಾತಿ ಪಡೆದಿರುವ ದೇಶದಲ್ಲಿ ಈ ಮೂಲಕ ಹೊಸ ಇತಿಹಾಸ ನಿರ್ಮಿಸಿದರು. ಮೆಕ್ಸಿಕೊದ 200 ವರ್ಷಗಳ ಇತಿಹಾಸದಲ್ಲಿ ಮಹಿಳೆಯೊಬ್ಬರು ಇದುವರೆಗೆ ಅಧ್ಯಕ್ಷ ಸ್ಥಾನಕ್ಕೆ ಏರಿರಲಿಲ್ಲ. ಸಾರ್ವತ್ರಿಕ ಚುನಾವಣೆಯ ಮತದಾನ ಭಾನುವಾರ ನಡೆಯಿತಲ್ಲದೆ, ತಡರಾತ್ರಿಯ ವೇಳೆಗೆ ಫಲಿತಾಂಶ ಹೊರಬಿತ್ತು.

ವಿಜ್ಞಾನಿಯೂ ಆಗಿರುವ 61 ವರ್ಷದ ಶೀನ್‌ಬಾಮ್ ಅವರು ಈ ಹಿಂದೆ ಮೆಕ್ಸಿಕೊ ನಗರದ ಮೇಯರ್ ಆಗಿ ಕಾರ್ಯ ನಿರ್ವಹಿಸಿದ್ದರು. ಈ ಐತಿಹಾಸಿಕ ಚುನಾವಣೆಯಲ್ಲಿ ನಮ್ಮ ಪಕ್ಷದ ಪರ ಮತ ಹಾಕಿರುವ ಮೆಕ್ಸಿಕೊದ ಲಕ್ಷಾಂತರ ಮಹಿಳೆಯರು ಮತ್ತು ಪುರುಷರಿಗೆ ನಾನು ಧನ್ಯವಾದ ಸಲ್ಲಿಸುತ್ತೇನೆ ಎಂದು ಶೀನ್‌ಬಾಮ್ ಹೇಳಿದರು.

ನಾನು ಮೆಕ್ಸಿಕೊದ ಮೊದಲ ಮಹಿಳಾ ಅಧ್ಯಕ್ಷೆ ಆಗಲಿದ್ದೇನೆ. ನಮ್ಮದು ಪ್ರಜಾಪ್ರಭುತ್ವ ದೇಶ ಎಂಬುದನ್ನು ಶಾಂತಿಯುತ ಚುನಾವಣೆ ಮೂಲಕ ತೋರಿಸಿಕೊಟ್ಟಿದ್ದೇವೆ ಎಂದು ಪ್ರತಿಕ್ರಿಯಿಸಿದರು.

ಶೈನ್‌ಬಾಮ್ ಅವರು ಶೇ 58.3 ರಿಂದ ಶೇ 60.7ರಷ್ಟು ಮತಗಳನ್ನು ಪಡೆದಿದ್ದಾರೆ ಎಂದು ಮೆಕ್ಸಿಕೊ ರಾಷ್ಟ್ರೀಯ ಚುನಾವಣಾ ಸಂಸ್ಥೆಯ ಅಧ್ಯಕ್ಷರು ಪ್ರಕಟಿಸಿದರು. ಅವರ ಸಮೀಪದ ಪ್ರತಿಸ್ಪರ್ಧಿ ಸೋಚಿ ಗಾಲ್ವೆಜ್ ಶೇ 26.6 ರಿಂದ ಶೇ 28.6ರಷ್ಟು ಮತಗಳನ್ನು ಹಾಗೂ ಕಣದಲ್ಲಿದ್ದ ಇನ್ನೊಬ್ಬ ಸ್ಪರ್ಧಿ ಜಾರ್ಜ್ ಅಲ್ವಾರೆಜ್ ಮೇನೆಜ್ ಶೇ 9.9 ರಿಂದ ಶೇ 10.8 ರಷ್ಟು ಮತಗಳನ್ನು ತಮ್ಮದಾಗಿಸಿಕೊಂಡರು.

ಫಲಿತಾಂಶ ಹೊರಬೀಳುತ್ತಿದ್ದಂತೆಯೇ ಶೈನ್‌ಬಾಮ್ ಅವರ ಬೆಂಬಲಿಗರು ಬೀದಿಗಿಳಿದು ಸಂಭ್ರಮಿಸಿದರು. ಆಡಳಿತಾರೂಢ ಪಕ್ಷದ ಬಾವುಟ ಹಿಡಿದು ನೃತ್ಯ ಮಾಡಿದರು. ಶೈನ್‌ಬಾಮ್ ಅವರು ಅಕ್ಟೋಬರ್ 1 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಮಹಿಳೆಯನ್ನು ಆಯ್ಕೆ ಮಾಡುವ ಮೂಲಕ ಮೆಕ್ಸಿಕೊ ದೇಶವು ಲ್ಯಾಟಿನ್ ಅಮೆರಿಕದ ಇತರ ದೇಶಗಳಾದ ಬ್ರೆಜಿಲ್, ಚಿಲಿ, ಕೋಸ್ಟರಿಕಾ, ಹಾಂಡುರಸ್, ನಿಕಾರಗುವಾ ಮತ್ತು ಪನಾಮಾ ಸಾಲಿಗೆ ಸೇರಿಕೊಂಡಿತು. ಈ ದೇಶಗಳಲ್ಲಿ ಮಹಿಳೆಯರು ಈಗಾಗಲೇ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದಾರೆ.

ಮಕ್ಕಳಿಗೆ ನೋಟ್‌ಬುಕ್ ವಿತರಣೆ

ಬೈಲಕುಪ್ಪೆ, ಜೂ.3– ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಲು ಪ್ರೇರೇಪಿಸುವ ನಿಟ್ಟಿನಲ್ಲಿ ರೋಟರಿ ಸಂಸ್ಥೆ ವಿದ್ಯಾಸೇತು ಸೇರಿದಂತೆ, ನಿರಂತರವಾಗಿ ಶೈಕ್ಷಣಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ ಎಂದು ಪಿರಿಯಾಪಟ್ಟಣ ರೋಟರಿ ಅಧ್ಯಕ್ಷ ರಾಜೇಗೌಡ ತಿಳಿಸಿದರು.

ತಿರುಮಲಾಪುರ ಗ್ರಾಮದಲ್ಲಿ ಪಿರಿಯಾಪಟ್ಟಣ ಮಿಡ್ ಟೌನ್ ರೋಟರಿ ವತಿಯಿಂದ ವಿದ್ಯಾಸಿರಿ ಯೋಜನೆಯಡಿ ಹಮ್ಮಿಕೊಂಡಿದ್ದ ಶಾಲೆಯ 106 ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಾಜಿ ಕಾರ್ಯದರ್ಶಿ ಬಸವೇಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ರೋಟರಿ ಕಾರ್ಯದರ್ಶಿ ಐಕೆಪಿ ಹೆಗಡೆ, ಕಾರ್ಯಕ್ರಮದ ದಾನಿ ರಾಮ್ ಶೆಟ್ಟಿ,



ರೋಟರಿ ಸದಸ್ಯರಾದ ಸುನೀಲ್, ಚೇತನ್, ತಿಲಕ್, ಶಾಲೆ ಮುಖ್ಯ ಶಿಕ್ಷಕ ಮಂಜು, ಶಿಕ್ಷಕರಾದ ಜಯಶೀಲ, ರೂಪ, ಲಿನ್ಸ್ ಜಾರ್ಜ್, ಗಿರೀಶ್, ಎಸ್‌ಡಿಎಂಸಿ ಅಧ್ಯಕ್ಷ ಕುಮಾರ್, ಉಪಾಧ್ಯಕ್ಷ ಮಂಜು ನಾಯಕ, ಗ್ರಾಮಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಸವ ಜಯಂತಿ ಪ್ರಚಾರ ರಥಕ್ಕೆ ಚಾಲನೆ



ಬಸವ ಜಯಂತಿ ಪ್ರಚಾರ ರಥಕ್ಕೆ ಚಾಲನೆ ನೀಡಲಾಯಿತು.

ನಂಜನಗೂಡು, ಜೂ.3– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಂಜನಗೂಡು ತಾಲೂಕು ಘಟಕ ಹಾಗೂ ಸಮಸ್ತ ವೀರಶೈವ ಲಿಂಗಾಯತ, ಬಸವ ಸೇವಾ ಒಕ್ಕೂಟಗಳ ಸಹಯೋಗದೊಂದಿಗೆ ನಗರದಲ್ಲಿ ಜೂ.12 ರಂದು ನಡೆಯುವ ವಿಶ್ವಗುರು ಬಸವೇಶ್ವರ ಜಯಂತಿ ಹಿನ್ನೆಲೆಯಲ್ಲಿ ಸೋಮವಾರ ತಾಲೂಕಿನ ಮಲ್ಲನಮೂಲೆ ಮಠದಲ್ಲಿ ಪ್ರಚಾರ ರಥಕ್ಕೆ ಚಾಲನೆ ನೀಡಲಾಯಿತು.

ಪ್ರಚಾರ ರಥಕ್ಕೆ ಚಾಲನೆ ನೀಡಿ ಮಾತನಾಡಿದ ಮಲ್ಲನಮೂಲೆ ಮಠಾಧ್ಯಕ್ಷ ಶ್ರೀಚೆನ್ನಬಸವ ಸ್ವಾಮೀಜಿ, ಅಂದು ನಡೆಯುವ ಅದ್ಧೂರಿ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಸಿದ್ಧಗಂಗಾ ಮಠದ ಶ್ರೀಗಳು ಸೇರಿದಂತೆ ನಾಡಿನ ವಿವಿಧ ಮಠಗಳ ಮಠಾಧ್ಯಕ್ಷರು ಭಾಗವಹಿಸಲಿದ್ದಾರೆ. ತಾಲೂಕಿನ ವೀರಶೈವ ಲಿಂಗಾಯತ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಬುಲೆಟ್ ಮಹದೇವಪ್ಪ ಮಾತನಾಡಿ, ಈ ಪ್ರಚಾರ ರಥವು ತಾಲೂಕಿನ ಎಲ್ಲಾ ಗ್ರಾಮಗಳಿಗೆ ತೆರಳಿ ಗ್ರಾಮಸ್ಥರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಿದೆ. ಜೂ.12ರಂದು ಬೆಳಗ್ಗೆ 8 ಗಂಟೆಗೆ ಕಪಿಲಾ ನದಿ ತಟದಲ್ಲಿರುವ ಶ್ರೀಶಿವಪಾದಸ್ವಾಮಿಗಳ ಬಸವನ ಗದ್ದಿಗೆಯಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಮೆರವಣಿಗೆಯಲ್ಲಿ ಬಸವೇಶ್ವರರ ಪುತ್ಥಳಿ, ನಂದಿ ಧ್ವಜ, ವೀರಗಾಸೆ, ಭಜನಾ ತಂಡಗಳು, ಜಾನಪದ ಕಲಾತಂಡಗಳು, ಸ್ತಬ್ದ ಚಿತ್ರಗಳು, ಜೋಡಿ ಎತ್ತುಗಳು ಭಾಗವಹಿಸಲಿವೆ. ಮಧ್ಯಾಹ್ನ 1 ಗಂಟೆಗೆ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಧಾರ್ಮಿಕ ಸಮಾರಂಭ ನಡೆಯಲಿದ್ದು, ಸುಮಾರು 25 ಸಾವಿರ ಭಕ್ತರು ಆಗಮಿಸುವ ನಿರೀಕ್ಷೆಯಿದ್ದು ಎಲ್ಲರಿಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದರು.

ಈ ವೇಳೆ ವೀರಶೈವ ಮಹಾಸಭಾ ಕಾರ್ಯದರ್ಶಿ ಮಂಜುನಾಥ್, ಮಾದು, ಎಂ.ಕೆ.ಬಸವಣ್ಣ, ಚಿನ್ನಸ್ವಾಮಿ, ಹೆಗ್ಗಡಹಳ್ಳಿ ಪ್ರಕಾಶ್, ಅಣ್ಣಬಸವಣ್ಣ, ಶಿವನಾಗಪ್ಪ, ಟಿ.ಎಸ್.ವೀರೇಶ್‌ಕುಮಾರ್, ಆದಿ, ಶಿವನಾಗಪ್ಪ, ಚಿಕ್ಕಮಾದಪ್ಪ, ಸುಬ್ಬಣ್ಣ, ಲೋಕೇಶ್, ಮಲ್ಲೇಶ್, ಹೆಮ್ಮರಗಾಲ ಉಮೇಶ್, ಡಿ.ಜೆ.ಸೋಮಶೇಖರ್, ಆನಂದ, ಮುಳ್ಳೂರು ಶೇಖರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 4 ಜೂನ್ 2024

ರೈತರಿಗೆ ಅಗತ್ಯ ಬಿತ್ತನೆ ಬೀಜ; ರಸಗೊಬ್ಬರ ಪೂರೈಕೆಗೆ ವ್ಯವಸ್ಥೆ

ಮೈಸೂರು, ಜೂ. 3(ಎಸ್‌ಬಿಡಿ)– ಮುಂಗಾರು ಹಂಗಾಮಿಗೆ ಅಗತ್ಯವಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪೂರೈಕೆಗೆ ಕೃಷಿ ಇಲಾಖೆ ಸಜ್ಜಾಗಿದೆ.

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, 2024–25ನೇ ಸಾಲಿನ ಪೂರ್ವ ಮುಂಗಾರು ಹಾಗೂ ಮುಂಗಾರು ಹಂಗಾಮಿಗೆ ವಿವಿಧ ರೀತಿಯ ಬಿತ್ತನೆ ಬೀಜಗಳನ್ನು ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ. ಈವರೆಗೆ 2792 ಕ್ವಿಂಟಾಲ್ ಬಿತ್ತನೆ ಬೀಜ ರೈತ ಸಂಪರ್ಕ ಕೇಂದ್ರಗಳಿಗೆ ಸರಬರಾಜಾಗಿದ್ದು, 1928 ಕ್ವಿಂಟಾಲ್‌ಗಳಷ್ಟು ವಿವಿಧ ರೀತಿಯ ಬಿತ್ತನೆ ಬೀಜಗಳನ್ನು ಸಹಾಯ ಧನದಲ್ಲಿ ರೈತರಿಗೆ ವಿತರಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಉಳಿದಂತೆ ಜಿಲ್ಲೆಯಲ್ಲಿ ಭತ್ತ 19,600 ಕ್ವಿಂಟಾಲ್, ರಾಗಿ 1,525 ಕ್ವಿಂಟಾಲ್ ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದ್ದು, 863 ಕ್ವಿಂಟಾಲ್‌ಗಳಷ್ಟು ವಿವಿಧ ಬಿತ್ತನೆ ಬೀಜಗಳನ್ನು ಸಹಾಯಧನದಲ್ಲಿ ನೀಡಲು ದಾಸ್ತಾನು ಮಾಡಲಾಗಿದೆ. ರೈತರು ಅಧಿಕೃತ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕವೇ ಪಡೆಯಬೇಕೆಂದು ಅವರು ಮನವಿ ಮಾಡಿದ್ದಾರೆ.

ಬೇಡಿಕೆಗಿಂತ ಹೆಚ್ಚು ದಾಸ್ತಾನು: ಕೆಎಸ್ ಎಸ್‌ಸಿ, ಎನ್‌ಎಸ್‌ಸಿ ಹಾಗೂ ಖಾಸಗಿ ಕೇಂದ್ರಗಳಲ್ಲಿ ಮುಂಗಾರು ಹಂಗಾಮಿಗೆ ಬೇಡಿಕೆಗಿಂತ ಹೆಚ್ಚು ಪ್ರಮಾಣದ ಬಿತ್ತನೆ ಬೀಜ ದಾಸ್ತಾನಿದೆ. ಕ್ವಿಂಟಾಲ್‌ಗಳಲ್ಲಿ ಭತ್ತ 19,630, ರಾಗಿ 1,525, ಉದ್ದಿನಕಾಳು 600, ಗೋವಿನ ಜೋಳ 1468, ಹೆಸರು ಕಾಳು 480, ನೆಲಗಡಲೆ 400, ಜೋಳ 100, ಮೆಕ್ಕೆಜೋಳ 6500, ಸೂರ್ಯಕಾಂತಿ 200 ಕ್ವಿಂಟಾಲ್ ದಾಸ್ತಾನಿದೆ. ಈಗಾಗಲೇ ರೈತ ಸಂಪರ್ಕ ಕೇಂದ್ರಗಳ ಮೂಲಕ ಭತ್ತ ಹೊರತುಪಡಿಸಿ 1,928 ಕ್ವಿಂಟಾಲ್ ವಿವಿಧ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದ್ದಾರೆ.

ರಸಗೊಬ್ಬರಕ್ಕೆ ತೊಂದರೆಯಾಗದು

“ಮುಂಗಾರು ಹಂಗಾಮಿಗೆ 35551 ಮೆಟ್ರಿಕ್ ಟನ್ ಯೂರಿಯಾ ಬೇಡಿಕೆಯಿದೆ. ಈವರೆಗೆ 4973 ಮೆ.ಟನ್ ವಿತರಿಸಲಾಗಿದ್ದು, ಸದ್ಯ 24,153 ಮೆಟ್ರಿಕ್ ಟನ್ ದಾಸ್ತಾನು ಇದೆ. ಡಿಎಪಿ 10048 ಮೆ.ಟನ್ ಬೇಡಿಕೆ ಇದ್ದು, 3521 ಮೆ.ಟನ್ ವಿತರಿಸಲಾಗಿದೆ. ಇನ್ನು 8091 ಮೆ.ಟನ್ ದಾಸ್ತಾನಿದೆ. ಎಂಓಪಿ 6900 ಮೆ.ಟನ್ ಬೇಡಿಕೆಯಿದ್ದು 4301 ಮೆ.ಟನ್, ಎನ್‌ಪಿಕೆ ಕಾಂಪ್ಲೆಕ್ಸ್ 47275 ಮೆ.ಟನ್ ಬೇಡಿಕೆ ಇದ್ದು 45310 ಮೆ.ಟನ್ ದಾಸ್ತಾನು ಇದೆ. ಯೂರಿಯಾ, ಡಿಎಪಿ ಸೇರಿದಂತೆ ಈವರೆಗೆ 22265 ಮೆಟ್ರಿಲ್ ಟನ್ ವಿವಿಧ ರಸಗೊಬ್ಬರ ವಿತರಿಸಲಾಗಿದೆ.

–ಡಾ.ಬಿ.ಎಸ್.ಚಂದ್ರಶೇಖರ್

ಮಾರ್ಬಳ್ಳಿಯಲ್ಲಿ ಗೃಹಪ್ರವೇಶದ ಊಟ ಸೇವಿಸಿ ವೃದ್ಧೆ ಸಾವು

39 ಮಂದಿಗೆ ವಾಂತಿ–ಭೇದಿ, ವಿವಿಧ ಆಸ್ಪತ್ರೆಗಳಿಗೆ ದಾಖಲು

ಮೈಸೂರು, ಜೂ. 3(ಆರ್‌ಕೆ)– ಹೊಸ ಮನೆ ಗೃಹ ಪ್ರವೇಶ ಕಾರ್ಯಕ್ರಮದ ಊಟ ಸೇವಿಸಿ ಅಸ್ವಸ್ಥರಾಗಿದ್ದ ವೃದ್ಧೆ ಸಾವನ್ನಪ್ಪಿ, 39 ಮಂದಿಗೆ ವಾಂತಿ–ಭೇದಿ ಕಾಣಿಸಿಕೊಂಡಿರುವ ಘಟನೆ ಮೈಸೂರು ತಾಲೂಕು, ಜಯಪುರ ಹೋಬಳಿ ಮಾರ್ಬಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಪುಟ್ಟಲಿಂಗನಾಯಕ ಅವರ ಪತ್ನಿ ಶಿವಮ್ಮ(72) ಸಾವನ್ನಪ್ಪಿದ ವೃದ್ಧೆ. ಮೇ 31ರಂದು ಗ್ರಾಮದಲ್ಲಿ ನಿರ್ಮಿಸಿದ್ದ ಮನೆಯೊಂದರ ಗೃಹ ಪ್ರವೇಶ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಊಟ ಮಾಡಿದವರ ಪೈಕಿ ವೃದ್ಧೆ ಶಿವಮ್ಮ ಸೇರಿ 40 ಮಂದಿಗೆ ವಾಂತಿ–ಭೇದಿ ಕಾಣಿಸಿಕೊಂಡಿತ್ತು ಅವರನ್ನು ಮೈಸೂರಿನ ಕೆಆರ್, ಜಿಲ್ಲಾಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತಾದರೂ, ತೀವ್ರವಾಗಿ ಅಸ್ವಸ್ಥರಾಗಿದ್ದ ಶಿವಮ್ಮ ಇಂದು ಮುಂಜಾನೆ ಕೆ.ಆರ್. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಶಿವಮ್ಮ ಅವರು ಬಿಪಿ, ಶುಗರ್ ಮತ್ತಿತರ ತೊಂದರೆಯಿಂದ ಬಳಲುತ್ತಿದ್ದು, ಡಯಾಲಿಸಿಸ್ ಮಾಡಿಸಿಕೊಳ್ಳುವಂತೆ ವೈದ್ಯರು ತಿಂಗಳ ಹಿಂದೆಯೇ ಸಲಹೆ ನೀಡಿದ್ದರೂ ಅವರು ನಿರ್ಲಕ್ಷಿಸಿದ್ದರು. ಹಲವು ಆರೋಗ್ಯ ಸಮಸ್ಯೆಗಳಿಂದ ಸೂಕ್ತ ಚಿಕಿತ್ಸೆ ಪಡೆಯದೇ ಶಿವಮ್ಮ ಸಾವನ್ನಪ್ಪಿದ್ದಾರೆಯೇ ಹೊರತು, ಗೃಹಪ್ರವೇಶದ ಊಟ ಸೇವನೆಯಿಂದಲ್ಲ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ವಾಂತಿ–ಭೇದಿ ಕಂಡುಬಂದ ಗ್ರಾಮಸ್ಥರನ್ನು ಮೈಸೂರಿನ ಜಿಲ್ಲಾಸ್ಪತ್ರೆ, ಕೆಆರ್ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ನೀಡುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಹಲವರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಯಾವುದೇ ಪ್ರಾಣಾಪಾಯವಿಲ್ಲ ಎಂದು ಅವರು ತಿಳಿಸಿದ್ದಾರೆ. ಗ್ರಾಮ ಪಂಚಾಯ್ತಿ ಆವರಣದಲ್ಲಿ ತಾತ್ಕಾಲಿಕ ಚಿಕಿತ್ಸಾಲಯ ತೆರೆದು ದಿನದ 24 ಗಂಟೆಯೂ ತಪಾಸಣೆ ಮತ್ತು ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ವಾಂತಿ–ಭೇದಿ ಪ್ರಕರಣ ನಿಯಂತ್ರಣದಲ್ಲಿದೆ. ವೈದ್ಯರು, ನರ್ಸ್‌ಗಳು ಮುಂಜಾಗ್ರತಾ ಕ್ರಮ ವಹಿಸುತ್ತಿದ್ದಾರೆ. ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಡಿಹೆಚ್‌ಓ ಡಾ.ಕುಮಾರಸ್ವಾಮಿ ತಿಳಿಸಿದ್ದಾರೆ.

ಗ್ರಾಮಕ್ಕೆ ಮೈಸೂರು ಜಿಪಂ ಸಿಇಓ ಭೇಟಿ; ಅಗತ್ಯ ಎಚ್ಚರಿಕಾ ಕ್ರಮಕ್ಕೆ ಸೂಚನೆ



ಜಿಲ್ಲಾ ಪಂಚಾಯತ್ ಸಿಇಓ ಕೆ.ಎಂ.ಗಾಯಿತ್ರಿ ಮಾರ್ಬಳ್ಳಿ ಗ್ರಾಮಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರ ಸಮ್ಮುಖದಲ್ಲಿ ಸಭೆ ನಡೆಸಿದರು.

ಮೈಸೂರು,ಜೂ.3– ತಾಲೂಕಿನ ಜಯಪುರ ಹೋಬಳಿಯ ಮಾರ್ಬಳ್ಳಿ ಗ್ರಾಮದಲ್ಲಿ ನೂತನ ಮನೆಯ ಗೃಹಪ್ರವೇಶದ ವೇಳೆ ಊಟ ಸೇವಿಸಿ ಗ್ರಾಮದ 39 ಮಂದಿಗೆ ವಾಂತಿಭೇದಿ ಕಾಣಿಸಿಕೊಂಡ ಹಿನ್ನೆಲೆ ಜಿಲ್ಲಾ ಪಂಚಾಯತ್ ಸಿಇಓ ಕೆ.ಎಂ.ಗಾಯಿತ್ರಿ ಅವರು ಸೋಮವಾರ ಗ್ರಾಮಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿದರು.

ಈ ವೇಳೆ ಮಾರ್ಬಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರು, ಸದಸ್ಯರು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಸಭೆ ನಡೆಸಿದ ಅವರು, ಕಲುಷಿತ ಆಹಾರ ಸೇವನೆಯಿಂದಾಗಿ ವಾಂತಿಭೇದಿ ಕಾಣಿಸಿಕೊಂಡಿದೆ. ಹೀಗಾಗಿ ಗ್ರಾಮದಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳಲು ಆದ್ಯತೆ ನೀಡಬೇಕು. ಸ್ವಚ್ಛತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕೂಡ ಗ್ರಾಮ ಪಂಚಾಯಿತಿ ಜೊತೆಗೆ ಕೈಜೋಡಿಸಿ ಸಹಕರಿಸಬೇಕು ಎಂದು ತಿಳಿಸಿದರು.

ಗ್ರಾಮದಲ್ಲಿ ಜರುಗುವ ಯಾವುದೇ ಕಾರ್ಯಕ್ರಮಗಳಲ್ಲಿ ಪರಿಶುದ್ಧವಾಗಿ ಆಹಾರ ಸಿದ್ಧಪಡಿಸಲು ಗಮನಹರಿಸಬೇಕು. ಶುದ್ಧ ನೀರನ್ನು ಬಳಸುವ ಮೂಲಕ ಆಹಾರ ತಯಾರಿಸಬೇಕು. ಶುಚಿತ್ವ ಕಾಯ್ದು ಕೊಳ್ಳುವ ಬಗ್ಗೆ ಯಾರೂ ನಿರ್ಲಕ್ಷ್ಯ ಮಾಡಬಾರದು ಎಂದು ಸಲಹೆ ನೀಡಿದರು. ಗ್ರಾಮ ಪಂಚಾಯಿತಿ ವತಿಯಿಂದ ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ ಅನೇಕ ಕ್ರಮಗಳನ್ನು ಕೈಗೊಳ್ಳ ಲಾಗಿದೆ. ಇದರ ಜೊತೆಗೆ ಮಳೆಗಾಲದಲ್ಲಿ ಜನರು ಚೆನ್ನಾಗಿ ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು. ಬಿಸಿ ಆಹಾರ ಸೇವನೆಯನ್ನು ರೂಢಿಸಿಕೊಳ್ಳಬೇಕು ಎಂದರು. ಬಳಿಕ ತಾತ್ಕಾಲಿಕ ಚಿಕಿತ್ಸಾಲಯಕ್ಕೆ ಭೇಟಿ ನೀಡಿದ ಅವರು, ರೋಗ ಲಕ್ಷಣಗಳು ಕಂಡುಬರುವ ಮಂದಿಗೆ ಗುಣಮಟ್ಟದ ತಪಾಸಣೆ ನಡೆಸಿ, ನಿಖರವಾದ ಮಾಹಿತಿಯೊಂದಿಗೆ ದಾಖಲು ಮಾಡಿಕೊಳ್ಳಬೇಕು. ಉತ್ತಮ ಚಿಕಿತ್ಸೆಯನ್ನು ನೀಡಿ ಆರೈಕೆ ಮಾಡಬೇಕು. ಒಂದು ವೇಳೆ ಸ್ಥಿತಿ ಗಂಭೀರ ಎಂದು ಕಂಡುಬಂದಲ್ಲಿ ಕೂಡಲೇ ಜಿಲ್ಲಾಸ್ಪತ್ರೆಗೆ ದಾಖಲು ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಮಾತನಾಡಿ, ಗ್ರಾಮದಲ್ಲಿ ಮೃತರಾದ ಮಹಿಳೆಯೊಬ್ಬರು ಕಿಡ್ನಿ ವೈಫಲ್ಯ, ಅಧಿಕ ರಕ್ತದೊತ್ತಡ, ಮಧುಮೇಹ ಖಾಯಿಲೆಯಿಂದ ಬಳಲುತ್ತಿದ್ದರು. ಅವರಿಗೆ ಕಾಲರಾ ರೋಗ ಇರಲಿಲ್ಲ ಎಂದು ಸ್ಪಷ್ಟನೆ ನೀಡಿದರು.

ಈ ಸಂದರ್ಭದಲ್ಲಿ ಮೈಸೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಟಿ.ಪ್ರದೀಪ್, ಗ್ರಾಮ ಪಂಚಾಯತಿ ಅಧ್ಯಕ್ಷ ಮಹದೇವನಾಯಕ, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ರಂಜಿತ್, ಪಿಡಿಓ ಕುಮಾರಸ್ವಾಮಿ ಸೇರಿದಂತೆ ಮುಂತಾದವರು ಹಾಜರಿದ್ದರು.

ಜೂ.24ರಂದು ಸಪ್ತರ್ಷಿ ವೈದಿಕ ಗುರುಕುಲ ಸೇವಾಶ್ರಮದಲ್ಲಿ ಸಾಮೂಹಿಕ ಉಪನಯನ



ಮೈಸೂರು, ಜೂ.3–ನಗರದ ಕೆಆರ್‌ಎಸ್ ಮುಖ್ಯರಸ್ತೆಯಲ್ಲಿರುವ (ಮೊಗರಹಳ್ಳಿ ಸಮೀಪ) ಶ್ರೀ ಸಪ್ತರ್ಷಿ ಗುರುಕುಲ ವೈದಿಕ ಗುರುಕುಲ ಸೇವಾಶ್ರಮ ದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಜೂ.24ರಂದು ಸೋಮವಾರದಂದು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಶಾಸ್ತ್ರೋಕ್ತವಾಗಿ ಉಪನಯನ, ಪಂಚ ಸಂಸ್ಕಾರ, ಶ್ರೀ ಮಠದ ಶ್ರೀಗಳಿಂದ ಆಶೀರ್ವಚನ, ಪೂರ್ಣಾಹುತಿ, ಮಹಾಮಂಗಳಾರತಿ, ಶಾತ್ತುಮೊರೈ, ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಜೂ.23ರಂದು ಭಾನುವಾರ ಸಂಜೆ ಉದಕ ಶಾಂತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸಾಮೂಹಿಕ ಉಪನಯನದ ನಂತರ ಅಯೋಧ್ಯೆ ಶ್ರೀರಾಮ ಮಂದಿರದಿಂದ ತರಿಸಿರುವ ಅಕ್ಷತೆ ಹಾಗೂ ಛಾಯಾಚಿತ್ರವನ್ನು ಭಕ್ತಾದಿಗಳಿಗೆ ವಿತರಿಸಲಾಗುವುದು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಅಭಿನವ ರಾಮಾನುಜ ಜೀಯರ್ ವಹಿಸಿ, ಆಶೀರ್ವಚಿಸಲಿದ್ದಾರೆ.

ಶ್ರೀ ಮಠದಲ್ಲಿ ಎಲ್ಲಾ ವರ್ಗದ ಮಕ್ಕಳಿಗೆ ಗುರುಕುಲ ಪದ್ಧತಿಯಲ್ಲಿ, ಶಿಕ್ಷಣ, ಸನಾತನ ಸಂಸ್ಕೃತಿ, ಪರಂಪರೆ, ಇತಿಹಾಸ, ವೇದಾಧ್ಯಯನ ಉಚಿತವಾಗಿ ಹೇಳಿಕೊಡಲಾಗುವುದು, ಹಾಗೂ ಶಾಲಾ, ಕಾಲೇಜಿನ ಮಕ್ಕಳಿಗೆ ಊಟ ಮತ್ತು ವಸತಿ ವ್ಯವಸ್ಥೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 9481319111 ಅಥವಾ ವ್ಯವಸ್ಥಾಪಕ ರಂಗನಾಥ್ ಮೊ. 8861573934 ಸಂಪರ್ಕಿಸಬಹುದು.

ಎಂಐಟಿ ಪದವಿ ಕಾಲೇಜಲ್ಲಿ 'ಮಿತ್ರೋತ್ಸವ'



ಎಂಐಟಿ ಪದವಿ ಕಾಲೇಜು ತನ್ನ ದ್ವಿತೀಯ ವಾರ್ಷಿಕೋತ್ಸವ 'ಮಿತ್ರೋತ್ಸವ–2024' ಅನ್ನು ಕಾಲೇಜು ಆವರಣದಲ್ಲಿ ಆಚರಿಸಿತು.

ಮೈಸೂರು, ಜೂ. 3– ಎಂಐಟಿ ಪದವಿ ಕಾಲೇಜು ತನ್ನ ದ್ವಿತೀಯ ವಾರ್ಷಿಕೋತ್ಸವ 'ಮಿತ್ರೋತ್ಸವ–2024' ಅನ್ನು ಕಾಲೇಜು ಆವರಣದಲ್ಲಿ ಆಚರಿಸಿತು.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮತ್ತು ವಿಶ್ರಾಂತ ಕುಲಪತಿ ಡಾ.ಜಿ.ಹೇಮಂತ್‌ಕುಮಾರ್ ಉತ್ಸವವನ್ನು ಉದ್ಘಾಟಿಸಿದರು. ಪ್ರಥಮ ಮತ್ತು ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಪ್ರೊ.ಲೋಕನಾಥ್, ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವ ಮಹತ್ವವನ್ನು ಒತ್ತಿ ಹೇಳಿದರು. ಮಾಜಿ ಕುಲಪತಿಗಳು ಸಹ, ಲೋಕನಾಥ್ ಅಭಿಪ್ರಾಯಗಳನ್ನು ಅನುಮೋದಿಸಿ ಸಂಶೋಧನೆಯ ಮೌಲ್ಯವು ಎಂದಿಗೂ ಕುಗ್ಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಎಂಐಟಿ ಅಧ್ಯಕ್ಷ ಡಾ.ಮುರಳಿ ಎಸ್., ಅಧ್ಯಕ್ಷೀಯ ಭಾಷಣದಲ್ಲಿ ಪದವಿ ಹೊಂದುವುದರ ಜೊತೆಗೆ ಸಾಮಾಜಿಕ ಬದ್ಧತೆ ಅತ್ಯಂತ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದವರು ಹಾಗೂ ಶೈಕ್ಷಣಿಕವಾಗಿ ಉನ್ನತ ಶ್ರೇಣಿಯ ವಿದ್ಯಾರ್ಥಿಗಳನ್ನು ಸನ್ಮಾನಿಸ ಲಾಯಿತು. ಎಂಐಟಿಯ ಕಾರ್ಯದರ್ಶಿ ಡಾ.ಟಿ.ವಾಸುದೇವ್, ಎಂಐಟಿ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಮಂಜು ಬಿ., ಡಾ.ಚಂದ್ರಜಿತ್, ಆಡಳಿತಾಧಿಕಾರಿ ಅನಿರುದ್ಧ ಎ.ಎಂ ಉಪಸ್ಥಿತರಿದ್ದರು.

ಶೇಷಾದ್ರಿಪುರಂ ಕಾಲೇಜಲ್ಲಿ ಪುನಶ್ಚೇತನ ಕಾರ್ಯಕ್ರಮ




ಮೈಸೂರು, ಜೂ. 3– ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಪ್ರಥಮ ಪಿ.ಯು.ಸಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಪುನಶ್ಚೇತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಫುಲ್ಲ ಎಸ್, ಗಣಿತ ಶಾಸ್ತ್ರ ಉಪನ್ಯಾಸಕರು ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಯದು ಕುಮಾರ್ ಕೆ.ಎಲ್., ವಾಣಿಜ್ಯ ಶಾಸ್ತ್ರ ಉಪನ್ಯಾಸಕರು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಪಾಲಿಸಬೇಕಾದ ಕಾಲೇಜಿನ ನಿಯಮಾವಳಿಗಳು, ವಿದ್ಯಾರ್ಥಿಗಳು ಅನುಸರಿಸಬೇಕಾದ ಶಿಸ್ತು ಮತ್ತು ಸಂಯಮ ಹಾಗೂ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಅರ್ಚನಾ ಸ್ವಾಮಿ ಎನ್ ಮಾತನಾಡಿ, ವಿದ್ಯಾರ್ಥಿಗಳಿಗೆ ಅವರ ಭವಿಷ್ಯ ರೂಪಿಸಿಕೊಳ್ಳವಲ್ಲಿ ಗುರಿ ತುಂಬಾ ಮುಖ್ಯ ದೊಡ್ಡ ದೊಡ್ಡ ಕನಸುಗಳನ್ನು ಕಾಣಿರಿ, ಶಿಸ್ತು, ಪ್ರಾಮಾಣಿಕತೆ, ಕಠಿಣ ಪರಿಶ್ರಮ, ಬದ್ಧತೆ ತುಂಬಾ ಮುಖ್ಯ ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕ, ಉಪನ್ಯಾಸಕೇತರ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕುತೂಹಲ ಮೂಡಿಸಿರುವ ಕರ್ನಾಟಕದ 5 ಹೈವೋಲ್ಟೇಜ್ ಕ್ಷೇತ್ರಗಳ ಫಲಿತಾಂಶ



ಮೈಸೂರು, ಜೂ.3(ಬಿಎಲ್‌ಯು)– ದೇಶದ 543 ಕ್ಷೇತ್ರಗಳ ಪೈಕಿ ಕರ್ನಾಟಕದ ಐದು ಕ್ಷೇತ್ರಗಳು ಹೈವೋಲ್ಟೇಜ್ ಕ್ಷೇತ್ರಗಳಾಗಿದ್ದು, ದೇಶದ ರಾಜಕಾರಣದಲ್ಲಿ ಈ ಕ್ಷೇತ್ರಗಳ ಫಲಿತಾಂಶವನ್ನು ಕುತೂಹಲದಿಂದ ನಿರೀಕ್ಷಿಸಲಾಗುತ್ತಿದೆ.

ಇತ್ತೀಚೆಗೆ ದೇಶದ ಗಮನ ಸೆಳೆದಿರುವ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಸ್ಪರ್ಧೆ ಮಾಡಿರುವ ಹಾಸನ ಲೋಕಸಭಾ ಕ್ಷೇತ್ರ ಕರ್ನಾಟಕದ ಹೈವೋಲ್ಟೇಜ್ ಕ್ಷೇತ್ರಗಳಲ್ಲಿ ಒಂದಾಗಿದೆ.

ಹಾಸನ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ, ಲೈಂಗಿಕ ಕಿರುಕುಳ ಆರೋಪದಲ್ಲಿ ಈಗಾಗಲೇ ಎಸ್‌ಐಟಿ ಬಂಧನದಲ್ಲಿದ್ದಾರೆ. ಅವರ ಭವಿಷ್ಯ ಏನಾಗಬಹುದು ಎಂಬ ಕುತೂಹಲವಿದೆ. ಚುನಾವಣೆಗೆ ಒಂದೆರಡು ದಿನ ಇರುವಾಗ ಅಶ್ಲೀಲ ವಿಡಿಯೋ ವೈರಲ್ ಆಗಿದ್ದು, ಅದರ ಪರಿಣಾಮದಿಂದ ಪ್ರಜ್ವಲ್ ಸೋಲುತ್ತಾರಾ ಅಥವಾ ಇದೆಲ್ಲಾ ಮತದಾರನಿಗೆ ನಗಣ್ಯವಾಗಿ ಗೆಲ್ಲುತ್ತಾರಾ? ನಾಳೆ ನಿರ್ಧಾರವಾಗಲಿದೆ.

ದೇಶದ ಇತರೆ ಪ್ರಮುಖ ಕ್ಷೇತ್ರಗಳಂತೆ ಪ್ರಜ್ವಲ್ ಸ್ಪರ್ಧೆ ಮಾಡಿರುವ ಹಾಸನ ಕ್ಷೇತ್ರದ ಫಲಿತಾಂಶದ ಬಗ್ಗೆಯೂ ರಾಷ್ಟ್ರೀಯ ಮಾಧ್ಯಮಗಳು ನಾಳೆ ಹೈಲೈಟ್ ಮಾಡಲಿವೆ.

ಡಿ.ಕೆ.ಶಿವಕುಮಾರ್ ಸಹೋದರ ಹಾಲಿ ಸಂಸದ ಡಿ.ಕೆ. ಸುರೇಶ್ ಸ್ಪರ್ಧೆ ಮಾಡಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವೂ ಹೈವೋಲ್ಟೇಜ್ ಕ್ಷೇತ್ರಗಳಲ್ಲಿ ಒಂದಾಗಿದೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಭಾವ, ಖ್ಯಾತ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್‌ಗೆ ಡಿ.ಕೆ.ಸುರೇಶ್ ಪ್ರತಿಸ್ಪರ್ಧಿ. ಹೃದಯವಂತ ವೈದ್ಯ ವರ್ಸಸ್ ಚುನಾವಣಾ ಚತುರನ ನಡುವೆ ನಡೆದಿರುವ ಈ ಚುನಾವಣೆಯಲ್ಲಿ ಮತದಾರ ಪ್ರಭು ಯಾರ ಕೊರಳಿಗೆ ವಿಜಯ ಮಾಲೆ ತೊಡಿಸುತ್ತಾನೆ ಎಂಬ ಕುತೂಹಲವಿದೆ.

ಬೆಟ್ಟಿಂಗ್ ಭರಾಟೆ ಬಲು ಜೋರು

ಲೋಕಸಭಾ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಬೆಟ್ಟಿಂಗ್ ಭರಾಟೆ ಜೋರಾಗಿದೆ. ಬೆಟ್ಟಿಂಗ್ ಕಾನೂನು ಬಾಹಿರ. ಈ ಕಾರಣದಿಂದ ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳ ಬೆಂಬಲಿಗರು ಒಳ ಒಪ್ಪಂದದಲ್ಲಿ ಬೆಟ್ಟಿಂಗ್ ಕಟ್ಟಿದ್ದಾರೆ.

ನಾಳೆ ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ಬಾಜಿ ಕಟ್ಟುವುದು ಹೆಚ್ಚಾಗಲಿದೆ. ರಾಜಕೀಯದ ಬಗ್ಗೆ ಕ್ರೇಜ್ ಇರುವವರು ಒಂದೆಡೆ ಸೇರಿ ನಡೆಸುವ ಚರ್ಚೆಗಳಂತೂ ಕಾವು ಪಡೆಯಲಿದೆ. ಮದ್ಯಪಾನ ಮಾಡಿದ ಸಂದರ್ಭದಲ್ಲಿ ಹೀಗೆ ನಡೆಸುವ ಚರ್ಚೆಗಳು ತಾರಕ್ಕೇರಿ ಗಲಾಟೆಗಳಾಗುವ ಸಾಧ್ಯತೆ ಇರುವುದರಿಂದ ಮದ್ಯದಂಗಡಿಗಳನ್ನು ಚುನಾವಣಾ ಆಯೋಗ ಬಂದ್ ಮಾಡಿಸಿದೆ. ಆದರೂ ಬಹಳಷ್ಟು ಮದ್ಯ ಪ್ರಿಯ ಚಾಲಾಕಿಗಳು ನಾಳೆ ಮತ್ತೇರಿಸಿಕೊಳ್ಳಲು ಸ್ಟಾಕ್ ಮಾಡಿಟ್ಟುಕೊಂಡಿದ್ದಾರೆ.

ಇನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧೆ ಮಾಡಿರುವ ಮಂಡ್ಯ ಲೋಕಸಭಾ ಕ್ಷೇತ್ರ ಕೂಡ ಹೈವೋಲ್ಟೇಜ್ ಕ್ಷೇತ್ರವಾಗಿದೆ. ಕುಮಾರಸ್ವಾಮಿ ಅವರನ್ನು ಶತಾಯ–ಗತಾಯ ಸೋಲಿಸಬೇಕೆಂದು ಶ್ರೀಮಂತ ಅಭ್ಯರ್ಥಿ ಸ್ಟಾರ್ ಚಂದ್ರುವನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಈ ಕಾರಣದಿಂದ ಮಂಡ್ಯ ಕ್ಷೇತ್ರ ಕೂಡ ತೀವ್ರ ಕುತೂಹಲ ಮೂಡಿಸಿದೆ.

ಇನ್ನು ರಾಜವಂಶಸ್ಥ ಯದುವೀರ್ ಸ್ಪರ್ಧೆ ಮಾಡಿರುವ ಮೈಸೂರು ಕೊಡಗು ಲೋಕಸಭಾ ಕ್ಷೇತ್ರವೂ ಹೈವೋಲ್ಟೇಜ್ ಕ್ಷೇತ್ರವಾಗಿದೆ. ರಾಜವಂಶಸ್ಥರ ಮುಂದೆ ಸಾಮಾನ್ಯ ಕಾರ್ಯಕರ್ತ ಲಕ್ಷ್ಮಣ್ ನಿಲ್ಲಿಸಿ ಗೆಲ್ಲಿಸುವೆ ಎಂದು ತಮ್ಮ ಪ್ರತಿಷ್ಠೆಯನ್ನು ಪಣಕ್ಕಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಚಾರ ಮಾಡಿದ್ದಾರೆ. ಇದರಿಂದ ಸಿದ್ದರಾಮಯ್ಯ ಪ್ರತಿಷ್ಠೆ ಮೇಲ್ಗೈ ಸಾಧಿಸುವುದೋ ಅಥವಾ ರಾಜವಂಶಸ್ಥರ ಛಾಪು ಕೆಲಸ ಮಾಡುವುದೋ ಕ್ಷಣಗಣನೆ ಆರಂಭವಾಗಿದೆ.

ಈ ಕ್ಷೇತ್ರಗಳಂತೆ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಸ್ಪರ್ಧೆ ಮಾಡಿರುವ ಬೆಳಗಾವಿ, ಬಸವರಾಜ ಬೊಮ್ಮಾಯಿ ಸ್ಪರ್ಧಿಸಿರುವ ಹಾವೇರಿ, ಹಾಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಸ್ಪರ್ಧಿಸಿರುವ ಧಾರವಾಡ, ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಸ್ಪರ್ಧಿಸಿರುವ ಶಿವಮೊಗ್ಗ, ಶ್ರೀರಾಮುಲು ಸ್ಪರ್ಧಿಸಿರುವ ಬಳ್ಳಾರಿ, ಶೋಭಾ ಕರಂದ್ಲಾಜೆ ಕಣಕ್ಕಿಳಿದಿರುವ ಬೆಂಗಳೂರು ಉತ್ತರ ಕ್ಷೇತ್ರಗಳ ಫಲಿತಾಂಶ ಕೂಡ ಜನರಲ್ಲಿ ಕುತೂಹಲ ಮೂಡಿಸಿದೆ.

ವಚನ ಕಥಾ ಪ್ರಪಂಚ ಪ್ರತಿ ಕನ್ನಡಿಗರ ಮನೆ, ಮನ ಬೆಳಗುವ ಕೃತಿ



ಮೈಸೂರು, ಜೂ.3– ವಚನ ಕಥಾ ಪ್ರಪಂಚ ಪ್ರತಿಯೊಬ್ಬ ಕನ್ನಡಿಗರ ಮನೆ ಮತ್ತು ಮನ ಬೆಳಗುವ ಕೃತಿ ಎಂದು ತುಮಕೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗಮಕ ಕಲಾಶ್ರೀ ವಿದ್ವಾನ್ ಎಂ.ಜಿ ಸಿದ್ಧರಾಮಯ್ಯ ಹೇಳಿದರು.

ಮೈಸೂರಿನ ಹೆಬ್ಬಾಳು ವಿಜಯನಗರ ಬಸವಸಮಿತಿ ವತಿಯಿಂದ ಆಯೋಜಿಸಿದ್ದ 294ನೇ ಶರಣ ಸಂಗಮ ಮತ್ತು ಹೆಚ್.ವಿ ಬಸವರಾಜು ಹಿನ್ಕಲ್ ಮತ್ತು ಬಿ.ಲೋಕಾಮಣಿ ಅವರ ವಿವಾಹ ವಾರ್ಷಿಕೋತ್ಸವ ಪ್ರಯುಕ್ತ, ವಚನ ಕುಮಾರಸ್ವಾಮಿ ಅವರ ವಚನ ಕಥಾ ಪ್ರಪಂಚ, ರೂಪಾ ಕುಮಾರಸ್ವಾಮಿ ಅವರ ಬಸವಣ್ಣ ಮತ್ತು ಅಕ್ಕಮಹಾದೇವಿ ವಚನಗಳು ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ವಚನ ಕಥಾ ಪ್ರಪಂಚದಲ್ಲಿ 101 ವಚನಗಳು ಮತ್ತು 101 ಕಥೆಗಳು ಅಡಕವಾಗಿದ್ದು, ಕಥೆಗಳು ವಚನಕ್ಕೆ ಪೂರಕವಾಗಿದ್ದು, ಜೀವಂತಿಕೆಯಿಂದ ಪುಟಿದೆದ್ದು, ಹೃದಯಕ್ಕೆ ತಂಪೆರೆಯುವುದರ ಜೊತೆಗೆ ಜ್ಞಾನವಿಕಾಸಕ್ಕೆ ಮುನ್ನುಡಿ ಬರೆಯುತ್ತವೆ.

ಶರಣ ಶರಣೆಯರ ವಚನಗಳಿಗೆ ಸಾಂದರ್ಭಿಕವಾಗಿ, ವಿನೂತನವಾಗಿ ಒಂದೊಂದು ಕಥೆ ಹೆಣೆದು ಪೋಣಿಸಿರುವ ಕಥನ ಶೈಲಿ ಸುಂದರವಾಗಿದ್ದು, ವೈಚಾರಿಕತೆ ನೆಲೆಯಲ್ಲಿ ವೈಜ್ಞಾನಿಕವಾಗಿ ಚಿಂತಿಸಿ ಕಥೆ ಹೆಣೆದಿರುವ ಜಾಣ್ಮೆ ಹೊಸತನದಿಂದ ಕೂಡಿದ್ದು, ಮೈಸೂರಿನ ರಾಮಸ್ವಾಮಿ ಸರ್ಕಲ್, ಎವರೆಸ್ಟ್ ಶಿಖರ ಏರಿದ ಅಂಗವಿಕಲ ಮಹಿಳೆ, ಕಳ್ಳ ಶರಣನಾದ ಸಂದರ್ಭ ಮುಂತಾದ ಕಥೆಗಳನ್ನು ಓದುತ್ತಿದ್ದರೆ, ಅಲೌಕಿಕ ಆನಂದದಲ್ಲಿ ಮುಳುಗಿದ ಅನಿರ್ವಚನೀಯ ಅನುಭವವಾಗುತ್ತದೆ ಎಂದರು. ಬಸವಣ್ಣ ಮತ್ತು ಅಕ್ಕಮಹಾದೇವಿ ವಚನಗಳು ಕೃತಿಯಲ್ಲಿ ಬಸವಣ್ಣನವರ 54 ವಚನಗಳು ಅಕ್ಕಮಹಾದೇವಿಯವರ 54 ವಚನಗಳು ಇದ್ದು, ಉತ್ತಮ ಜೀವನ ನಿರ್ವಹಣೆಗೆ ಬೇಕಾದ ವಚನಗಳು ಅಡಕವಾಗಿವೆ ಎಂದರು.

ಬಸವ ಸಮಿತಿ ಅಧ್ಯಕ್ಷ ಹೆಚ್.ವಿ ಬಸವರಾಜು ಮಾತನಾಡಿ, ಇಂದು ಹುಟ್ಟಿದ ಹಬ್ಬ, ವಿವಾಹ ವಾರ್ಷಿಕೋತ್ಸವ ಕಾರ್ಯಕ್ರಮಗಳನ್ನು ಆಚರಿಸುವ ನೆಪದಲ್ಲಿ ಮೋಜು ಮಾಡುತ್ತಾರೆ. ಆದರೆ, ಅಂತಹ ಕಾರ್ಯಕ್ರಮಗಳಂದು ಕೃತಿಗಳ ಬಿಡುಗಡೆ ಮಾಡಿ, ಓದುಗರಿಗೆ ನೀಡಿದರೆ ಕನ್ನಡದ ಬೆಳವಣಿಗೆಯೂ ಆಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕೃತಿಗಳ ಸಂಪಾದಕ ವಚನ ಕುಮಾರಸ್ವಾಮಿ, ರೂಪ ಕುಮಾರಸ್ವಾಮಿ, ಲೋಕಾಮಣಿ, ಬಸವ ಸಮಿತಿ ಉಪಾಧ್ಯಕ್ಷೆ ಶುಭಾಮಣಿ, ಕಾರ್ಯದರ್ಶಿ ನಂದೀಶ್, ಕೋಶಾಧ್ಯಕ್ಷ ಮಹೇಶ್, ನಿರ್ದೇಶಕರಾದ ಲೋಕೇಶ್, ಚನ್ನಬಸಪ್ಪ, ಮಹಾದೇವಪ್ಪ, ಅನಿಲ್‌ಕುಮಾರ್, ಪ್ಯಾಟಪ್ಪ, ಶಿವಕುಮಾರ್, ಸರಸ್ವತಿ, ಇಂದ್ರಮ್ಮ, ವಿನುತ, ಸಾನ್ವಿ, ಶರಣು ವಿಶ್ವವಚನ ಫೌಂಡೇಷನ್ ಕೇಂದ್ರೀಯ ಸಂಚಾಲಕ ವಿ.ಲಿಂಗಣ್ಣ, ಹಂಸಿ ಕುಮಾರಸ್ವಾಮಿ ಉಪಸ್ಥಿತರಿದ್ದರು.

ಆಕಾಶವಾಣಿ ಕೇಂದ್ರದ ಉಪನಿರ್ದೇಶಕರಾಗಿ ಉಮೇಶ್ ಎಸ್.ಎಸ್. ಅಧಿಕಾರ ಸ್ವೀಕಾರ



ಮೈಸೂರು, ಜೂ. 3–ರಾಜ್ಯದ ಪ್ರಥಮ ಬಾನುಲಿ ಕೇಂದ್ರ ಮೈಸೂರು ಆಕಾಶವಾಣಿಯ ನೂತನ ಉಪನಿರ್ದೇಶಕರಾಗಿ ಉಮೇಶ್ ಎಸ್.ಎಸ್. ಅವರು ಇದೇ ಮೇ 31ರಂದು ಅಧಿಕಾರ ಸ್ವೀಕರಿಸಿದ್ದಾರೆ. ಇವರು ಭಾರತೀಯ ಪ್ರಸಾರ ಸೇವೆ ಪ್ರಸಾರ ಭಾರತಿಯ ಮೈಸೂರು ಕೇಂದ್ರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಲಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದ ಉಮೇಶ್ ಅವರು ಹಲವು ಜನಪ್ರಿಯ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡಿದ್ದು ಅವುಗಳಲ್ಲಿ ನಾಟಕಗಳು, ಸಂದರ್ಶನಗಳು ಮತ್ತು 'ಕಾದಂಬರಿ ವಿಹಾರ' ಬಾನುಲಿ ಸರಣಿಗಳು ಜನಮೆಚ್ಚುಗೆಗೆ ಪಾತ್ರವಾಗಿವೆ. ಇವರು ನಿರ್ದೇಶಿಸಿದ ನಾಟಕಗಳು ಮತ್ತು ರೂಪಕಗಳಿಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಆಕಾಶವಾಣಿ ಪುರಸ್ಕಾರ ದೊರೆತಿದೆ.

ಇಂದು ಸರಳವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ



ಮೈಸೂರು, ಜೂ.3– ಲೋಕಸಭಾ ಚುನಾವಣೆ ಹಾಗೂ ಕರ್ನಾಟಕ ವಿಧಾನಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರಗಳ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜೂನ್ 4ರಂದು ಬೆಳಗ್ಗೆ 9.30 ಗಂಟೆಗೆ ಕೆ.ಆರ್ ವೃತ್ತದಲ್ಲಿರುವ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇರಳದಲ್ಲಿ ಕುರಿ, ಕೋಳಿ, ಮೇಕೆ, ಎಮ್ಮೆ ಬಲಿ ಕೊಟ್ಟು ಶತ್ರು ಭೈರವಿ ಯಾಗದ ತನಿಖೆಗೂ ಎಸ್‌ಐಟಿ ರಚಿಸಲಿ

- ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ವ್ಯಂಗ್ಯ
- ಸಿಎಂ, ಡಿಸಿಎಂ ಮೇಲೆ ವಾಮಾಚಾರ ಎಂದರೆ ಸಾಮಾನ್ಯವೇ!
- ನಮಗಾಗಿ ನಾವು ಪೂಜೆ ಸಲ್ಲಿಸುತ್ತೇನೆ; ಇತರರಿಗೆ ಕೇಡು ಬಯಸಲ್ಲ



ಬೆಂಗಳೂರು, ಜೂ. 3(ಕೆಎಂಶಿ)– ಕೇರಳದಲ್ಲಿ ಕುರಿ, ಕೋಳಿ, ಮೇಕೆ, ಎಮ್ಮೆ ಬಲಿಯ ಬಗ್ಗೆ ತನಿಖೆ ನಡೆಸಲು ರಾಜ್ಯ ಸರ್ಕಾರ ಇನ್ನೊಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಮಾಡಲಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಪ್ರತಿಯೊಂದಕ್ಕೂ ಎಸ್‌ಐಟಿ ರಚನೆ ಮಾಡಿ ತನಿಖೆ ಮಾಡಿಸುತ್ತದೆ. ಬಲಿ ವಿಷಯಕ್ಕೂ ತನಿಖೆ ಮಾಡಿಸಲಿ ಎಂದರು. ಇದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಅಲ್ಲವೇ, ನಾನು ಮಾಧ್ಯಮಗಳ ಮೂಲಕವೇ ಗಮನಿಸಿದೆ. ಮುಖ್ಯಮಂತ್ರಿ ಮತ್ತು ನನ್ನ ವಿರುದ್ಧ ಮಾಡಿಸುತ್ತಿರುವ ಶತ್ರು ಭೈರವಿ ಯಾಗ ಎಂದು ಹೇಳಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ವಿರುದ್ಧ ವಾಮಾಚಾರ ಎಂದರೆ ಸಾಮಾನ್ಯವೇ! ಹಾಗಾಗಿ ಅದರ ತನಿಖೆಗೂ ಒಂದು ಎಸ್‌ಐಟಿ ರಚನೆ ಮಾಡಲಿ.

ಇದು ಮಾಟ ಮಂತ್ರ ಎಂದು ಉಪಮುಖ್ಯಮಂತ್ರಿ ಕಥೆ ಕಟ್ಟಿದ್ದಾರೆ, ಅವರ ಅಷ್ಟೂ ಹೇಳಿಕೆಯನ್ನು ಗಮನಿಸಿದ್ದೇನೆ; 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು' ಎಂದು ದಾಸಶ್ರೇಷ್ಠ ಪುರಂದರದಾಸರು ಹೇಳಿದ್ದಾರೆ.

ಉಪಮುಖ್ಯಮಂತ್ರಿ ಹೇಳಿಕೆ ಕೊಡುವ ಮುನ್ನ ತಾವು ಅಲಂಕರಿಸಿರುವ ಹುದ್ದೆಯ ಘನತೆ ಅರಿಯಬೇಕಿತ್ತು. ಅವರಿಗೆ ಆ ಸ್ಥಾನದ ಮೌಲ್ಯ ಇನ್ನೂ ಅರ್ಥವಾಗಿಲ್ಲ. 'ಲೋಕದ ಡೊಂಕ ನೀವೇಕೆ ತಿದ್ದುವಿರಿ..' ಎಂದು ಈ ಹಿಂದೆ ಉಪಮುಖ್ಯಮಂತ್ರಿ ಹೇಳಿದ್ದ ವಚನವನ್ನು ಉಲ್ಲೇಖಿಸಿ, ನಾನು ಅವರ ಮಾತನ್ನು ಅವರಿಗೇ ಹೇಳಲು ಬಯಸುತ್ತೇನೆ. ಮೊದಲು ನಿಮ್ಮ ಮನಸ್ಸು ಶುದ್ಧ ಮಾಡಿಕೊಳ್ಳಿ. ಅದೆಂತದೋ ಶತ್ರು ಭೈರವಿ ಯಾಗವಂತೆ, ಅವರಿಗೆ ಭಕ್ತಿ ಇದೆಯಂತೆ, ಪವಿತ್ರ ಪುಣ್ಯಕ್ಷೇತ್ರ ಶ್ರೀರಾಜರಾಜೇಶ್ವರಿ ಅಮ್ಮನವರ ಸನ್ನಿಧಾನಕ್ಕೆ ಅವರೂ ಹೋಗಿದ್ದಾರೆ. ಅವರಿಗೆ ಈ ಯಾಗದ ಬಗ್ಗೆ ಪೂರ್ಣ ಮಾಹಿತಿ ಇರಬೇಕು. ಅಲ್ಲಿ ಯಾವ ರೀತಿಯ ಪೂಜೆ ನಡೆಯುತ್ತದೆ. ಆ ಕ್ಷೇತ್ರ ಮಹಿಮೆ ಏನು ಎನ್ನುವುದು ಅವರಿಗೆ ತಿಳಿದಿರುತ್ತದೆ ಅಲ್ಲವೇ, ಹಾಗಿದ್ದರೂ ಅವರು ಸುಳ್ಳು ಹೇಳಿ ಶ್ರೀ ರಾಜರಾಜೇಶ್ವರಿ ಅಮ್ಮನವರಿಗೆ ಅಪಚಾರ ಎಸಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅವರು ನಮ್ಮ ಕುಟುಂಬದ ಮೇಲೆ ಏನೆಲ್ಲಾ ಚಿತಾವಣೆ ನಡೆಸುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ನಮ್ಮ ಕುಟುಂಬದಲ್ಲಿ ಕುರಿ, ಮೇಕೆ, ಎಮ್ಮೆ, ಕೋಣ ಕಡಿಯೋದು ಯಾವತ್ತೂ ನಡೆದಿಲ್ಲ. ಅಂತಹ ಸಂಪ್ರದಾಯ ನಮ್ಮ ಕುಟುಂಬ ದಲ್ಲಿ ಇಲ್ಲ. ಪ್ರತಿ ತಿಂಗಳು ನಾನು ಜೆಪಿ ನಗರದಲ್ಲಿರುವ ಶ್ರೀ ತಿರುಮಲಗಿರಿ ವೆಂಕಟೇಶ್ವರಸ್ವಾಮಿ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸುತ್ತೇನೆ. ನಮ್ಮ ತಂದೆಯವರು ಪೂಜೆ ಮಾಡಿಸುತ್ತಾರೆ. ನಮ್ಮಿಬ್ಬರ ಆರೋಗ್ಯದ ಸಮಸ್ಯೆ ಹಿನ್ನೆಲೆಯಲ್ಲಿ ಪೂಜೆ ಮಾಡಿ ದೈವಕ್ಕೆ ಪ್ರಾರ್ಥನೆ ಸಲ್ಲಿಸುತ್ತೇವೆ. ಇನ್ನೊಬ್ಬರಿಗೆ ಕೇಡು ಬಯಸಲು ಪೂಜೆ ಮಾಡಿಲ್ಲ, ಮಾಡುವುದೂ ಇಲ್ಲ.

ಕೋಣ, ಹಂದಿ ಕೂಯ್ದು ನಾವು ಕೇಡು ಬಯಸಲ್ಲ. ಕೇಡು ಬಯಸೋದು ಅವರ ಸಂಸ್ಕೃತಿ. ದೇವೇಗೌಡರ ಅರವತ್ತು ವರ್ಷಗಳ ರಾಜಕೀಯ ಜೀವನದಲ್ಲಿ 3–4 ವರ್ಷ ಬಿಟ್ಟರೆ ಉಳಿದಿದ್ದು ಎಲ್ಲಾ ವಿರೋಧಪಕ್ಷದಲ್ಲೇ. ಒಂದು ವೇಳೆ ಕುರಿ, ಕೋಣ ಬಲಿ ಕೊಟ್ಟರೆ ಅಧಿಕಾರ ಸಿಗುತ್ತೆ ಎನ್ನುವುದಾದರೆ ಇಷ್ಟೆಲ್ಲಾ ಕಷ್ಟ ಏಕೆ ಪಡಬೇಕು ಎಂದರು.

ಆದಿವಾಸಿಗಳಿಗೆ ಸರ್ಕಾರ ನ್ಯಾಯ ಒದಗಿಸಲಿ

ಎಸ್‌ಟಿ ಜನಾಂಗಕ್ಕೆ ಒಳ ಮೀಸಲಾತಿ ನೀಡಲು ನಟ ಚೇತನ್ ಅಹಿಂಸಾ ಒತ್ತಾಯ

ಮಡಿಕೇರಿ, ಜೂ.3–ಆದಿವಾಸಿಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಒದಗಿಸಲು ಎಸ್‌ಟಿ ಜನಾಂಗಕ್ಕೆ ಒಳ ಮೀಸಲಾತಿ ನೀಡಬೇಕು ಎಂದು ನಟ ಹಾಗೂ ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಒತ್ತಾಯಿಸಿದರು.

ಮಡಿಕೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಇದ್ದ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಒಳ ಮೀಸಲಾತಿ ತಂದು ಕೆಲ ಸಮುದಾಯಗಳಿಗೆ ನೆರವಾಗಿದೆ. ಇದೀಗ ರಾಜ್ಯದಲ್ಲಿ ಅಧಿಕಾರದಲ್ಲಿರುವ ಅಹಿಂದ ಪರ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಸರ್ಕಾರ ಎಸ್‌ಟಿ ಜನಾಂಗಕ್ಕೆ ಒಳ ಮೀಸಲಾತಿ ನೀಡುವ ಮೂಲಕ 49 ಸಮುದಾಯಗಳಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.


ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಟ ಚೇತನ್ ಅಹಿಂಸಾ ಮಾತನಾಡಿದರು.

ಎಸ್‌ಟಿ ಜನಾಂಗಕ್ಕೆ ಒಳ ಮೀಸಲಾತಿ ನೀಡಲು ಸರ್ಕಾರ ಸಮಿತಿ ರಚಿಸಬೇಕು. ಈ ಬೇಡಿಕೆ ಕುರಿತು ಆದಿವಾಸಿಗಳ ಪ್ರದೇಶಗಳಲ್ಲಿ ಜನಜಾಗೃತಿ ಮೂಡಿಸಿ, ಸರ್ಕಾರದ ಗಮನ ಸೆಳೆಯಲಾಗುವುದು. ಜಾತಿ ಜನಗಣತಿ ವರದಿ ಬಿಡುಗಡೆ ಮಾಡಿದರೆ ನಿಖರವಾದ ಅಂಕಿ ಅಂಶ ಲಭಿಸಲಿದ್ದು, ಜನಸಂಖ್ಯಾ ಆಧಾರದಲ್ಲಿ ಮೀಸಲಾತಿ ನೀಡಿ ಆದಿವಾಸಿಗಳಿಗೆ ನ್ಯಾಯ ಒದಗಿಸಬಹುದು. ಆದರೆ, ಪ್ರಬಲ ಜಾತಿಗಳ ಒತ್ತಡಕ್ಕೆ ಮಣಿಯುತ್ತಿರುವ ಸರ್ಕಾರ ವರದಿ ಹೊರ ತರಲು ತಡ ಮಾಡುತ್ತಿದೆ ಎಂದು ಆರೋಪಿಸಿದರು.

ಲೈನ್‌ಮನೆ ಮುಕ್ತಗೊಳಿಸಿ: ಕಾರ್ಮಿಕರಾಗಿ ದುಡಿಯುತ್ತಿರುವ ಆದಿವಾಸಿಗಳನ್ನು ಲೈನ್ ಮನೆಗಳಿಂದ ಮುಕ್ತಗೊಳಿಸಬೇಕು. ಕೆಲ ತೋಟಗಳಲ್ಲಿ ಇಂದಿಗೂ ಶೋಷಿತ ಪದ್ಧತಿ ಜಾರಿಯಲ್ಲಿದೆ. ಕಾರ್ಮಿಕರು ಪಡೆದ ಸಾಲಕ್ಕೆ ಬಡ್ಡಿ, ಚಕ್ರಬಡ್ಡಿ ವಿಧಿಸುವ ಶೋಷಣೆ ಇದೆ ಎಂದು ದೂರಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ಗ್ರಾಮೀಣ ಪ್ರದೇಶದ ತೋಟಗಳಲ್ಲಿ ಆದಿವಾಸಿಗಳು ಅನುಭವಿಸುತ್ತಿರುವ ಸಂಕಷ್ಟದ ಬಗ್ಗೆ ಅರಿಯಬೇಕು. ಲೈನ್ ಮನೆಗಳಲ್ಲಿರುವ ಆದಿವಾಸಿ ಕಾರ್ಮಿಕರ ಕಷ್ಟಗಳನ್ನು ಅಧ್ಯಯನ ಮಾಡಿ, ಲೈನ್ ಮನೆಗಳಿಂದ ಮುಕ್ತಗೊಳಿಸಿ ಅವರಿಗೆ ಸ್ವತಂತ್ರ ಬದುಕು ಕಲ್ಪಿಸಲು ಸರ್ಕಾರ ಸಮಿತಿ ರಚಿಸಬೇಕು ಎಂದು ಒತ್ತಾಯಿಸಿದರು.

ರಾಜೀನಾಮೆಗೆ ಆಗ್ರಹ: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಆರೋಪ ಕೇಳಿ ಬಂದಿದ್ದು, ತನಿಖೆ ಪೂರ್ಣಗೊಳ್ಳುವವರೆಗೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ಸಚಿವ ಸ್ಥಾನದಿಂದ ನಿರ್ಗಮಿಸಬೇಕು. ಅವರು ರಾಜೀನಾಮೆ ನೀಡದಿದ್ದಲ್ಲಿ ಮುಖ್ಯಮಂತ್ರಿಗಳು ರಾಜೀನಾಮೆ ಪಡೆಯಬೇಕು ಎಂದು ಚೇತನ್ ಆಗ್ರಹಿಸಿದರು.

ಎಸ್‌ಐಟಿ ತನಿಖೆಯ ಮೇಲೆ ನಂಬಿಕೆ ಇದೆ. ಆದರೆ, ಪರಿಶಿಷ್ಟರ ಅನುದಾನ ಅವ್ಯವಹಾರ ಆಗಿರುವುದರಿಂದ ಸಿಬಿಐ ತನಿಖೆ ನಡೆದರೆ ಉತ್ತಮ. ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಲು ನಾಗೇಂದ್ರ ಅವರಿಗೆ ಏನು ಅರ್ಹತೆ ಇದೆ? ಬಿಜೆಪಿ ಸರ್ಕಾರ ಶೇ.40ರಷ್ಟು ಕಮಿಷನ್ ಪಡೆಯುತ್ತಿತ್ತು ಎಂದು ಆರೋಪ ಮಾಡಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಭ್ರಷ್ಟಾಚಾರದಲ್ಲಿ ಬಿಜೆಪಿಗಿಂತ ಕಡಿಮೆ ಇಲ್ಲ ಎಂದು ಟೀಕಿಸಿದರು.

ಕಾಂಗ್ರೆಸ್, ಬಿಜೆಪಿ ಒಂದೇ

ಬಿಜೆಪಿ ಹಾಗೂ ಕಾಂಗ್ರೆಸ್ ಒಂದೇ. ಚುನಾವಣೆ ಸಂದರ್ಭ ಕಾರು, ಬಸ್‌ಗಳಲ್ಲಿ ಬಂದು ಮತ ಕೇಳುವ ರಾಜಕಾರಣಿಗಳು ಅಧಿಕಾರಕ್ಕೆ ಬಂದ ಮೇಲೆ ತಿರುಗಿ ನೋಡುತ್ತಿಲ್ಲ. ಜೇನು ಕುರುಬ, ಬೆಟ್ಟ ಕುರುಬ, ಎರವ, ಪಣಿಯರವ ಸೇರಿದಂತೆ ಆದಿವಾಸಿಗಳನ್ನು ಗುರುತಿಸುತ್ತಿಲ್ಲ ಎಂದು ದಿಡ್ಡಳ್ಳಿ ಹೋರಾಟಗಾರ್ತಿ ಜೆ.ಕೆ.ಅನಿತಾ ಅಸಮಾಧಾನ ವ್ಯಕ್ತಪಡಿಸಿದರು.

ದಿಡ್ಡಳ್ಳಿ ನಿರಾಶ್ರಿತರಿಗೆ ನಿರ್ಮಿಸಲಾದ ಮನೆಗಳಲ್ಲಿ ಮೂಲಸೌಲಭ್ಯಗಳಿಲ್ಲ. ಅರ್ಜಿ ಸಲ್ಲಿಸಿದರೂ ಸರ್ಕಾರದ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ. ದಿಡ್ಡಳ್ಳಿ ಹೋರಾಟದ ವೇಳೆ ಮೊದಲು ಮನೆ ನೀಡುತ್ತೇವೆ, ನಂತರ ಕೃಷಿಗಾಗಿ ತಲಾ 3 ಎಕರೆ ಭೂಮಿ ಕೊಡುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ, ಇಲ್ಲಿಯವರೆಗೆ ನಮಗೆ ಭೂಮಿ ನೀಡಿಲ್ಲ. ದುಡಿಮೆಗೆ ಏನೂ ಇಲ್ಲದ ಆದಿವಾಸಿಗಳು ಬಸವನಹಳ್ಳಿ ಮತ್ತು ಬ್ಯಾಡಗೊಟ್ಟದ ಪುನರ್ ವಸತಿಗಳಿಂದ ಮತ್ತೆ ಲೈನ್ ಮನೆಗಳಿಗೆ ತೆರಳುತ್ತಿದ್ದಾರೆ. ಹಲವು ಮನೆಗಳು ಖಾಲಿ ಬಿದ್ದಿವೆ ಎಂದು ಬೇಸರ ವ್ಯಕ್ತಪಡಿಸಿದರು. ಕನಿಷ್ಠ ತಲಾ 2 ಎಕರೆ ಭೂಮಿಯನ್ನಾದರು ಸರಕಾರ ನೀಡಬೇಕೆಂದು ಅನಿತಾ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಹೋರಾಟಗಾರರಾದ ಜೆ.ಕೆ. ಜಯ, ಎ.ಅರ್ಜುನ್ ದೇವ್ ಉಪಸ್ಥಿತರಿದ್ದರು.

ನೈರುತ್ಯದಲ್ಲಿ ಶಾಂತಿಯುತ ಮತದಾನ

ಜಿಲ್ಲೆಯಲ್ಲಿ ಪದವೀಧರ ಕ್ಷೇತ್ರ - ಶೇ.81.09, ಶಿಕ್ಷಕರ ಕ್ಷೇತ್ರ - ಶೇ.86.88ರಷ್ಟು ಮತದಾನ


ಮಡಿಕೇರಿ ನಗರಸಭಾ ಕಚೇರಿಯಲ್ಲಿ ಪದವೀಧರರ ಕ್ಷೇತ್ರದ ಚುನಾವಣಾ ಮತಗಟ್ಟೆಯಲ್ಲಿ ಡಿಸಿ ವೆಂಕಟ್ ರಾಜಾ, ಜಿಪಂ ಸಿಇಒ ವರ್ಣಿತ್ ನೇಗಿ, ಎಸಿ ವಿನಾಯಕ ನರ್ವಾಡೆ ಸರದಿ ಸಾಲಿನಲ್ಲಿ ನಿಂತು ಮತದಾನ ಮಾಡಿದರು.

ಮಡಿಕೇರಿ: ವಿಧಾನಪರಿಷತ್‌ನ ನೈರುತ್ಯ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನ ಸೋಮವಾರ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಶಾಂತಿಯುತವಾಗಿ ನಡೆಯಿತು.

ಜಿಲ್ಲಾ ಕೇಂದ್ರ ಮಡಿಕೇರಿ, ತಾಲೂಕು ಕೇಂದ್ರಗಳಾದ ವಿರಾಜಪೇಟೆ, ಸೋಮವಾರಪೇಟೆ, ಪೊನ್ನಂಪೇಟೆ ಮತ್ತು ಕುಶಾಲನಗರದ ಮತಗಟ್ಟೆಗಳಲ್ಲಿ ಬೆಳಗ್ಗಿನಿಂದಲೇ ಶಿಕ್ಷಕರು ಮತ್ತು ಪದವೀಧರರು ಸರದಿ ಸಾಲಿನಲ್ಲಿ ನಿಂತು ಉತ್ಸಾಹದಿಂದ ಮತದಾನ ಮಾಡುತ್ತಿದ್ದ ದೃಶ್ಯ ಕಂಡು ಬಂತು.

ನೈರುತ್ಯ ಪದವೀಧರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಯಲ್ಲಿ ಒಟ್ಟು 3909 ಮತಗಳಿದ್ದು, ಈ ಪೈಕಿ 3170 ಮತಗಳು ಚಲಾವಣೆಯಾಗುವ ಮೂಲಕ ಶೇ. 81.09 ಮತದಾನವಾಗಿದೆ. ಶಿಕ್ಷಕರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು 1578 ಮತಗಳ ಪೈಕಿ 1371 ಮತಗಳು ಚಲಾವಣೆಯಾಗಿವೆ. ಶಿಕ್ಷಕರ ಕ್ಷೇತ್ರದಲ್ಲಿ ಶೇ.86.88 ಮತದಾನವಾಗಿದೆ.

ಮಡಿಕೇರಿಯ ನಗರಸಭಾ ಕಚೇರಿಯಲ್ಲಿ ಪದವೀಧರರ ಕ್ಷೇತ್ರದ ಚುನಾವಣಾ ಮತಗಟ್ಟೆಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪಂಚಾಯಿತಿ ಸಿಇಒ ವರ್ಣಿತ್ ನೇಗಿ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ ಅವರು ಒಟ್ಟಾಗಿ ಬಂದು ಸರದಿ ಸಾಲಿನಲ್ಲಿ ನಿಂತು ಮತದಾನ ಮಾಡಿದರು. ನೈಋತ್ಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ. ಮಂಜುನಾಥ್‌ಕುಮಾರ್ ಕುಶಾಲನಗರ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಮಾಜಿ ಶಾಸಕ ಕೆ.ಜಿ. ಬೋಪಯ್ಯ ಮಡಿಕೇರಿಯ ನಗರಸಭೆಯ ಪದವೀಧರ ಕ್ಷೇತ್ರದ ಮತಗಟ್ಟೆಯಲ್ಲಿ ತಮ್ಮ ಹಕ್ಕನ್ನು ಚಲಾಯಿಸಿದರು. ಮತಗಟ್ಟೆಗಳಿಗೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಜಿಲ್ಲಾಧಿಕಾರಿ ಸಂತಸ: ಮಡಿಕೇರಿ ನಗರಸಭಾ ಕಚೇರಿಯ ಮತಗಟ್ಟೆಯಲ್ಲಿ ಮತದಾನ ಮಾಡಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲೆಯ ಶಿಕ್ಷಕರು ಮತ್ತು ಪದವೀಧರರು ಉತ್ಸಾಹದಿಂದ ಮತದಾನ ಮಾಡಿರುವುದು ಸಂತಸ ತಂದಿದೆ. ಪದವೀಧರ ಕ್ಷೇತ್ರದ ಚುನಾವಣೆಗೆ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ತಾನು ಮತದಾನ ಮಾಡಿದ್ದೇನೆ. ಇದು ಹಕ್ಕು ಮತ್ತು ಹೆಮ್ಮೆಯನ್ನು ಉಂಟು ಮಾಡಿದೆ ಎಂದು ಸಂತಷ ವ್ಯಕ್ತಪಡಿಸಿದರು.

ಬಾಲಕ್ಕ ನಿಧನ



ನಾಪೋಕ್ಲು: ಸಂಪಾಜೆ ಗ್ರಾಮದ ದಿ.ದುಗ್ಗಳ ಚರ್‌ಂಬಣ್ಣ ಅವರ ಪತ್ನಿ ಬಾಲಕ್ಕ ಸೋಮವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸಂಪಾಜೆಯಲ್ಲಿರುವ ಮೃತರ ಪುತ್ರ ಆನಂದ ಅವರ ಮನೆ ಬಳಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಜಿಲ್ಲೆಯಲ್ಲಿ ಲೋಕಸಭಾ ಫಲಿತಾಂಶದ ಕುತೂಹಲ

ಮಡಿಕೇರಿ, ಜೂ.3–ರಾಜ್ಯದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳ ಪೈಕಿ ಕೊಡಗು–ಮೈಸೂರು ಕ್ಷೇತ್ರ ಕೂಡ ಒಂದಾಗಿತ್ತು. ಎನ್‌ಡಿಎ ಅಭ್ಯರ್ಥಿ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ನಡುವೆ ನೇರ ಸ್ಪರ್ಧೆ ನಡೆದಿದ್ದು, ಜಿಲ್ಲೆಯಲ್ಲಿ ಜನರು ಮತ ಎಣಿಕೆಯ ಅಂತಿಮ ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ.

ಇಬ್ಬರು ಅಭ್ಯರ್ಥಿಗಳ ಪೈಕಿ ವಿಜಯ ಮಾಲೆ ಯಾರ ಕೊರಳನ್ನು ಅಲಂಕರಿಸಲಿದೆ? ಯಾರು ನಮ್ಮ ನೂತನ ಸಂಸದರಾಗಲಿದ್ದಾರೆ ಎಂಬ ಕುತೂಹಲ ಜಿಲ್ಲೆಯಲ್ಲಿ ಮನೆ ಮಾಡಿದೆ. ಬಿಜೆಪಿ ಹಿಡಿತದಲ್ಲಿದ್ದ 2 ವಿಧಾನಸಭಾ ಕ್ಷೇತ್ರಗಳನ್ನು ಈ ಬಾರಿ ಕಾಂಗ್ರೆಸ್ ತನ್ನದಾಗಿಸಿಕೊಂಡು ಬಿಜೆಪಿಯ ಭದ್ರಕೋಟೆಗೆ ಲಗ್ಗೆ ಹಾಕಿದೆ. ಕಾಂಗ್ರೆಸ್‌ನಿಂದ ಮಡಿಕೇರಿ ಕ್ಷೇತ್ರದಲ್ಲಿ ಡಾ.ಮಂತರ್‌ಗೌಡ ಮತ್ತು ವಿರಾಜಪೇಟೆ ಕ್ಷೇತ್ರದಲ್ಲಿ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇನ್ನು ಲೋಕಸಭಾ ಚುನಾವಣೆಯಲ್ಲಿ ಯಾವ ಅಭ್ಯರ್ಥಿಯ ಪರ ಕೊಡಗಿನ ಮತದಾರರು ಒಲವು ತೋರಿದ್ದಾರೆ ಎಂಬ ರಹಸ್ಯ ಮಂಗಳವಾರ ಬಯಲಾಗಲಿದೆ.

ಇನ್ನು ಮೈಸೂರಿನಲ್ಲಿ ಮತ ಎಣಿಕೆ ಕಾರ್ಯ ನಡೆಯಲಿದ್ದು, ಬಿಜೆಪಿ ಮತ್ತು ಕಾಂಗ್ರೆಸ್‌ನ ನೂರಾರು ಮುಖಂಡರು ಮತ್ತು ಕಾರ್ಯಕರ್ತರು ಅತ್ತ ಕಡೆ ತೆರಳಲು ಸಿದ್ಧರಾಗಿದ್ದಾರೆ. ತಮ್ಮ ಪಕ್ಷದ ಅಭ್ಯರ್ಥಿ ಗೆಲುವು ದಾಖಲಿಸಿದ ಸಂದರ್ಭ ವಿಜಯೋತ್ಸವ ಆಚರಿಸಲು ಪಕ್ಷಗಳಿಂದ ತಯಾರಿ ನಡೆದಿದೆ.

ಕೊಡಗು ಜಿಲ್ಲೆಯಲ್ಲಿ ಜೂ.4ರಂದು ಸೆಕ್ಷನ್ 144 ಅಡಿ ನಿಷೇಧಾಜ್ಞೆ ಹೊರಡಿಸಲಾಗಿದ್ದು, ಈ ನಡುವೆ 'ಮೋದಿಯ ಅಲೆಯೋ, ಉಚಿತ ಯೋಜನೆಗಳ ಫಲವೋ' ಎಂಬುದು ನೂತನ ಸಂಸದರ ಗೆಲುವಿನ ಮೂಲಕ ನಿರ್ಧಾರವಾಗಲಿದೆ ಎಂದು ಜನಸಾಮಾನ್ಯರು ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಿದ್ದಾರೆ.

ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ

ಮಡಿಕೇರಿ, ಜೂ.3– ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು, 419.93 ಗ್ರಾಂ ಗಾಂಜಾ, 1 ದ್ವಿಚಕ್ರ ವಾಹನ ಹಾಗೂ 2 ಮೊಬೈಲ್ ವಶಪಡಿಸಿಕೊಂಡಿದ್ದಾರೆ.

ಅಭ್ಯತ್ ಮಂಗಲದ ನಿವಾಸಿ ಎಚ್.ಕೆ.ಪ್ರಶಾಂತ್ ಹಾಗೂ ಎಂ.ಬಾಡಗ ನಿವಾಸಿ ಎ.ಎಸ್.ಬೋಪಯ್ಯ ಬಂಧಿತರು. ಈ ಇಬ್ಬರು ಮುರ್ನಾಡು ಗ್ರಾಮದ ಕುಂಬಳದಾಳು ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ವೇಳೆ ಪೊಲೀಸರು ದಾಳಿ ನಡೆಸಿದ್ದಾರೆ. ಮಡಿಕೇರಿ ಡಿವೈಎಸ್‌ಪಿ ಮಹೇಶ್‌ಕುಮಾರ್, ವೃತ್ತ ನಿರೀಕ್ಷಕ ಯು. ಉಮೇಶ್, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳಾದ ಶ್ರೀನಿವಾಸಲು, ರಮೇಶ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅರ್ಜಿ ಅವಧಿ ವಿಸ್ತರಣೆಗೆ ಆಗ್ರಹಿಸಿ ಮನವಿ ಸಲ್ಲಿಕೆ


ಅರ್ಜಿ ಅವಧಿ ವಿಸ್ತರಿಸುವಂತೆ ಆಗ್ರಹಿಸಿ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್‌ನಿಂದ ವಿರಾಜಪೇಟೆ ಕಾರ್ಮಿಕ ನಿರೀಕ್ಷಕ ಪಿ.ಎಂ.ನಿಖಿಲ್ ಚಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ವಿರಾಜಪೇಟೆ, ಜೂ.3– ಕಟ್ಟಡ ಮತ್ತು ಇತರೆ ಕಾರ್ಮಿಕರ ಸೌಲಭ್ಯಗಳಿಗೆ ಸಲ್ಲಿಸುವ ಅರ್ಜಿ ಅವಧಿಯನ್ನು ಆ.31ರವರೆಗೆ ವಿಸ್ತರಿಸಬೇಕು ಎಂದು ಆಗ್ರಹಿಸಿ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ನೇತೃತ್ವದಲ್ಲಿ ವಿರಾಜಪೇಟೆ ಕಾರ್ಮಿಕ ನಿರೀಕ್ಷಕ ಪಿ.ಎಂ.ನಿಖಿಲ್ ಚಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾ ಅಧ್ಯಕ್ಷ ಎ.ಸಿ.ಸಾಬು ಮಾತನಾಡಿ, ಚುನಾವಣೆ ನೀತಿ ಸಂಹಿತೆ ನೆಪದಲ್ಲಿ ಸರ್ಕಾರ ತಡೆ ಹಿಡಿದಿರುವ ಕಟ್ಟಡ ಕಾರ್ಮಿಕರ ಸೌಲಭ್ಯ ಮತ್ತು ಕಾರ್ಮಿಕರ ಹೊಸ ಅರ್ಜಿ ಹಾಗೂ ನವೀಕರಣ ಕುರಿತು ಉಂಟಾಗುತ್ತಿರುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕು ಎಂದು ಆಗ್ರಹಿಸಿದರು.

ಕಾರ್ಮಿಕ ಇಲಾಖೆಯಿಂದ ಇತರೆ ವಸ್ತುಗಳನ್ನು ಖರೀದಿಸುವುದನ್ನು ನಿಲ್ಲಿಸಿ, ಸಹಾಯಧನವನ್ನು ನೇರವಾಗಿ ವರ್ಗಾವಣೆ ಮೂಲಕ ಪಾವತಿಸಬೇಕು. ಸರ್ಕಾರ ಅರ್ಹ ಅರ್ಜಿದಾರರಿಗೆ ವೈದ್ಯಕೀಯ ವೆಚ್ಚ ನೀಡಬೇಕು. ಕಟ್ಟಡ ಕಾರ್ಮಿಕರ ಮಕ್ಕಳಾದ ಅಮೃತಾ ಮತ್ತು ಅಕ್ಷತಾಗೆ ಹೈಕೋರ್ಟ್ ಆದೇಶದಂತೆ ಕಾರ್ಮಿಕ ಕಲ್ಯಾಣ ಮಂಡಳಿ 55–60 ಸಾವಿರ ರೂ. ನೀಡುತ್ತಿಲ್ಲ. ಕಾರ್ಮಿಕ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಖಜಾಂಚಿ ಸಿ.ಎ.ಹಮೀದ್, ನಗರಾಧ್ಯಕ್ಷ ಕೆ.ಕೆ.ಹರಿದಾಸ್, ಸದಸ್ಯರಾದ ಖಾಸಿಂ, ಸುರೇಶ್, ಅಲಿ ಮತ್ತಿತರರು ಹಾಜರಿದ್ದರು.

ಚಾಮರಾಜನಗರ ನೂತನ ಸಂಸದ ಯಾರು?

• ಮತ ಎಣಿಕೆಗೆ ಜಿಲ್ಲಾಡಳಿತ ಸಕಲ ಸಿದ್ಧತೆ • ಮಧ್ಯಾಹ್ನದೊಳಗೆ ಹೊರ ಬೀಳಲಿರುವ ಫಲಿತಾಂಶ


ಚಾಮರಾಜನಗರದ ಬೇಡರಪುರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಮತ ಎಣಿಕೆ ಕೇಂದ್ರವನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ಪರಿಶೀಲಿಸಿದರು.

ಚಾಮರಾಜನಗರ, ಜೂ.3–ಲೋಕಸಭಾ ಚುನಾವಣೆ ಮತ ಎಣಿಕೆ ಕಾರ್ಯ ಮಂಗಳವಾರ (ಜೂ.4) ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದ್ದು, ಮತ ಎಣಿಕೆಗಾಗಿ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಪೂರ್ಣಗೊಳಿಸಲಾಗಿದೆ.

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಎಸ್.ಬಾಲರಾಜು, ಕಾಂಗ್ರೆಸ್ ಅಭ್ಯರ್ಥಿಯಾಗಿ ಸುನೀಲ್ ಬೋಸ್, ಬಿಎಸ್‌ಪಿ ಅಭ್ಯರ್ಥಿ ಕೃಷ್ಣಮೂರ್ತಿ ಸೇರಿದಂತೆ ಕಣದಲ್ಲಿರುವ ಒಟ್ಟು 14 ಅಭ್ಯರ್ಥಿಗಳ ಭವಿಷ್ಯ ಮಧ್ಯಾಹ್ನದೊಳಗೆ ಹೊರ ಬೀಳಲಿದ್ದು, ಚಾಮರಾಜನಗರದ ನೂತನ ಸಂಸದ ಯಾರು? ಎಂಬ ಪ್ರಶ್ನೆಗೆ ಉತ್ತರ ದೊರೆಯಲಿದೆ.

ಸಿದ್ಧತೆ ಪೂರ್ಣ: ಕ್ಷೇತ್ರ ವ್ಯಾಪ್ತಿಯ ಹೆಚ್.ಡಿ. ಕೋಟೆ, ನಂಜನಗೂಡು, ವರುಣ, ತಿ.ನರಸೀಪುರ, ಹನೂರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳಿಗೆ ಕಳೆದ ಒಂದೂವರೆ ತಿಂಗಳ ಹಿಂದೆ (ಏ.26) ಮತದಾನ ನಡೆದಿದ್ದು, ಸದರಿ ಎಂಟು ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯ ಜೂ.4ರಂದು ನಗರದ ನಂಜನಗೂಡು ರಸ್ತೆಯ ಬೇಡರಪುರದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ.

112 ಟೇಬಲ್ ಸ್ಥಾಪನೆ: ಪ್ರತಿ ವಿಧಾನಸಭಾ ಕ್ಷೇತ್ರದ ಮತ ಎಣಿಕೆಯು ತಲಾ 14 ಟೇಬಲ್‌ಗಳಂತೆ ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳು ಸೇರಿ ಒಟ್ಟು 112 ಟೇಬಲ್‌ಗಳನ್ನು ಸ್ಥಾಪಿಸಲಾಗಿದೆ.

ಪ್ರತಿ ಟೇಬಲ್‌ಗೆ ತಲಾ 14 ಮತ ಎಣಿಕೆ ಮೇಲ್ವಿಚಾರಕರು, 14 ಎಣಿಕೆ ಸಹಾಯಕರು, 14 ಮೈಕ್ರೋ ಅಬ್ಸರ್ವರ್ ಹಾಗೂ ಅಂಚೆ ಮತ ಪತ್ರ ಎಣಿಕೆಗೆ 5 ಮಂದಿ ಸೇರಿ ಒಟ್ಟು 45 ಸಿಬ್ಬಂದಿ ಇರಲಿದ್ದಾರೆ. ಅಂಚೆ ಮತ ಪತ್ರ ಎಣಿಕೆಗೆ 8 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದ್ದು, 8 ಏಜೆಂಟರನ್ನು ನೇಮಕ ಮಾಡಲಾಗಿದೆ. ಅಂಚೆ ಮತಪತ್ರಗಳ ಎಣಿಕೆಯು ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಯವರ ಸಮ್ಮುಖದಲ್ಲಿ ನಡೆಯಲಿದೆ.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರ‍್ಯಾಂಡಂ ಆಗಿ ಆಯ್ಕೆ ಮಾಡಿದ 5 ಮತಗಟ್ಟೆಗಳ ವಿವಿ ಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡಲಾಗುತ್ತದೆ. ಎಣಿಕೆ ಕಾರ್ಯ ನಡೆಸಲಾಗುವ ಎಲ್ಲಾ 8 ವಿಧಾನ ಸಭಾ ಕ್ಷೇತ್ರಗಳ ಕೊಠಡಿಗಳಲ್ಲಿ ವೆಬ್ ಕಾಸ್ಟಿಂಗ್ ಕಾರ್ಯ ನಡೆಸಲಾಗುವುದು. ಮಾಧ್ಯಮ ಪ್ರತಿನಿಧಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದ್ದು, ಅಗತ್ಯವಾದ ಟಿವಿ, ಇಂಟರ್ ನೆಟ್ ಸೇರಿದಂತೆ ಅಗತ್ಯ ತಾಂತ್ರಿಕ ವ್ಯವಸ್ಥೆ ಕಲ್ಪಿಸಲಾಗಿದೆ.

ಪೊಲೀಸ್ ಬಿಗಿ ಭದ್ರತೆ: ಮತ ಎಣಿಕೆ ಕೇಂದ್ರದ ಸುತ್ತಲು ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಬಿಗಿ ಪೊಲೀಸ್ ಭದ್ರತೆ ಕೈಗೊಳ್ಳಲಾಗಿದೆ. ಭದ್ರತೆ ಕಾರ್ಯಕ್ಕಾಗಿ ಕೆಎಸ್‌ಆರ್‌ಪಿ ಹಾಗೂ ಮೀಸಲು ಪೊಲೀಸ್ ಪಡೆ ನಿಯೋಜಿಸಲಾಗಿದೆ. 80 ಅಧಿಕಾರಿಗಳು, 300 ಸಿಬ್ಬಂದಿ ಹಾಗೂ 350 ಗೃಹರಕ್ಷಕ ದಳ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ.

ಬಿಜೆಪಿ-ಕಾಂಗ್ರೆಸ್ ಗೆಲುವಿನ ಲೆಕ್ಕಾಚಾರ

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಮಾಜಿ ಶಾಸಕ ಎಸ್.ಬಾಲರಾಜು ಹಾಗೂ ಕಾಂಗ್ರೆಸ್‌ನಿಂದ ಸಚಿವ ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ಹುರಿಯಾಳಾಗಿದ್ದು, ಚಾಮರಾಜನಗರ ಕ್ಷೇತ್ರ ವ್ಯಾಪ್ತಿಯ ಒಟ್ಟು 8 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ 7 ಹಾಗೂ ಜೆಡಿಎಸ್‌ನ ಓರ್ವ ಶಾಸಕರಿದ್ದಾರೆ. ಆದರೆ, ಬಿಜೆಪಿಯಿಂದ ಯಾವುದೇ ಶಾಸಕರೂ ಇಲ್ಲ. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವರುಣ ಕ್ಷೇತ್ರ ಕೂಡ ಒಳಪಡುತ್ತದೆ. ಹಾಗಾಗಿ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಲದಿಂದ ಈ ಬಾರಿ ಮತ್ತೆ ಕಾಂಗ್ರೆಸ್ ಮೇಲುಗೈ ಸಾಧಿಸುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ, ಮೋದಿ ನಾಮಬಲ ಹಾಗೂ ಸಜ್ಜನ ರಾಜಕಾರಣಿಯಾಗಿ ಬಾಲರಾಜು ಮತ ಸೆಳೆಯಲಿದ್ದಾರೆ ಅನ್ನೋದು ಬಿಜೆಪಿ ಲೆಕ್ಕಾಚಾರ.

ಶೇ.75.18ರಷ್ಟು ಮತದಾನ: ಈ ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಶೇ.75.18ರಷ್ಟು ಮತದಾನವಾಗಿದೆ. ಈ ಪೈಕಿ 6,82,961 ಪುರುಷರು, 6,82,952 ಮಹಿಳೆಯರು, 31 ಇತರೆ ಸೇರಿದಂತೆ ಒಟ್ಟು 13,65,944 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಗ್ಯಾರಂಟಿ ಯೋಜನೆಗಳಿಂದಾಗಿ ಮಹಿಳೆಯರು 'ಕೈ' ಹಿಡಿಯುವ ಸಾಧ್ಯತೆ ಹೆಚ್ಚಿದೆ. ಇಲ್ಲದೇ ಹೋದರೆ ಮೋದಿ ಅಲೆಯಲ್ಲಿ ಮತ್ತೆ ಬಿಜೆಪಿ ಮುನ್ನಡೆ ಸಾಧಿಸಬಹುದು ಎಂಬ ಲೆಕ್ಕಾಚಾರ ಕ್ಷೇತ್ರದಲ್ಲಿದೆ.

ಕೆರೆಯಾದ ಸಾರಿಗೆ ಬಸ್ ನಿಲ್ದಾಣ

ಗುಂಡ್ಲುಪೇಟೆಯಲ್ಲಿ ತಗ್ಗು ಪ್ರದೇಶಗಳಿಗೆ ನುಗ್ಗಿದ ಮಳೆ ನೀರು


ಗುಂಡ್ಲುಪೇಟೆ ಬಸ್ ನಿಲ್ದಾಣ ಮಳೆ ನೀರು ನಿಂತು ಜಲಾವೃತ್ತಗೊಂಡಿರುವುದು.

ಗುಂಡ್ಲುಪೇಟೆ, ಜೂ.3– ಪಟ್ಟಣ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಸೋಮವಾರ ಭರ್ಜರಿ ಮಳೆಯಾಗಿದ್ದು, ಮಳೆ ನೀರು ತಗ್ಗುಪ್ರದೇಶಗಳಿಗೆ ನುಗ್ಗಿ ಅವಾಂತರ ಸೃಷ್ಟಿಸಿದೆ.

ಪಟ್ಟಣದ ಊಟಿ, ಮೈಸೂರು ಬ್ಯಾಂಕ್ ಸರ್ಕಲ್, ಸಾರಿಗೆ ಬಸ್ ನಿಲ್ದಾಣ, ಕನಕದಾಸ ವೃತ್ತ, ಚಾಮರಾಜನಗರ ರಸ್ತೆಯ ಶಿವಾನಂದ ವೃತ್ತದಲ್ಲಿ ಮಂಡಿಯುದ್ದಕ್ಕೆ ನೀರು ನಿಂತ ಪರಿಣಾಮ ವಾಹನ ಸವಾರರು ಪರದಾಡಿದರು. ತಗ್ಗುಪ್ರದೇಶದ ಹಳ್ಳದಕೇರಿ ಹಾಗೂ ಚಾಮರಾಜನಗರ, ಕೆಆರ್‌ಸಿ ರಸ್ತೆಯ ಚರಂಡಿಗಲ್ಲಿ ನೀರು ಉಕ್ಕಿ ಹರಿದಿದ್ದರಿಂದ ಸುತ್ತಮುತ್ತಲ ಅಂಗಡಿ ಮತ್ತು ಮನೆಗಳಿಗೆ ಕೊಳಚೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು.

ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಸಂದರ್ಭದಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ನಿರ್ಮಿಸಿದ್ದ ಚಿಕ್ಕ ಸೇತುವೆಗಳನ್ನು ತೆರವುಗೊಳಿಸಿರುವುದು, ನೀರು ಸುಗಮವಾಗಿ ಹರಿಯಲು ಚರಂಡಿ ನಿರ್ಮಿಸದ ಪರಿಣಾಮ ಸುಮಾರು 10 ವರ್ಷಗಳಿಂದಲೂ ಮಳೆಗಾಲದಲ್ಲಿ ತೀವ್ರ ಸಮಸ್ಯೆ ಎದುರಾಗುತ್ತಿದೆ.

ಪಟ್ಟಣದಲ್ಲಿ ಪ್ರತಿ ಬಾರಿ ಮಳೆ ಬಿದ್ದಾಗಲೂ ಭಾರಿ ಪ್ರಮಾಣದ ನೀರು ನುಗ್ಗುವುದರಿಂದ ಸಾರಿಗೆ ಬಸ್ ನಿಲ್ದಾಣ ಕೆರೆಯಂತಾಗುತ್ತಿದೆ. ಇದರಿಂದ ಪ್ರಯಾಣಿಕರು ಪ್ರಯಾಸಪಡುವಂತಾಗಿದೆ. ಬಸ್ ನಿಲ್ದಾಣ ಪಕ್ಕದ ಕಾಗೆಹಳ್ಳಕ್ಕೆ ಮಳೆ ನೀರು ಸಮರ್ಪಕವಾಗಿ ಹೋಗದ ಪರಿಣಾಮವಾಗಿ ತಗ್ಗುಪ್ರದೇಶದಲ್ಲಿರುವ ಬಸ್ ನಿಲ್ದಾಣಕ್ಕೆ ನೀರು ನುಗ್ಗುತ್ತಿದೆ.

ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ನಿಲ್ದಾಣದಿಂದ ಹೊರ ಹೋಗಲು ಮಂಡಿಯೂದ್ದಕ್ಕೂ ನಿಲ್ಲುವ ಕೆಸರು ಮಿಶ್ರಿತ ನೀರಿನಲ್ಲೇ ಹಾದುಹೋಗಬೇಕಾಗಿದೆ. ಸೋಮವಾರ ಮಳೆ ಜೋರಾಗಿ ಬೀಳಲಾರಂಭಿಸುತ್ತಿದ್ದಂತೆ ಜನರು ಸಿಕ್ಕ ಸಿಕ್ಕ ಅಂಗಡಿಗಳು ಹಾಗೂ ಬಸ್ ನಿಲ್ದಾಣಕ್ಕೆ ಓಡಿಹೋಗಿ ಆಶ್ರಯ ಪಡೆದುಕೊಂಡರು.

ಮಳೆ ನಿಂತ ನಂತರವೂ ಶಿವಾನಂದ ವೃತ್ತ, ಕನಕದಾಸ ವೃತ್ತದ ರಸ್ತೆಯ ಮೇಲೆ ಉಕ್ಕಿ ಹರಿಯುತ್ತಿದ್ದ ನೀರಿನಲ್ಲಿ ಸಂಚರಿಸಲು ಪಾದಚಾರಿಗಳು ಹಾಗೂ ವಾಹನ ಸವಾರರು ಪರದಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡಗೆ ಗೆಲುವು

ಚಾಮರಾಜನಗರ: ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಗೆದ್ದು, ಶಿಕ್ಷಕರ ಬೇಡಿಕೆಗಳನ್ನು ಈಡೇರಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಹೇಳಿದರು.

ನಗರದ ತಾಲೂಕು ಕಚೇರಿ ಬಳಿ ಸೋಮವಾರ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರಿಗೆ ಗುರುತಿನ ಚೀಟಿ ವಿತರಿಸಿ ಮಾತನಾಡಿದ ಅವರು, ಮರಿತಿಬ್ಬೇಗೌಡರು ಸುಮಾರು 26 ವರ್ಷ ಶಿಕ್ಷಕರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಶಿಕ್ಷಕರ ಬೇಡಿಕೆಗಳ ಈಡೇರಿಸಲು ಶ್ರಮಿಸಿದ್ದಾರೆ. ಅವರು 4 ಬಾರಿ ಗೆದ್ದಿದ್ದು, 5ನೇ ಬಾರಿಯೂ ಹೆಚ್ಚು ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್, ಅರಕಲವಾಡಿ ಗುರುಸ್ವಾಮಿ, ಜಿಲ್ಲಾ ವಕ್ತಾರ ನವೀನ್ ಕರೆಹಳ್ಳಿ, ಎಸ್‌ಟಿ ಘಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವ ಶೆಟ್ಟಿ, ತಾಪಂ ಮಾಜಿ ಸದಸ್ಯರಾದ ಶಿವಸ್ವಾಮಿ, ಕುಮಾರ್‌ನಾಯಕ್, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಮಹೇಶ್, ನಾಗಯ್ಯ, ಕಾಗಲವಾಡಿ ಚಂದ್ರು ಇತರರಿದ್ದರು.


ಚಾಮರಾಜನಗರ ತಾಲೂಕು ಕಚೇರಿ ಬಳಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರಿಗೆ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಗುರುತಿನ ಚೀಟಿ ವಿತರಿಸಿದರು.

ಎನ್‌ಡಿಎ ಅಭ್ಯರ್ಥಿಗೆ ಹೆಚ್ಚಿನ ಮತಗಳು



ಚಾಮರಾಜನಗರ: ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಹೆಚ್ಚಿನ ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಸೋಮವಾರ ನಡೆದ ಮತದಾನ ಹಿನ್ನೆಲೆಯಲ್ಲಿ ಮತದಾರರ ಗುರುತಿನ ಚೀಟಿ ವಿತರಿಸಿ ಮಾತನಾಡಿದ ಅವರು, ಶಿಕ್ಷಕರು ಕೆ.ವಿವೇಕಾನಂದರ ಪರ ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಕಳೆದ 20 ವರ್ಷಗಳಿಂದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಶಿಕ್ಷಕರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿಲ್ಲ. ಬೇಡಿಕೆಗಳಿಗೆ ಸ್ಪಂದಿಸಿಲ್ಲದ ಕಾರಣದಿಂದ ಶಿಕ್ಷಕರು ಬದಲಾವಣೆ ಬಯಸಿದ್ದು, ಈ ಬಾರಿ ಶಿಕ್ಷಕ ಮತದಾರರು ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ಮೊದಲ ಪ್ರಾಶಸ್ತ್ಯ ಮತ ನೀಡುತ್ತಿದ್ದಾರೆ. ಆದ್ದರಿಂದ ಅವರು ಹೆಚ್ಚಿನ ಮತ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ ಎಂದರು.

ಇದೇ ವೇಳೆ ಕಾಡಾ ಮಾಜಿ ಅಧ್ಯಕ್ಷ ನಿಜಗುಣ ರಾಜು, ಬಿಜೆಪಿ ಮಾಜಿ ಅಧ್ಯಕ್ಷ ಆರ್.ಸುಂದರ್, ಓಬಿಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಣಿ ಸದಸ್ಯ ನೂರೊಂದು ಶೆಟ್ಟಿ, ಜೆಡಿಎಸ್ ಮುಖಂಡ ಆಲೂರು ಮಲ್ಲು, ಹರದನಹಳ್ಳಿ ರಾಮಚಂದ್ರ, ಚೂಡಾ ಮಾಜಿ ಅಧ್ಯಕ್ಷರಾದ ಪಿ.ಬಿ.ಶಾಂತಮೂರ್ತಿ ಕುಲಗಾಣ, ಬಾಲಸುಬ್ರಹ್ಮಣ್ಯಂ, ನಗರ ಮಂಡಲ ಅಧ್ಯಕ್ಷ ಶಿವರಾಜ್, ಪ್ರಧಾನ ಕಾರ್ಯದರ್ಶಿ ಕೂಸಣ್ಣ, ಜಿಲ್ಲಾ ಉಪಾಧ್ಯಕ್ಷ ಹೆಚ್.ಎಂ.ಬಸವಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇವಸ್ವಾಮಿ, ಕಾರ್ಯದರ್ಶಿ ನಟರಾಜು, ಎಸ್‌ಟಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಜಯಸುಂದರ್, ಎಪಿಎಂಸಿ ಮಾಜಿ ಅಧ್ಯಕ್ಷ ಮನೋಜ್ ಪಟೇಲ್ ಇತರರಿದ್ದರು.

ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರ

ಜಿಲ್ಲೆಯಲ್ಲಿ ಶೇ.92ರಷ್ಟು ಮತದಾನ

ಚಾಮರಾಜನಗರ: ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಸೋಮವಾರ ಮತದಾನ ನಡೆದಿದ್ದು, ಚಾಮರಾಜನಗರ ಜಿಲ್ಲೆಯಲ್ಲಿ ಶೇ.92ರಷ್ಟು ಮತದಾನವಾಗಿದೆ.

ತಾಲೂಕುವಾರು: ಗುಂಡ್ಲುಪೇಟೆಯಲ್ಲಿ ಶೇ.93, ಚಾಮರಾಜನಗರ ಶೇ.94, ಯಳಂದೂರು ಶೇ.90, ಕೊಳ್ಳೇಗಾಲ ಶೇ.91 ಹಾಗೂ ಹನೂರು ತಾಲೂಕಿನಲ್ಲಿ ಶೇ.91ರಷ್ಟು ಮತದಾನವಾಗಿದ್ದು, ಜಿಲ್ಲೆಯಲ್ಲಿ ಒಟ್ಟಾರೆ ಶೇ.92ರಷ್ಟು ಮತದಾನವಾಗಿದೆ.

ಗುಂಡ್ಲುಪೇಟೆ ತಾಲೂಕಿನಲ್ಲಿ 306 ಪುರುಷ, 97 ಮಹಿಳೆಯರು ಸೇರಿ ಒಟ್ಟು 403 ಮತದಾರರು, ಚಾಮರಾಜನಗರ 384 ಪುರುಷ, 219 ಮಹಿಳೆಯರು ಸೇರಿ ಒಟ್ಟು 603 ಮತದಾರರು, ಯಳಂದೂರು 148 ಪುರುಷ, 54 ಮಹಿಳೆಯರು ಸೇರಿದಂತೆ ಒಟ್ಟು 202 ಮತದಾರರು, ಕೊಳ್ಳೇಗಾಲ 417 ಪುರುಷ, 307 ಮಹಿಳೆಯರು ಸೇರಿದಂತೆ ಒಟ್ಟು 724 ಮತದಾರರು ಹಾಗೂ ಹನೂರು ತಾಲೂಕಿನಲ್ಲಿ 193 ಪುರುಷ, 56 ಮಹಿಳೆಯರು ಸೇರಿದಂತೆ ಒಟ್ಟು 249 ಮತದಾರರಿದ್ದು, ಜಿಲ್ಲೆಯಲ್ಲಿ ಒಟ್ಟು 1448 ಪುರುಷ, 733 ಮಹಿಳೆಯರು ಸೇರಿದಂತೆ 2181 ಮತದಾರರಿದ್ದಾರೆ.

ಈ ಪೈಕಿ ಗುಂಡ್ಲುಪೇಟೆ ತಾಲೂಕಿನಲ್ಲಿ 376, ಚಾಮರಾಜನಗರ 568, ಯಳಂದೂರು 182, ಕೊಳ್ಳೇಗಾಲ 659 ಹಾಗೂ ಹನೂರು ತಾಲೂಕಿನಲ್ಲಿ 227 ಮತದಾರರು ಮತ ಚಲಾಯಿಸಿದ್ದು, ಜಿಲ್ಲೆಯಲ್ಲಿ ಒಟ್ಟು 2012 ಮಂದಿ ಮತ ಚಲಾಯಿಸಿದ್ದಾರೆ.

ಒಂದನೇ ಪುಟದಿಂದ

ಶೇ.88 ಮತದಾನ

ಜಿಲ್ಲೆಯಲ್ಲಿ 3242 ಮತದಾರರು ಮತದಾನ ಮಾಡಿದ್ದು, ಶೇ.91.95 ರಷ್ಟು ಮತದಾನವಾಗಿದೆ. ಮೈಸೂರು ಜಿಲ್ಲೆಯ 20 ಮತಗಟ್ಟೆ, ಹಾಸನ ಜಿಲ್ಲೆಯ 10, ಮಂಡ್ಯ ಜಿಲ್ಲೆಯ 9 ಹಾಗೂ ಚಾಮರಾಜನಗರ ಜಿಲ್ಲೆಯ 5 ಮತಗಟ್ಟೆಗಳಲ್ಲಿ ಮತದಾನ ನಡೆಯಿತು. ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆ ತನಕ ನಡೆದ ಮತದಾನದಲ್ಲಿ ಶಿಕ್ಷಕರು ಉತ್ಸಾಹದಿಂದ ಮತದಾನ ಮಾಡಿದರು. ಮೈಸೂರು ನಗರದಲ್ಲಿರುವ 8 ಮತಗಟ್ಟೆಗಳಲ್ಲಿ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯ ಶ್ರೀ ಕಾಗಿನೆಲೆ ಮಹಾ ಸಂಸ್ಥಾನದ ಕನಕ ಗುರುಪೀಠ ಕಾಲೇಜಿನಲ್ಲಿ ಬಿರುಸಿನ ಮತದಾನವಾಯಿತು. ಇಲ್ಲಿ ಒಟ್ಟು 880 ಮತದಾರರಿದ್ದು, ಬೆಳಿಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತು ಶಿಕ್ಷಕರು ಉತ್ಸಾಹದಿಂದ ಮತದಾನ ಮಾಡಿದರು. ಮಧ್ಯಾಹ್ನದ ವೇಳೆಗೆ ಶೇಕಡ 60 ರಷ್ಟು ಮತದಾನವಾಗಿತ್ತು.

ಮತಗಟ್ಟೆಯಿಂದ 100 ಮೀಟರ್ ದೂರದಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರು ಮತದಾರರಿಗೆ ಮಾಹಿತಿ ನೀಡಲು ಅವಕಾಶ ಮಾಡಿಕೊಡಲಾಗಿತ್ತು. ಶಿಕ್ಷಕ ಮತದಾರರನ್ನು ಹೊರತುಪಡಿಸಿ ಬೇರೆ ಯಾರನ್ನು ಮತಗಟ್ಟೆ ಬಳಿ ಬಾರದಂತೆ ಪೊಲೀಸರು ನಿರ್ಬಂಧಿಸಿದ್ದರು. ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಕಾಂಗ್ರೆಸ್‌ನ ಮರಿತಿಬ್ಬೇಗೌಡರು ಪುನರಾಯ್ಕೆ ಬಯಸಿದ್ದರೆ, ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಮೊದಲ ಬಾರಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಇವರೊಂದಿಗೆ ಕನ್ನಡ ಚಳವಳಿ ವಾಟಾಳ್ ಪಕ್ಷದ ಸಂಸ್ಥಾಪಕ ಅಧ್ಯಕ್ಷರೂ ಆದ ಮಾಜಿ ಶಾಸಕ ವಾಟಾಳ್ ನಾಗರಾಜ್, ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ ಸೇರಿದಂತೆ ಒಟ್ಟು 11 ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದಾರೆ.

ಬೆಂಬಲಿಗರ ಅಂತಿಮ ಕಸರತ್ತು, ಶಿಕ್ಷಕರು ಸುಸ್ತು

ಮೈಸೂರಿನ ಕುವೆಂಪನಗರದ ಆದಿಚುಂಚನಗಿರಿ ರಸ್ತೆಯ ಕಾಗಿನೆಲೆ ಮಹಾ ಸಂಸ್ಥಾನದ ಕಾಲೇಜಿನ ಮತಗಟ್ಟೆಯಲ್ಲಿ ಮತದಾರರನ್ನು ಮನವೊಲಿಸಿ ಅಭ್ಯರ್ಥಿಗಳ ಬೆಂಬಲಿಗರು ಅಂತಿಮ ಹಂತದ ಕಸರತ್ತು ನಡೆಸಿದರು. ಶಿಕ್ಷಕರು ಉತ್ಸಾಹದಿಂದ ಮತದಾನ ಮಾಡಲು ಬರುತ್ತಿದ್ದರು. ಆದರೆ ಅವರು ಗೇಟ್ ಬಳಿ ಬರುತ್ತಿದ್ದಂತೆ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಹಾಗೂ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ವಿವೇಕಾನಂದ ಬೆಂಬಲಿಗರು ದುಂಬಾಲು ಬಿದ್ದು, ತಮ್ಮ ಅಭ್ಯರ್ಥಿಗೇ ಮತ ಹಾಕುವಂತೆ ಮನವೊಲಿಸುವ ಅಂತಿಮ ಪ್ರಯತ್ನ ನಡೆಸಿದರು. ಇಬ್ಬರು ಅಭ್ಯರ್ಥಿಗಳ ಬೆಂಬಲಿಗರು ಒಟ್ಟೊಟ್ಟಿಗೆ ಮತ ಕೇಳುತ್ತಿದ್ದ ಕಾರಣ ಗೊಂದಲ ಪರಿಸ್ಥಿತಿಗೀಡಾದರು. ಎಲ್ಲಾ ಕಡೆ ಮತಗಟ್ಟೆಯಿಂದ 100 ಮೀಟರ್ ದೂರದಲ್ಲಿ ಅಭ್ಯರ್ಥಿಗಳ ಬೆಂಬಲಿಗರಿದ್ದರೆ, ಈ ಮತಗಟ್ಟೆಯಲ್ಲಿ ಮಾತ್ರ ಪ್ರವೇಶ ದ್ವಾರದಲ್ಲೇ ಜಮಾಯಿಸಿದ್ದರು.

ನೈರುತ್ಯ ಕ್ಷೇತ್ರಗಳ ಮತದಾನ ಪ್ರಮಾಣ

ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಒಟ್ಟು **76.19** ಹಾಗೂ **ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ** ಒಟ್ಟು **82.56**ರಷ್ಟು ಮತದಾನವಾಗಿದೆ. ಪದವೀಧರ ಹಾಗೂ ಶಿಕ್ಷಕರು ಈ ಎರಡೂ ಕ್ಷೇತ್ರಗಳಲ್ಲಿ ಕ್ರಮವಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೇ.81.20 ಮತ್ತು ಶೇ.89.11, ದಕ್ಷಿಣ ಕನ್ನಡದಲ್ಲಿ 73.89 ಹಾಗೂ 75.71, ದಾವಣಗೆರೆಯಲ್ಲಿ 80.95 ಹಾಗು 87.74, ಕೊಡಗಿನಲ್ಲಿ 81.09 ಹಾಗೂ 86.88, ಶಿವಮೊಗ್ಗದಲ್ಲಿ 80.87 ಹಾಗೂ 88.04, ಉಡುಪಿಯಲ್ಲಿ ಶೇ.75.38 ಹಾಗೂ 80.72ರಷ್ಟು ಮತದಾನ ನಡೆದಿದೆ.

ಮರಿತಿಬ್ಬೇಗೌಡ, ವಿವೇಕಾನಂದ ಮಾತಾಡಲಿಲ್ಲ!

ನಿಮ್ಮ ನಿರೀಕ್ಷೆಗೂ ಮೀರಿ ಕೆಲಸ ಮಾಡುತ್ತೇನೆ ಎಂದು ಶಿಕ್ಷಕ ಮತದಾರರಿಗೆ ಮನದಟ್ಟು ಮಾಡಿದ್ದೇನೆ. ನನ್ನ ಮನವಿಗೆ ಸಕರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಈ ಪರೀಕ್ಷೆಯಲ್ಲಿ ಗೆದ್ದೆ ಗೆಲ್ಲುತ್ತೇನೆ ಎಂಬ ನಂಬಿಕೆ ಇದೆ ಎಂದು ಹೇಳಿದರು. ಇದೇ ವೇಳೆ ಮಾತನಾಡಿದ ಮರಿತಿಬ್ಬೇಗೌಡ, ಕಳೆದ 24 ವರ್ಷಗಳಿಂದ ನಾನು ಶಿಕ್ಷಣ ಕ್ಷೇತ್ರದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ್ದೇನೆ. ಶಿಕ್ಷಕರ ಬೇಡಿಕೆ ಈಡೇರಿಸಲು ಶಕ್ತಿ ಮೀರಿ ಪ್ರಯತ್ನಿಸಿದ್ದೇನೆ. ಇದನ್ನು ಮನಗಂಡು ಶಿಕ್ಷಕ ಮತದಾರರು 5ನೇ ಬಾರಿ ನನ್ನನ್ನು ಆಯ್ಕೆ ಮಾಡುವರೆಂಬ ವಿಶ್ವಾಸವಿದೆ. ನಾಲ್ಕು ಜಿಲ್ಲೆಗಳಲ್ಲೂ ನಮ್ಮ ಗೆಲುವಿಗೆ ಪೂರಕ ವಾತಾವರಣವಿದೆ ಎಂದು ಮರಿತಿಬ್ಬೇಗೌಡರು ವಿಶ್ವಾಸ ವ್ಯಕ್ತಪಡಿಸಿದರು.

ಇಂದು ಲೋಕ 'ತೀರ್ಪು'

ಎಂದು ಹೇಳಲಾಗದು. ಇನ್ನೂ ಹೆಚ್ಚಿನ ಸ್ಥಾನಗಳಲ್ಲಿ ಗೆಲ್ಲುವ ವಿಶ್ವಾಸ ನಮಗಿದೆ. ನಾವೇ ಸರ್ಕಾರ ರಚಿಸುತ್ತೇವೆ ಎಂದು ಹೇಳಿರುವುದು ಫಲಿತಾಂಶದ ಬಗ್ಗೆ ಮತ್ತಷ್ಟು ಕುತೂಹಲ ಕೆರಳಿಸಿದೆ. ಆದರೆ, ಪ್ರಧಾನಿ ಮೋದಿಯವರು 2047ರ ವಿಕಸಿತ್ ಭಾರತ್ ಗುರಿ ತಲುಪಲು ದೇಶದ ಅಭಿವೃದ್ಧಿಗೆ ಮುಂದಿನ 25 ವರ್ಷಗಳ ನೀಲನಕ್ಷೆ ಸಿದ್ಧಪಡಿಸಿಕೊಂಡು ಅದಕ್ಕೆ ಕನ್ಯಾಕುಮಾರಿಯಲ್ಲಿ ಸುದೀರ್ಘ ಧ್ಯಾನದ ಮೂಲಕ ನಿಶ್ಚಯಿಸಿದ್ದಾರೆ. ಲೋಕಸಭೆಯ 543 ಸ್ಥಾನಗಳಲ್ಲಿ ಸರಳ ಬಹುಮತಕ್ಕೆ 272 ಸ್ಥಾನಗಳ ಅವಶ್ಯಕತೆ ಇದೆ. ಈ ಮ್ಯಾಜಿಕ್ ಸಂಖ್ಯೆಯನ್ನು ಯಾವ ಮೈತ್ರಿಕೂಟ ತಲುಪಲಿದೆ ಎಂಬುದು ಇನ್ನೇನು ಕೆಲ ಕ್ಷಣಗಳಲ್ಲೇ ಬಹಿರಂಗವಾಗಲಿದೆ. 2019ರ 17ನೇ ಲೋಕಸಭಾ ಚುನಾವಣೆಯಲ್ಲಿ ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್ (ಎನ್‌ಡಿಎ) 353 ಸ್ಥಾನಗಳನ್ನು ಗಳಿಸಿ ಎರಡನೇ ಬಾರಿ ಅಧಿಕಾರ ಗದ್ದುಗೆ ಏರಿತ್ತು.

64.2 ಕೋಟಿ ಜನರು ಮತದಾನ

*ಉನ್ನತ ನಾಯಕರಿಗೆ ಇಸಿ ನೋಟಿಸ್ ಜಾರಿ ಮಾಡಿದೆ. ಹಲವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಪಾರದರ್ಶಕ ಚುನಾವಣಾ ಪ್ರಕ್ರಿಯೆಗಾಗಿ ಉನ್ನತ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ. *ನೀತಿ ಸಂಹಿತೆ ಜಾರಿ ಅವಧಿಯಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಸ್ಥಗಿತಗೊಳಿಸಲಾಗಿತ್ತು. 95–98 ಶೇಕಡಾ ಯೋಜನೆಗಳಲ್ಲಿ ಅರ್ಜಿ ಸಲ್ಲಿಸಿದ 48 ಗಂಟೆಗಳ ಒಳಗೆ EC ಅನುಮತಿ ನೀಡಿತು. *ನಕಲಿ ಮತದಾನವನ್ನು ದೊಡ್ಡ ಪ್ರಮಾಣದಲ್ಲಿ ನಿಯಂತ್ರಿಸಲಾಗಿದೆ. 2024ರ ಸಾರ್ವತ್ರಿಕ ಚುನಾವಣೆಗಳಲ್ಲಿ ಸಿಂಥೆಟಿಕ್, AI ರಚಿತ ವಿಷಯ ಬಳಸಲಾಗಿದೆ. *ಮತಗಳ ಎಣಿಕೆಯ ಪ್ರಕ್ರಿಯೆಯು ಸಂಪೂರ್ಣವಾಗಿ ದೃಢೀಕೃತವಾಗಿರುತ್ತದೆ. *ಬಹು-ಪಕ್ಷ ನಿಯೋಗಗಳು ಪ್ರಸ್ತಾಪಿಸಿರುವ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲಾಗಿದೆ. *ಚುನಾವಣಾ ನಂತರದ ಪರಿಶೀಲನೆಗೆ ಭಾರತೀಯ ಚುನಾವಣಾ ವ್ಯವಸ್ಥೆ ಅನುವು ಮಾಡಿಕೊಡುತ್ತದೆ

ಬೆಳಗ್ಗೆ 8ರಿಂದ ಮತ ಎಣಿಕೆ

ಎಲ್ಲಾ ಮತ ಎಣಿಕೆ ಕೇಂದ್ರಗಳ ಸುತ್ತಲೂ ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಸೆಕ್ಷನ್ 144 ಅಡಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಎಲ್ಲಾ ಮತ ಎಣಿಕಾ ಕೇಂದ್ರಗಳಿಗೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಮತ ಎಣಿಕಾ ಕೇಂದ್ರವಿರುವ ರಸ್ತೆಯಲ್ಲಿ ವಾಹನಗಳು ಸಂಚರಿಸದಂತೆ ಮಾರ್ಗ ಬದಲಾವಣೆ ಮಾಡಲಾಗಿದೆ. ಅಲ್ಲದೇ, ಪ್ರತಿಯೊಂದು ಸುತ್ತಿನ ಫಲಿತಾಂಶವನ್ನು ಧ್ವನಿವರ್ಧಕದಲ್ಲಿ ಘೋಷಿಸಲು ವ್ಯವಸ್ಥೆ ಮಾಡಲಾಗಿದೆ. ಇಂದು ಡಾ.ಕೆ.ವಿ.ರಾಜೇಂದ್ರ ಅವರು ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕೇಂದ್ರಕ್ಕೆ ಭೇಟಿ ನೀಡಿ ಸ್ಟ್ರಾಂಗ್‌ರೂಂ ಸುರಕ್ಷತೆ, ಮತ ಎಣಿಕೆಗೆ ಮಾಡಿರುವ ಸಿದ್ಧತೆ, ಅಧಿಕಾರಿಗಳು, ಸಿಬ್ಬಂದಿ ಊಟ-ತಿಂಡಿ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಮತ ಎಣಿಕಾ ಕೇಂದ್ರದ ಬಂದೋಬಸ್ತ್, ಸಂಚಾರ ನಿರ್ವಹಣೆ, ಆಯಾ ಸುತ್ತಿನ ಮತ ಎಣಿಕೆ ಮಾಹಿತಿ ಪ್ರಕಟಿಸುವ ಸಲುವಾಗಿ ಧ್ವನಿವರ್ಧಕ ಅಳವಡಿಕೆ, ಸಿಸಿ ಕ್ಯಾಮರಾ ಕಣ್ಗಾವಲು ವ್ಯವಸ್ಥೆಗಳನ್ನು ಪರಿಶೀಲಿಸಿದರು. ಮತ ಎಣಿಕೆ ಹಾಲ್‌ನಲ್ಲಿ ನಿಗಧಿಪಡಿಸಿರುವ ಟೇಬಲ್‌ಗಳಲ್ಲಿ ಆಯಾ ವಿಧಾನಸಭಾ ಕ್ಷೇತ್ರವಾರು ಇವಿಎಂ ಮತ್ತು ವಿವಿ.ಪ್ಯಾಟ್‌ಗಳನ್ನು ಇರಿಸಿ ಅಭ್ಯರ್ಥಿಗಳು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಇವಿಎಂನಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡಿ ಎಲ್ಲಾ ಪ್ರಕ್ರಿಯೆಯನ್ನು ವಿಡಿಯೋ ರೆಕಾರ್ಡ್ ಮಾಡಬೇಕು. ಯಾವುದೇ ಸಂದರ್ಭದಲ್ಲಿ ಸಂಶಯ ಬಂದಲ್ಲಿ ಆಯಾ ಸಹಾಯಕ ಚುನಾವಣಾಧಿಕಾರಿಗಳ ಸಲಹೆ ಪಡೆದು ಲೋಪವಾಗದಂತೆ ಎಣಿಕೆ ಕರ್ತವ್ಯ ನಿರ್ವಹಿಸಬೇಕೆಂದು ಅವರು ಅಧೀನಾಧಿಕಾರಿಗಳಿಗೆ ತಿಳಿಸಿದರು.

ಪ್ರತೀ ಸುತ್ತಿನ ಕೌಂಟಿಂಗ್ ಮುಕ್ತಾಯವಾಗುತ್ತಿದ್ದಂತೆಯೇ ಧ್ವನಿವರ್ಧಕದ ಮೂಲಕ ಅಭ್ಯರ್ಥಿಗಳು ಪಡೆದ ಮತಗಳನ್ನು ಘೋಷಿಸಬೇಕು, ಅದೇ ವೇಳೆ ತ್ವರಿತವಾಗಿ ಭಾರತ ಚುನಾವಣಾ ಆಯೋಗದ ವೆಬ್‌ಸೈಟ್‌ಗೆ ಅಪ್‌ಡೇಟ್ ಮಾಡಬೇಕು ಎಂದೂ ತಾಂತ್ರಿಕ ಸಿಬ್ಬಂದಿ, ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಮತ ಎಣಿಕೆ ವೀಕ್ಷಕರ ಕೊಠಡಿಯಲ್ಲಿ ವಿವಿ, ಮತ ಎಣಿಕಾ ಪ್ರಕ್ರಿಯೆಯ ದೃಶ್ಯಗಳ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಮಾಧ್ಯಮ ಕೊಠಡಿಯಲ್ಲಿ ವಿವಿ, ಫಲಿತಾಂಶ ನೀಡಲು ಎಲ್‌ಇಡಿ, ಪ್ರತೀ ಸುತ್ತಿನ ವಿವರ ಒದಗಿಸಲು ಪ್ರಿಂಟರ್‌ಗಳನ್ನು ಒದಗಿಸಲಾಗಿದೆ. ಮತ ಎಣಿಕೆ ಅಧಿಕಾರಿಗಳು, ಸಿಬ್ಬಂದಿ, ಅಭ್ಯರ್ಥಿಗಳ ಮತ ಎಣಿಕೆ ಏಜೆಂಟರ್‌ಗಳು ಮಂಗಳವಾರ ಬೆಳಿಗ್ಗೆ 7ಗಂಟೆಗೆ ತಮಗೆ ನೀಡಿರುವ ಅಧಿಕೃತ ಗುರುತಿನ ಚೀಟಿಯನ್ನು ಕೊರಳಿಗೆ ಹಾಕಿಕೊಂಡು ಮತ ಎಣಿಕೆ ಕೇಂದ್ರದಲ್ಲಿ ವರದಿ ಮಾಡಿಕೊಳ್ಳುವಂತೆಯೂ ಸೂಚನೆ ನೀಡಿದ್ದಾರೆ. ಹಿರಿಯ ಅಧಿಕಾರಿಗಳ ವಾಹನಗಳನ್ನು ಎಣಿಕಾ ಕೇಂದ್ರದ ಆವರಣದಲ್ಲೂ, ಮತ ಎಣಿಕೆ ಅಧಿಕಾರಿಗಳು, ಸಿಬ್ಬಂದಿ, ಮಾಧ್ಯಮ ಪ್ರತಿನಿಧಿಗಳು, ಪೊಲೀಸ್ ಸಿಬ್ಬಂದಿ ವಾಹನಗಳನ್ನು ಹೊರಗೆ ನಿಗಧಿತ ಸ್ಥಳದಲ್ಲಿ ನಿಲ್ಲಿಸಿ ಬರುವಂತೆಯೂ ತಿಳಿಸಬೇಕೆಂದು ಡಾ.ರಾಜೇಂದ್ರ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸಲಹೆ ನೀಡಿದರು. ಮತ ಎಣಿಕೆ ನಡೆಯುವ ವೇಳೆ ವಿದ್ಯುತ್ ಸಂಪರ್ಕ ಕಡಿತವಾಗದಂತೆ ನೋಡಿಕೊಳ್ಳುವಂತೆಯೂ ಸೆಸ್ಕ್ ಅಧಿಕಾರಿಗಳಿಗೆ ತಿಳಿಸಿರುವ ಡಾ.ರಾಜೇಂದ್ರ ಅವರು, ಪರ್ಯಾಯವಾಗಿ ಕೇಂದ್ರದಲ್ಲಿ ಅಳವಡಿಸಿರುವ ಜನರೇಟರ್ ಸುಸ್ಥಿತಿಯಲ್ಲಿದ್ದು, ಸುಗಮವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಚಾಮುಂಡಿಬೆಟ್ಟದಲ್ಲಿ ದೇವಿಕೆರೆ ರಸ್ತೆಗೆ ಅಳವಡಿಸಿದ್ದ ಗೇಟ್ ತೆರವು





ಚಾಮುಂಡಿಬೆಟ್ಟದ ದೇವಿಕೆರೆ ರಸ್ತೆಗೆ ಅಳವಡಿಸಿದ್ದ ಗೇಟ್ ಅನ್ನು ಪೊಲೀಸ್ ಭದ್ರತೆಯೊಂದಿಗೆ ಸೋಮವಾರ ತೆರವುಗೊಳಿಸಲಾಯಿತು. ಇದಕ್ಕೂ ಮುನ್ನ ಗೇಟ್ ತೆರವಿಗೆ ಆಗ್ರಹಿಸಿದ ಸ್ಥಳೀಯರನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.3(ಎಸ್‌ಬಿಡಿ)– ಮೈಸೂರು ಚಾಮುಂಡಿಬೆಟ್ಟದ ದೇವಿಕೆರೆ ರಸ್ತೆಗೆ ಅಳವಡಿಸಿದ್ದ ಗೇಟ್ ಅನ್ನು ಸೋಮವಾರ ಬೆಳಗ್ಗೆ ತೆರವುಗೊಳಿಸಿ, ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಲಾಯಿತು.

ಚಾಮುಂಡಿಬೆಟ್ಟದ ನಾಯಕರ ಬೀದಿ ನಿವಾಸಿಗಳ ಮನವಿ ಮೇರೆಗೆ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ಸೂಚನೆ ಮೇರೆಗೆ ಕೆ.ಆರ್.ಠಾಣೆ ಪೊಲೀಸರ ಭದ್ರತೆಯೊಂದಿಗೆ ಸ್ಥಳೀಯರ ಸಮ್ಮುಖದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಜೆಸಿಬಿ ಮೂಲಕ ಗೇಟ್ ತೆರವು ಮಾಡಿಸಿದರು.

ಪವಿತ್ರ ದೇವಿಕೆರೆ ಆಸುಪಾಸಲ್ಲೇ ಕೆಲವರು ಮದ್ಯಪಾನ, ಧೂಮಪಾನ ಮಾಡಿ, ಪರಿಸರವನ್ನು ಹಾಳು ಮಾಡುತ್ತಿದ್ದರು. ಈ ಬಗ್ಗೆ ಮಾಹಿತಿ ತಿಳಿದ ರಾಜಮನೆತನದವರು ದೇವಿಕೆರೆ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಅನೈತಿಕ ಚಟುವಟಿಕೆಗಳನ್ನು ತಡೆಯುವ ನಿಟ್ಟಿನಲ್ಲಿ ಒಂದೂವರೆ ವರ್ಷದ ಹಿಂದೆ ದೇವಿಕೆರೆ ರಸ್ತೆಗೆ ಗೇಟ್ ಅಳವಡಿಸಿ, ಪ್ರವೇಶ ನಿರ್ಬಂಧಿಸಿದ್ದರು ಎನ್ನಲಾಗಿದೆ.

ದೇವಿಕೆರೆ ಹಾಗೂ ಸುತ್ತಮುತ್ತಲ ಪ್ರದೇಶದ ರಕ್ಷಣೆ ದೃಷ್ಟಿಯಿಂದ ಈ ಕ್ರಮ ವಹಿಸಲಾಗಿತ್ತಾದರೂ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಈ ರಸ್ತೆ ಬೆಟ್ಟದ ಮುಖ್ಯರಸ್ತೆಯಿಂದ ದೇವಿಕೆರೆ ಮಾರ್ಗವಾಗಿ ನಾಯಕರ ಬೀದಿಗೆ ಸಂಪರ್ಕಿಸುವುದರಿಂದ ಅಲ್ಲಿನ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದ್ದರು. ಅಲ್ಲದೆ ಗೇಟ್ ತೆರವುಗೊಳಿಸುವಂತೆ ಆಗ್ರಹಿಸಿದ್ದರು.

ಈ ಬಗ್ಗೆ ಮೈಸೂರು ತಹಶೀಲ್ದಾರ್‌ಗೆ ಮೇ 6ರಂದು ಮನವಿ ನೀಡಿದ್ದ ಚಾಮುಂಡಿಬೆಟ್ಟ ಗ್ರಾಪಂ ಮಾಜಿ ಸದಸ್ಯ ಎಂ.ಮಹದೇವ ಸ್ವಾಮಿ, ಗ್ರಾಪಂ ವ್ಯಾಪ್ತಿಯ ದೇವಿಕೆರೆ ಮೂಲಕ ಸಂಪರ್ಕ ಕಲ್ಪಿಸುವ ಸರ್ಕಾರಿ ಜಿಲ್ಲಾ ಮುಖ್ಯ ರಸ್ತೆಗೆ ರಾಜಮನೆತನದವರು ಗೇಟ್ ಅಳವಡಿಸಿ, ಭದ್ರತಾ ಸಿಬ್ಬಂದಿ ನಿಯೋಜಿಸಿದ್ದಾರೆ. ಪರಿಣಾಮ ಈ ರಸ್ತೆ ಮೂಲಕ ನಾಯಕರ ಬೀದಿಗೆ ಓಡಾಡುವವರಿಗೆ ತೊಂದರೆಯಾಗಿದೆ. ದೇವಿಕೆರೆ ಪಕ್ಕದಲ್ಲಿನ ಸ್ಮಶಾನಕ್ಕೆ ಹೋಗುವುದಕ್ಕೂ ಅಡ್ಡಿಯಾಗಿದೆ. ಶಾಲಾ ವಾಹನಗಳು, ಆಂಬುಲೆನ್ಸ್‌ಗಳು, ಗ್ಯಾಸ್ ಸಿಲಿಂಡರ್ ವಿತರಣೆಯ ವಾಹನಗಳ ಸಂಚಾರವೂ ಕಷ್ಟಸಾಧ್ಯವಾಗಿದೆ. ಲೋಕೋಪಯೋಗಿ ನಿರ್ವಹಣೆಯಲ್ಲಿರುವ ಈ ರಸ್ತೆಗೆ ಗೇಟ್ ಅಳವಡಿಸಿರುವುದರಿಂದ ಒಂದೂವರೆ ವರ್ಷದಿಂದ ಜನರಿಗೆ ತೀವ್ರ ತೊಂದರೆಯಾಗಿದೆ. ಸ್ಥಳ ಪರಿಶೀಲಿಸಿ ಗೇಟ್ ತೆರವುಗೊಳಿಸುವ ಮೂಲಕ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು ಎಂದು ಒತ್ತಾಯಿಸಿದ್ದರು.

ಮಂಗಳೂರಿನ ಹಿಂದೂ ಸಂಘಟನೆ ಮುಖಂಡರ ಮೇಲಿನ ಪ್ರಕರಣ ಹಿಂಪಡೆಯಲು ಆಗ್ರಹಿಸಿ ವಿಹೆಚ್‌ಪಿ ಪ್ರತಿಭಟನೆ



ಮಂಗಳೂರಲ್ಲಿ ಹಿಂದೂಪರ ಸಂಘಟನೆ ಮುಖಂಡರ ಮೇಲೆ ದಾಖಲಿಸಿರುವ ಪ್ರಕರಣ ಹಿಂಪಡೆಯುವಂತೆ ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ ಮುಖಂಡರು ಎಡಿಸಿ ಶಿವರಾಜು ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು,ಜೂ.3(ಎಂಟಿವೈ)– ದ್ವೇಷ ರಾಜಕಾರಣದಿಂದ ಹಿಂದೂಪರ ಸಂಘಟನೆಯ ಮುಖಂಡ ಶರಣ್ ಪಂಪ್‌ವೆಲ್ ವಿರುದ್ಧ ದಾಖಲಿಸಿರುವ ಪ್ರಕರಣ ಹಿಂಪಡೆದು, ಮಂಗಳೂರಿನ ಕಂಕನಾಡಿ ಬಳಿ ರಸ್ತೆಯಲ್ಲಿ ನಮಾಜ್ ಮಾಡಿದ ಪ್ರಕರಣದ ಬಿ ರಿಪೋರ್ಟ್ ರದ್ದು ಮಾಡಿ ಪ್ರಕರಣದಲ್ಲಿ ಅವಮಾನತಾಗಿರುವ ಪೊಲೀಸ್ ಅಧಿಕಾರಿ ಅಮಾನತು ಆದೇಶ ರದ್ದುಪಡಿಸುವಂತೆ ವಿಶ್ವ ಹಿಂದೂ ಪರಿಷತ್ ಸದಸ್ಯರು ಒತ್ತಾಯಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಅಪರ ಜಿಲ್ಲಾಧಿಕಾರಿ ಶಿವರಾಜು ಅವರಿಗೆ ಮನವಿ ಸಲ್ಲಿಸಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ರವಾನಿಸುವಂತೆ ಮನವಿ ಮಾಡಿದರು.

ಮಂಗಳೂರು ಕಂಕನಾಡಿ ಬಳಿ ರಸ್ತೆಯಲ್ಲಿ ನಮಾಜ್ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಸುಮೋಟೋ ಪ್ರಕರಣ ದಾಖಲಿಸಿದ್ದರು. ಒತ್ತಡದ ಮೇರೆಗೆ ಆ ಪ್ರಕರಣಕ್ಕೆ ಬಿ ರಿಪೋರ್ಟ್ ಹಾಕಲಾಗಿದ್ದು, ಪ್ರಕರಣ ದಾಖಲಿಸಿದ್ದಕ್ಕಾಗಿ ಆ ಪೊಲೀಸ್ ಅಧಿಕಾರಿಯನ್ನು ಅಮಾನತು ಮಾಡಿರುವುದು ಖಂಡನೀಯ. ಮಂಗಳೂರಿನ ಜೆರೊಸಾ ಶಾಲೆಯ ಎದುರು ಜೈ ಶ್ರೀರಾಮ್ ಘೋಷಣೆ ಕೂಗಿದ್ದಕ್ಕೆ ಪ್ರಕರಣ ದಾಖಲಿಸಲಾಗಿದೆ. ಇದರಿಂದ ರಾಜ್ಯ ಸರ್ಕಾರದ ತಾರತಮ್ಯ ಮತ್ತು ದ್ವೇಷ ರಾಜಕಾರಣ ಮಾಡುತ್ತಿದೆ ಎಂಬುದು ಸಾಬೀತಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಜೆರೋಸಾ ಪ್ರಕರಣದಲ್ಲಿ ಹಿಂದೂ ನಾಯಕರಾದ ಶರಣ ಪಂಪ್‌ವೆಲ್ ಸ್ಥಳದಲ್ಲಿ ಉಪಸ್ಥಿತಿ ಇಲ್ಲದಿದ್ದರೂ ಪ್ರಕರಣ ದಾಖಲಿಸಿರುವುದನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು. ರಾಜ್ಯ ಸರ್ಕಾರ ಹಿಂದೂಗಳ ಮೇಲೆ ಮಾಡುತ್ತಿರುವ ತಾರತಮ್ಯ, ದ್ವೇಷ ರಾಜಕಾರಣ ತಕ್ಷಣದಿಂದ ನಿಲ್ಲಿಸುವಂತೆ ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ವಿಶ್ವ ಹಿಂದೂ ಪರಿಷತ್ ಮುಖಂಡರಾದ ಜಿ.ಕೆ. ಅಂಬಿಕಾ, ಜನಾರ್ಧನ್ ರಾವ್, ವಾಸುದೇವ್, ರಾಣಿ, ಅಂಬಿಕಾ ರಾವ್, ಎಂ.ವಿ. ಸುಧಾ, ಭಾಗ್ಯ, ಮರಿಯಪ್ಪ, ರಾಜಣ್ಣ, ಬೈರ ಹನುಮಯ್ಯ, ಭುವನ್ ಕುಮಾರ್, ಯತೀಶ್, ಜಯಶ್ರೀ ಮುಂತಾದವರು ಭಾಗವಹಿಸಿದ್ದರು.

ಡಾ.ಸುಶ್ರುತ್ ನೇತೃತ್ವದಲ್ಲಿ ಮತಯಾಚನೆ



ಮೈಸೂರಿನ ಗೋಕುಲಂ ಲಯನ್ಸ್ ಶಾಲೆ ಮತಗಟ್ಟೆ ಬಳಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ-ಜೆಡಿಎಸ್ ಅಭ್ಯರ್ಥಿ ಕೆ.ವಿವೇಕಾನಂದ ಪರ ಖ್ಯಾತ ವೈದ್ಯರೂ ಆದ ಬಿಜೆಪಿ ಮುಖಂಡ ಡಾ.ಸುಶ್ರುತ್ ಗೌಡ, ನಗರ ಬಿಜೆಪಿ ಉಪಾಧ್ಯಕ್ಷರಾದ ಎಸ್.ಕೆ.ದಿನೇಶ್, ಸೋಮಶೇಖರ್ ರಾಜು, ಚಾಮರಾಜ ಕ್ಷೇತ್ರ ಅಧ್ಯಕ್ಷ ದಿನೇಶ್ ಗೌಡ, ಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ಮುಖಂಡರಾದ ರಾಜೇಶ್, ಕಿರಣ್ ಬೋಲಾರೆ, ಅಶೋಕ, ಜಯಣ್ಣ, ಪ್ರಕಾಶ, ವೇಣು, ಚೆಲುವರಾಜು, ರವೀಂದ್ರ, ಗೋಪಾಲ, ಸ್ವಾಮಿ, ಸುರೇಶ್ ಮತ್ತಿತರರು ಮತಯಾಚಿಸಿದರು.

ಅಯೋಧ್ಯೆ ರಾಮಮಂದಿರವುಳ್ಳ ಆಕರ್ಷಕ ವಾಚ್‌ಗಳು

ಮೈಸೂರು, ಜೂ.3(ಎಂಕೆ)– ಜಾಕೋಬ್ ಅಂಡ್ ಕೋ ರಾಮಜನ್ಮಭೂಮಿ ಅಯೋಧ್ಯೆ ರಾಮಮಂದಿರ ಚಿತ್ರವುಳ್ಳ ಆಕರ್ಷಕ ಮತ್ತು ಸಾಂಪ್ರದಾಯಿಕ ವಾಚ್‌ಗಳನ್ನು ಹೊರತಂದಿದೆ.

34 ಲಕ್ಷ ರೂ. ಬೆಲೆ ಬಾಳುವ ವಾಚ್‌ಗಳು ಇದಾಗಿದ್ದು, ಹಿಂದೆಂದೂ ಕಾಣದ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ರಾಮಮಂದಿರ, ಭಗವಾನ್ ರಾಮ ಹಾಗೂ ಆಂಜನೇಯಸ್ವಾಮಿಯ ಚಿತ್ರಸಹಿತ ರೂಪುಗೊಳಿಸಲಾಗಿದೆ ಒಂದರಲ್ಲಿ ರಾಮ ಧನಸ್ಸುದಾರಿಯಾಗಿ ಪ್ರಯೋಗ ನಡೆಸುತ್ತಿದ್ದರೆ, ಮತ್ತೊಂದರಲ್ಲಿ ನಿಂತಿರುವಂತಿದೆ. ಹಾಗೂ ಆಂಜನೇಯ ತಪಸ್ಸು ಮಾಡುವುದು ಹಾಗೂ ನಮಸ್ಕರಿಸುವ ಹಾಗೂ 6 ಗಂಟೆಗೆ 'ಜೈ ಶ್ರೀರಾಮ್' ಎಂದು ಹೇಳುವ ರೀತಿಯಲ್ಲಿ ವಿನ್ಯಾಸಮಾಡಿರುವುದು ನಯನಮನೋಹರವಾಗಿದೆ.



ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವ್ಯಾಪ್ತಿ ಮೈದಾನಗಳಲ್ಲಿ ಖಾಸಗಿ ತರಬೇತಿದಾರರ ದರ್ಬಾರ್!

ಯುವರಾಜ ಕಾಲೇಜು ವಿದ್ಯಾರ್ಥಿಗಳಿಂದ ವಿವಿಗೆ ದೂರು


ಮೈಸೂರು, ಜೂ 3(ಎಸ್‌ಪಿಎನ್)– ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವ್ಯಾಪ್ತಿಗೆ ಒಳಪಡುವ ಮೈದಾನಗಳಲ್ಲಿ ಖಾಸಗಿ ತರಬೇತಿದಾರರ ಕಾರುಬಾರು ಜೋರಾಗಿದ್ದು, ಇದರಿಂದ ಯುವರಾಜ, ಮಹಾರಾಜ, ವಿವಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನಿತ್ಯ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅನಾನುಕೂಲವಾಗುತ್ತಿದೆ ಎಂದು ಆರೋಪಿಸಿ ಯುವರಾಜ ಕಾಲೇಜಿನ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿ ಕುಲಪತಿ, ಕುಲಸಚಿವ, ದೈಹಿಕ ವಿಭಾಗದ ನಿರ್ದೇಶಕರು ಹಾಗೂ ಸಿಂಡಿಕೇಟ್ ಸದಸ್ಯರಿಗೆ ಪತ್ರ ಬರೆದು ತಮ್ಮ ಅಳಲು ತೋಡಿಕೊಂಡಿದ್ದಾರೆ.

> ಯುವರಾಜ ಕಾಲೇಜಿನ ಕೆಲ ವಿದ್ಯಾರ್ಥಿಗಳು ದೂರು ನೀಡಿದ್ದು, ವಿದ್ಯಾರ್ಥಿಗಳು ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ. ಯಾವುದೇ ಖಾಸಗಿ ವ್ಯಕ್ತಿಗಳು ಮೈಸೂರು ವಿವಿ ಮೈದಾನದಲ್ಲಿ ಯಾವುದೇ ಕ್ರೀಡೆಗೂ ತರಬೇತಿ ನೀಡುತ್ತಿಲ್ಲ. ಅಲ್ಲದೆ ಅವಕಾಶವನ್ನೂ ನೀಡಿಲ್ಲ.
> - **ವೆಂಕಟೇಶ್,** ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿವಿ

ಖಾಸಗಿ ತರಬೇತಿದಾರರು, ಖಾಸಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ದಿನನಿತ್ಯ ಬೆಳಗ್ಗೆ 6ರಿಂದ 9 ಹಾಗೂ ಸಂಜೆ 4 ರಿಂದ 6.30ರವರೆಗೆ ತರಬೇತಿ ನೀಡಿ ಹಣ ಪಡೆಯುತ್ತಿದ್ದಾರೆ. ಇದರಿಂದ ವಿಶ್ವವಿದ್ಯಾನಿಲಯದ ಯುವರಾಜ, ಮಹಾರಾಜ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ತೊಂದರೆಯಾಗುತ್ತಿದೆ. ಅಲ್ಲದೆ, ವಿವಿ ಮೈದಾನಗಳಲ್ಲಿ ಇಲ್ಲಿನ ದೈಹಿಕ ಶಿಕ್ಷಕರು ಹೊರತುಪಡಿಸಿ ಬೇರೆಯವರು ತರಬೇತಿ ನೀಡುವುದು ನಿಯಮಬಾಹಿರ. ಬಾಸ್ಕೆಟ್ ಬಾಲ್, ಜಿಮ್ನಾಸ್ಟಿಕ್, ಅಥ್ಲೆಟಿಕ್ಸ್ ಮತ್ತು ಟೆನ್ನಿಸ್ ಆಟಗಳಿಗೆ ಖಾಸಗಿ ತರಬೇತಿದಾರರು ಮೈದಾನದೊಳಗೆ ಅತಿಕ್ರಮ ಪ್ರವೇಶ ಮಾಡಿ ತರಬೇತಿ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಇದನ್ನು ಪ್ರಶ್ನಿಸುವ ವಿದ್ಯಾರ್ಥಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡುವುದು. ಪೊಲೀಸ್ ಠಾಣೆಗೆ ಸುಳ್ಳು ದೂರು ನೀಡುತ್ತಿದ್ದಾರೆ. ಈಗಾಗಲೇ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರಿಗೆ ಲಿಖಿತ ಮನವಿ ಪತ್ರವನ್ನು ಕೂಡ ನೀಡಿದ್ದೇವೆ. ಆದರೆ ಇದುವರೆಗೆ ಯಾವುದೇ ಕ್ರಮವಾಗಿಲ್ಲ. ಆದ್ದರಿಂದ ಕೂಡಲೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಯುವರಾಜ ಕಾಲೇಜಿನ ರಾಜಶೇಖರ್, ಚಂದನ್, ಪಟೇಲ್, ಕಾರ್ತಿಕ್ ನಾಯಕ್ ಸೇರಿದಂತೆ ಇತರೆ ವಿದ್ಯಾರ್ಥಿಗಳು ಮನವಿ ಮಾಡಿದ್ದಾರೆ.

ಜೆಎಸ್‌ಎಸ್ ಕಾನೂನು ಕಾಲೇಜು ವಿಶ್ರಾಂತ ಪ್ರಾಂಶುಪಾಲ ಪ್ರೊ. ಜಿ.ವೈ. ಅಜ್ಜಪ್ಪ ನಿಧನ



ಮೈಸೂರು, ಜೂ. 3– ಮೈಸೂರಿನ ಕುವೆಂಪುನಗರ ಅನಿಕೇತನ ರಸ್ತೆ ನಿವಾಸಿ, ಜೆಎಸ್‌ಎಸ್ ಕಾನೂನು ಕಾಲೇಜಿನ ವಿಶ್ರಾಂತ ಪ್ರಾಂಶುಪಾಲರಾದ ಪ್ರೊ. ಜಿ.ವೈ. ಅಜ್ಜಪ್ಪ ಅವರು ಇಂದು ನಿಧನರಾದರು.

ಅವರಿಗೆ 95 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಶಾರದಾ, ಪುತ್ರ ಡಾ. ಮೋಹನ್‌ಕುಮಾರ್, ಪುತ್ರಿ ಡಾ. ವೀಣಾ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾನೂನು ವಿಚಾರದಲ್ಲಿ ಅಪಾರ ಜ್ಞಾನ ಹೊಂದಿದ್ದ ಅಜ್ಜಪ್ಪ ಅವರು, ಸದಾ ಕಾಲ ಕಿರಿಯ ವಕೀಲರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಅನೇಕ ವಕೀಲರು ಅವರನ್ನು ಭೇಟಿ ಮಾಡಿ ಕಾನೂನಿಗೆ ಸಂಬಂಧಿಸಿದಂತೆ ಹಲವಾರು ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದರು. ಕೆಲವು ಪ್ರಮುಖ ಕೇಸ್‌ಗಳ ಬಗ್ಗೆ ಹಿರಿಯ ವಕೀಲರುಗಳು ಕೂಡ ಅಜ್ಜಪ್ಪ ಅವರೊಂದಿಗೆ ಚರ್ಚಿಸುತ್ತಿದ್ದರು ಎಂದು ಅವರನ್ನು ಬಲ್ಲವರು ಹೇಳುತ್ತಾರೆ. ಶನಿವಾರ ಮೈಸೂರು ವಕೀಲರ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ್ದ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು ಅಜ್ಜಪ್ಪ ಅವರ ನಿವಾಸಕ್ಕೆ ತೆರಳಿ ಹಲವು ಕಾನೂನಾತ್ಮಕ ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದರು. ಇಳಿ ವಯಸ್ಸಿನಲ್ಲಿಯೂ ಅಜ್ಜಪ್ಪ ಅವರು ಲವಲವಿಕೆಯೊಂದಿಗೆ ಕೃಷ್ಣ ದೀಕ್ಷಿತ್ ಅವರೊಂದಿಗೆ ಮಾತನಾಡಿದ್ದರು.



"ಜಿ.ವೈ. ಅಜ್ಜಪ್ಪ ಹೆಸರು ಕೇಳಿದರೆ ಕಾನೂನು ಅಂಗಳದಲ್ಲಿ ವಿಶೇಷ ಗೌರವ. ಅಜ್ಜಪ್ಪ ಅವರು ಕಾನೂನಿನ ಬಗ್ಗೆ ಅಪಾರ ಜ್ಞಾನ ಹೊಂದಿದ್ದರು. ಶಿಸ್ತಿನ ಸಿಪಾಯಿ ಆಗಿದ್ದ ಅವರು, ತಮ್ಮ ಕೊನೆಯುಸಿರಿರುವವರೆಗೂ ಸ್ವಾವಲಂಬಿ ಜೀವನ ನಡೆಸಿದ್ದರು. ಉತ್ಸಾಹದ ಚಿಲುಮೆಯಾಗಿದ್ದ ಅವರು, ಕಾನೂನು ವಿಚಾರವಾಗಿ ಹಿರಿಯ ಹಾಗೂ ಕಿರಿಯ ವಕೀಲರು ಏನೇ ಕೇಳಿದರೂ ಅದಕ್ಕೆ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿದ್ದರು. ನಾನು ಪ್ರತೀ ಬಾರಿ ಅವರನ್ನು ಭೇಟಿ ಮಾಡಿದಾಗಲೂ ಕಾನೂನಿಗೆ ಸಂಬಂಧಪಟ್ಟಂತೆ ಹೊಸತನ್ನು ಕಲಿಯುವ ಅವಕಾಶ ನಮಗೆ ಸಿಗುತ್ತಿತ್ತು.

- **ಹೆಚ್.ಎನ್. ವೆಂಕಟೇಶ್,**

'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆ ಗೌರವ ಸಂಪಾದಕರು.

ಮರೆತಿದ್ದ ಲ್ಯಾಪ್‌ಟಾಪ್ ಹಿಂದಿರುಗಿಸಿ ಪ್ರಾಮಾಣಿಕತೆ ಮೆರೆದ ಆಟೋ ಚಾಲಕ

ಮೈಸೂರು,ಜೂ.3(ಎಂಟಿವೈ)– ಪ್ರಯಾಣಿಕರೊಬ್ಬರು ಆಟೋದಲ್ಲಿ ಮರೆತು ಹೋಗಿದ್ದ ಬೆಲೆಬಾಳುವ ಲ್ಯಾಪ್‌ಟಾಪ್ ಅನ್ನು ಆಟೋ ಚಾಲಕರೊಬ್ಬರು ಹಿಂದಿರುಗಿಸಿ ಪ್ರಾಮಾಣಿಕತೆ ಮೆರೆದಿದ್ದಾರೆ.



ಮೈಸೂರು ಜನತಾನಗರದ ನಿವಾಸಿ ಆಟೋ ಚಾಲಕ ಸುರೇಶ್ ಎಂಬುವವರೆ ಲ್ಯಾಪ್‌ಟಾಪ್ ಹಿಂತಿರುಗಿಸುವ ಮೂಲಕ ಪ್ರಾಮಾಣಿಕತೆ ಮೆರೆದ ಆಟೋ ಚಾಲಕರಾಗಿದ್ದಾರೆ. ಮಂಗಳೂರಿನ ನಿವಾಸಿ ಕಿಶೋರ್ ಅತ್ತಾವರ್ ಭಾನುವಾರ ಮುಂಜಾನೆ 3.30ರ ಸಮಯದಲ್ಲಿ ಮೈಸೂರು ರೈಲ್ವೆ ನಿಲ್ದಾಣದಿಂದ ಬೋಗಾದಿ ಎರಡನೇ ಹಂತದ ಸಿಎಫ್‌ಟಿಆರ್‌ಐ ಬಡಾವಣೆಯಲ್ಲಿರುವ ಸ್ನೇಹಿತ ಡಾ.ಎ.ಬಿ.ಅರುಣ್ ಕುಮಾರ್ ಅವರ ಮನೆಗೆ ಆಟೋದಲ್ಲಿ ಪ್ರಯಾಣಿಸಿದ್ದಾರೆ. ಈ ಸಂದರ್ಭ ಲ್ಯಾಪ್‌ಟಾಪ್ ಅನ್ನು ಆಟೋದಲ್ಲೇ ಮರೆತ್ತಿದ್ದಾರೆ. ನಂತರ ರೈಲ್ವೆ ನಿಲ್ದಾಣಕ್ಕೆ ಹೋಗಿ ಆಟೋಗಾಗಿ ಹುಡುಕಾಡಿದರೂ ಪತ್ತೆಯಾಗಿಲ್ಲ. ಅಷ್ಟರಲ್ಲಾಗಲೇ ಆಟೋ ಚಾಲಕ ಸುರೇಶ್ ಅವರು ಲ್ಯಾಪ್‌ಟಾಪ್ ಅನ್ನು ತೆಗೆದುಕೊಂಡು ಮನೆ ಬಳಿ ಬಂದಿದ್ದರು. ಇದನ್ನು ಕಂಡ ಕಿಶೋರ್ ಅತ್ತಾವ್ ಅವರು ಆಟೋ ಚಾಲಕರಿಂದ ಲ್ಯಾಪ್‌ಟಾಪ್ ಸ್ವೀಕರಿಸಿದರು. ಅಲ್ಲದೆ, ಆಟೋ ಚಾಲಕನ ಪ್ರಾಮಾಣಿಕತೆಗೆ ಅಭಿನಂದಿಸಿದ್ದಾರೆ.

ಎನ್‌ಡಿಎ ಅಭ್ಯರ್ಥಿ ಯದುವೀರ್ ಗೆಲುವಿನ ಸಂಭ್ರಮಕ್ಕೆ ಜೆಡಿಎಸ್ ಸಿದ್ಧತೆ

ಸಿದ್ಧವಾಗಿವೆ ಎರಡೂವರೆ ಸಾವಿರ ಲಡ್ಡು


ಮೈಸೂರು, ಜೂ.3(ಎಂಕೆ)– ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಯದುವೀರ್ ಗೆದ್ದರೆ ಎರಡೂವರೆ ಸಾವಿರ ಲಡ್ಡು ಹಂಚಿ ಸಂಭ್ರಮಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜೆಡಿಎಸ್ ಮುಖಂಡರು ತಿಳಿಸಿದ್ದಾರೆ.



ರಾಷ್ಟ್ರಮಟ್ಟದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಅಧಿಕಾರಕ್ಕೆ ಬರಲಿದ್ದು, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಯದುವೀರ್ ಅವರು ಲಕ್ಷ ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ. ಇದನ್ನು ಸ್ವತಃ ಮೈಸೂರಿನ ಜನರೇ ಹೇಳುತ್ತಿದ್ದಾರೆ. ಅದೇ ರೀತಿಯಾಗಿ ಜೂ.6 ರಂದು ಸಹ ವಿಧಾನಪರಿಷತ್ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಗೆಲ್ಲಲಿದ್ದು, ಅಂದೂ ಸಹ ಸಿಹಿ ಹಂಚಲಾಗುವುದು ಎಂದು ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ತಿಳಿಸಿದರು. ಎಕ್ಸಿಟ್ ಪೋಲ್ ರಿಸಲ್ಟ್ ಬರುವ ಮುಂಚೆಯೇ ಯದುವೀರ್ ಅವರು ಗೆದ್ದೆ ಗೆಲ್ಲುತ್ತಾರೆ ಎಂಬ ವಿಶ್ವಾಸವಿದೆ. ಅಲ್ಲದೆ ಮಹಾರಾಜರು ಗೆಲ್ಲುವುದು ಆಶ್ಚರ್ಯವೇನಲ್ಲ. ಈಗಾಗಲೇ ಗೆಲುವು ಡಿಕ್ಲೇರ್ ಆಗಿದೆ. ಸಿಹಿ ತೆಗೆದುಕೊಂಡು ರೆಡಿಯಾಗಿದ್ದೇವೆ. ಎನ್‌ಡಿಎ 350ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲಲಿದೆ. ಮರಿತಿಬ್ಬೇಗೌಡರು ಪಕ್ಷ ಬದಲಿಸಿದಂತೆ ಈ ಬಾರಿ ಶಿಕ್ಷಕರು ಅವರನ್ನೇ ಬದಲಾಯಿಸಲಿದ್ದಾರೆ ಎಂದು ಕೆಲ ಜೆಡಿಎಸ್ ಮುಖಂಡರು ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು.

ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ ನಿರರ್ಥಕವಾಯ್ತು...!?

ಪುರಭವನದ ಮಹಾದುದ್ದೇಶಿತ ವಾಹನ ನಿಲುಗಡೆ ಸ್ಥಳದಲ್ಲಿ ನಿತ್ಯ ಬೆರಳೆಣಿಕೆಯಷ್ಟು ವಾಹನಗಳಷ್ಟೇ ನಿಲ್ಲುತ್ತಿವೆ



ಮೈಸೂರಿನ ಪುರಭವನ ಆವರಣದ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್

ಮೈಸೂರು,ಜೂ.3(ಪಿಎಂ)– ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯ ಪರಿಣಾಮ ಪಾರ್ಕಿಂಗ್ ಸಮಸ್ಯೆ ತಲೆದೋರಿರುವುದನ್ನು ನಿವಾರಿಸುವ ಸಲುವಾಗಿ ಒಂದೇ ಸೂರಿನಡಿ ವ್ಯವಸ್ಥಿತ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ಪುರಭವನ ಆವರಣದಲ್ಲಿ 'ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ (ತಳಮಹಡಿ ವಾಹನ ನಿಲ್ದಾಣ) ನಿರ್ಮಿಸಿದ್ದರೂ ಅದೇಕೋ ಗೊತ್ತಿಲ್ಲ ಅದರ ಸಮರ್ಪಕ ಬಳಕೆ ಮಾತ್ರ ಆಗುತ್ತಲೇ ಇಲ್ಲ.

ಹೀಗಾಗಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಈ ಪಾರ್ಕಿಂಗ್ ಲಾಟ್‌ನ ಉದ್ದೇಶ ಪೂರ್ಣ ಪ್ರಮಾಣದಲ್ಲಿ ಈಡೇರಿಲ್ಲ. ಸುಮಾರು 500 ಕಾರುಗಳನ್ನು ಇಲ್ಲಿ ವ್ಯವಸ್ಥಿತವಾಗಿ ಪಾರ್ಕಿಂಗ್ ಮಾಡಲು ಎರಡು ಅಂತಸ್ತಿನ ಸೌಲಭ್ಯ ಕಲ್ಪಿಸಲಾಗಿದೆ ಆದರೆ ಈ ಪಾರ್ಕಿಂಗ್ ಲಾಟ್ ಪ್ರತಿನಿತ್ಯ ಬಹುತೇಕ ಖಾಲಿಯಾಗಿಯೇ ಉಳಿಯುತ್ತಿದೆ. ಬೆರಳೆಣಿಕೆಯಷ್ಟು ಕಾರುಗಳು ಮಾತ್ರ ಇಲ್ಲಿ ನಿಲುಗಡೆಯಾಗುತ್ತಿವೆ.

ಮೈಸೂರು ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದ್ದು, ಪ್ರತಿನಿತ್ಯ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ವಾರಾಂತ್ಯದಲ್ಲಂತೂ ಪ್ರವಾಸಿಗರ ದಂಡೇ ನೆರೆದಿರುತ್ತದೆ. ಇನ್ನು ದಸರಾ ವೇಳೆ ಪ್ರವಾಸಿಗರು ರಾಜ್ಯದ ನಾನಾ ಭಾಗಗಳಿಂದ ಮಾತ್ರವಲ್ಲದೆ, ದೇಶ–ವಿದೇಶಗಳಿಂದಲೂ ಆಗಮಿಸುತ್ತಾರೆ.

ಹೀಗಾಗಿ ಮೈಸೂರಿನಲ್ಲಿ ವಾಹನ ದಟ್ಟಣೆ ಹಾಗೂ ಪಾರ್ಕಿಂಗ್ ಸಮಸ್ಯೆ ತಲೆದೋರದಿರಲಿ ಎಂಬ ಉದ್ದೇಶದಿಂದ ಪುರಭವನ ಆವರಣದಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ ನಿರ್ಮಿಸಲಾಯಿತು. ಹತ್ತಾರು ವರ್ಷಗಳಿಂದ ತೆವಳುತ್ತಲೇ ನಡೆದ ಈ ಪಾರ್ಕಿಂಗ್ ಲಾಟ್ ಕಾಮಗಾರಿ ಕೊನೆಗೂ ಪೂರ್ಣಗೊಂಡು 2023ರ ಅ.18ರಂದು ಉದ್ಘಾಟನೆಗೊಂಡಿತು. ಆದಾಗ್ಯೂ ಮೈಸೂರಿಗರು ಹಾಗೂ ಪ್ರವಾಸಿಗರಿಂದ ಈ ಪಾರ್ಕಿಂಗ್ ವ್ಯವಸ್ಥೆ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ.

ಇದರೊಂದಿಗೆ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕೆಂಬ ನಗರಪಾಲಿಕೆ ಉದ್ದೇಶಿತ ಯೋಜನೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಕಾರ್ಯಗತಗೊಂಡ ಪುರಭವನದ ಪಾರ್ಕಿಂಗ್ ವ್ಯವಸ್ಥೆಯ ಬಳಕೆಗೆ ಉತ್ತೇಜನ ದೊರೆಯುತ್ತಿಲ್ಲವೋ, ಇಂತಹ ಸೌಲಭ್ಯ ಬಗ್ಗೆ ಮಾಹಿತಿ ಕೊರತೆ ಇದೆಯೋ ಎಂಬುದೇ ತಿಳಿಯದಾಗಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪುರಭವನ ಪಾರ್ಕಿಂಗ್ ಲಾಟ್ ಗುತ್ತಿಗೆದಾರ ಬಿ.ಮಹದೇವ್, ಅರಮನೆ ಉತ್ತರ ದ್ವಾರದಲ್ಲಿ ಅರಮನೆಗೆ ಭೇಟಿ ನೀಡಲು ಟಿಕೆಟ್ ಕೌಂಟರ್ ತೆರೆದರೆ, ಪುರಭವನದ ಪಾರ್ಕಿಂಗ್ ಲಾಟ್‌ನತ್ತ ಪ್ರವಾಸಿಗರು, ಸಾರ್ವಜನಿಕರು ಮುಖ ಮಾಡಲಿದ್ದಾರೆ. ಈ ಮೊದಲ ಅರಮನೆ ಉತ್ತರ ದ್ವಾರದಲ್ಲಿ ಅರಮನೆ ಭೇಟಿಗೆ ಟಿಕೆಟ್ ನೀಡಲಾಗುತ್ತಿತ್ತು. ಇದು ಮತ್ತೆ ಜಾರಿಯಾದರೆ ಈ ಪಾರ್ಕಿಂಗ್ ಸೌಲಭ್ಯ ಬಳಕೆಗೆ ಪೂರಕ ವಾತಾವರಣ ಸೃಷ್ಟಿಯಾಗಲಿದೆ ಎಂದು ಹೇಳಿದರು.

ಅರಮನೆಗೆ ಒಂದೇ ಕಡೆ ಟಿಕೆಟ್ ವ್ಯವಸ್ಥೆ ಮಾಡಿರುವುದರಿಂದ ವಾರಾಂತ್ಯದಲ್ಲಿ ಗನ್‌ಹೌಸ್ ವೃತ್ತದಿಂದ ಜಯ ಚಾಮರಾಜ ಒಡೆಯರ್ ವೃತ್ತದವರೆಗೆ (ಆರ್ ಗೇಟ್) ವಾಹನ ದಟ್ಟಣೆ ವ್ಯಾಪಕವಾಗುತ್ತಿದೆ. ಇದರಿಂದ ಸುಗಮ ಸಂಚಾರಕ್ಕೆ ತೊಡಕಾಗಿದೆ. ಅಶೋಕ ರಸ್ತೆ, ಮುಕ್ಕಾಜಿ ಚೌಕ, ಗಾಂಧಿ ಚೌಕ ಮೊದಲಾದೆಡೆ ವಾಹನಗಳನ್ನು ನಿಲುಗಡೆ ಮಾಡಲಾಗುತ್ತಿದೆ. ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ ಪೊಲೀಸರು ಬ್ಯಾರಿಕೇಡ್ ಹಾಕಿದ್ದರೂ ಅಲ್ಲಿಯೇ ವಾಹನ ನಿಲುಗಡೆ ಮಾಡುವುದೂ ಇದೆ. ಕೋಟ್ಯಾಂತರ ರೂಪಾಯಿ ವಿನಿಯೋಗಿಸಿ ಪುರಭವನ ಆವರಣದಲ್ಲಿ ಪಾರ್ಕಿಂಗ್ ಕಲ್ಪಿಸಿದ್ದರೂ ಬಳಸಿಕೊಳ್ಳುತ್ತಿಲ್ಲ. ಈ ಸೌಲಭ್ಯವಿದೆ ಎಂಬುದೇ ಬಹಳಷ್ಟು ಮಂದಿಗೆ ತಿಳಿದಿಲ್ಲ ಎಂದರು.

ಎರಡು ಅಂತಸ್ತಿನಲ್ಲಿ ಪಾರ್ಕಿಂಗ್ ಮಾಡಲು ಅವಕಾಶವಿದ್ದು, 500ರಿಂದ 600 ಕಾರುಗಳ ಪಾರ್ಕಿಂಗ್‌ಗೆ ಸ್ಥಳಾವಕಾಶ ಇಲ್ಲಿದೆ. ಆದರೆ ಪ್ರತಿದಿನ 70ರಿಂದ 80 ವಾಹನಗಳು (ಕಾರು) ಮಾತ್ರ ಪಾರ್ಕಿಂಗ್ ಆಗುತ್ತಿವೆ. ಕಾರು (ನಾಲ್ಕು ಚಕ್ರ) ಹಾಗೂ ದ್ವಿಚಕ್ರ ವಾಹನ ಎರಡಕ್ಕೂ ನಿಲುಗಡೆಗೆ ಅವಕಾಶವಿದೆ. ಈಗ ಒಂದು ಗಂಟೆ ನಿಲುಗಡೆಗೆ (ಕಾರು) 30 ರೂ. ಇದೆ. ಜಿಎಸ್‌ಟಿ ಸಂಗ್ರಹಿಸುತ್ತಿಲ್ಲ. ಅದನ್ನು ನಾನು ಸ್ವತಃ ಪಾವತಿಸುತ್ತಿದ್ದೇನೆ. ಜಿಎಸ್‌ಟಿ ಸೇರಿಸಿದರೆ 35 ರೂಪಾಯಿ 40 ಪೈಸೆ ತೆಗೆದುಕೊಳ್ಳಬೇಕಾಗುತ್ತದೆ. ವಿದ್ಯುತ್ ಬಿಲ್ ಪಾವತಿ ಮಾಡಬೇಕು. 7 ಸಿಬ್ಬಂದಿ ಪಾರ್ಕಿಂಗ್ ಲಾಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಷ್ಟು ಜನಕ್ಕೆ ವೇತನ ಪಾವತಿ ಮಾಡಬೇಕು. ನಷ್ಟವಿದ್ದರೂ ಮುಂದಿನ ದಿನಗಳಲ್ಲಿ ಉತ್ತಮ ಬೆಳವಣಿಗೆ ಕಾಣಲಿದೆ ಎಂಬ ಭರವಸೆಯಲ್ಲಿ ಮುನ್ನಡೆಯುತ್ತಿದ್ದೇನೆ ಎಂದು ಅವರು ತಿಳಿಸಿದರು.

ಸದ್ಯ ಬಳಕೆಗೆ ಮುಕ್ತವಿಲ್ಲ: ನಗರದ ದಿವಾನ್ಸ್ ರಸ್ತೆ ಹಾಗೂ ಕೃಷ್ಣ ವಿಲಾಸ್ ರಸ್ತೆ ಮಧ್ಯ ಭಾಗದಲ್ಲಿ ಡಾ.ಅಂಬೇಡ್ಕರ್ ಭವನ ನಿರ್ಮಾಣವಾಗುತ್ತಿದೆ. ಇಲ್ಲಿಯೂ ವಿಶಾಲ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ. ಆದರೆ ಕಟ್ಟಡ ಕಾಮಗಾರಿ ಪೂರ್ಣಗೊಳ್ಳದ ಕಾರಣ ಸಾರ್ವಜನಿಕರು ಈ ಪಾರ್ಕಿಂಗ್ ಸೌಲಭ್ಯ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಬ್ಯಾಟರಿಚಾಲಿತ ವಾಹನ ವ್ಯವಸ್ಥೆಯಾಗಬೇಕು

ಮಾಜಿ ಮೇಯರ್ ಶಿವಕುಮಾರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಹಿಂಭಾಗ 5 ಎಕರೆ ಜಾಗವಿದ್ದು, ಅದನ್ನು ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ಪಾಲಿಕೆಗೆ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮೇಯರ್ ಆಗಿದ್ದಾಗ ಮನವಿ ಮಾಡಿದ್ದೆ. ಅದಕ್ಕೆ ಅವರಿಂದ ಸಕಾರಾತ್ಮಕ ಸ್ಪಂದನೆ ಸಹ ಸಿಕ್ಕಿತ್ತು. ಸದರಿ ಜಾಗವು ಜಿಲ್ಲಾಧಿಕಾರಿಗಳ ಅಧೀನಕ್ಕೆ ಬರುವ ಕಾರಣ ಅವರಿಗೆ ಮನವಿ ಮಾಡಿದ್ದೆ. ಇಲ್ಲಿಂದ ಬ್ಯಾಟರಿಚಾಲಿತ ವಾಹನಗಳ ಮೂಲಕ ನಗರದ ವಿವಿಧೆಡೆ ತೆರಳಲು ಅವಕಾಶ ಕಲ್ಪಿಸಬೇಕೆಂಬುದು ನನ್ನ ಉದ್ದೇಶಿತ ಯೋಜನೆಯಾಗಿತ್ತು. ಈ ಸಂಬಂಧ ಪಾಲಿಕೆ ಆಯುಕ್ತರಿಗೆ ಪತ್ರ ಸಹ ಬರೆದಿದ್ದೆ. ಚರ್ಚೆಯೂ ನಡೆದಿತ್ತು. ಅಷ್ಟೊತ್ತಿಗೆ ನನ್ನ ಮೇಯರ್ ಅಧಿಕಾರಾವಧಿ ಮುಗಿಯಿತು. ಸದ್ಯ ಈ ಯೋಜನೆ ಇನ್ನು ಸಿದ್ಧಗೊಂಡಿಲ್ಲ. ಇಲ್ಲಿ ಶಾಶ್ವತವಾದ ಸುಸಜ್ಜಿತ ಪಾರ್ಕಿಂಗ್ ಲಾಟ್ ನಿಮಿಸುವುದು ಭವಿಷ್ಯದ ದೃಷ್ಟಿಯಿಂದ ಸೂಕ್ತ ಎಂದು ತಿಳಿಸಿದರು.



ಪುರಭವನ ಪಾರ್ಕಿಂಗ್ ಲಾಟ್ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ನನ್ನ ಅವಧಿಯಲ್ಲಿ ಅದನ್ನು ಪೂರ್ಣಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ ಹಿನ್ನೆಲೆಯಲ್ಲಿ ಅದು ಉದ್ಘಾಟನೆ ಆಯಿತು. ಇಲ್ಲಿಯೂ ಬ್ಯಾಟರಿಚಾಲಿತ ವಾಹನಗಳ ವ್ಯವಸ್ಥೆ ಮಾಡಬೇಕು. ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಅರಮನೆಗೆ ಭೇಟಿ ನೀಡಲು ಟಿಕೆಟ್ ಕೌಂಟರ್ ತೆರೆಯಬೇಕು. ಜೊತೆಗೆ ಪುರಭವನ ಮತ್ತು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ನಡುವೆ ಸುರಂಗ ಮಾರ್ಗ ನಿರ್ಮಿಸಬೇಕು. ಇದರಿಂದ ಅನುಕೂಲವಾಗಲಿದೆ. ಜೊತೆಗೆ ಮೃಗಾಲಯಕ್ಕೆ ಭೇಟಿ ನೀಡುವವರ ಅನುಕೂಲಕ್ಕಾಗಿಯೂ ವಸ್ತುಪ್ರದರ್ಶನ ಸಮೀಪ ಸುಸಜ್ಜಿತ ಪಾರ್ಕಿಂಗ್ ಲಾಟ್ ನಿರ್ಮಿಸುವ ಆಶ್ಯವೂ ಇದೆ ಎಂದು.

ನಿವೃತ್ತ ಶಿಕ್ಷಕಿ ಮನೆ ಬಾಗಿಲು ಮೀಟಿ 4.15 ಲಕ್ಷ ಮೌಲ್ಯದ ನಗದು–ಚಿನ್ನಾಭರಣ ಕಳವು

ಮೈಸೂರು, ಜೂ.3(ಎಸ್‌ಬಿಡಿ)– ನಿವೃತ್ತ ಶಿಕ್ಷಕಿಯೊಬ್ಬರ ಮನೆಯ ಮುಂಬಾಗಿಲು ಮೀಟಿ, 4.15 ಲಕ್ಷ ರೂ. ಮೌಲ್ಯದ ನಗ–ನಾಣ್ಯ ದೋಚಿರುವ ಘಟನೆ ಮೈಸೂರಿನ ಶಿಕ್ಷಕರ ಬಡಾವಣೆಯಲ್ಲಿ ನಡೆದಿದೆ.

ಇಲ್ಲಿನ ಬಸವೇಶ್ವರ ರಸ್ತೆ ನಿವಾಸಿ, ನಿವೃತ್ತ ಶಿಕ್ಷಕಿ ಕೆ.ಆರ್.ಕಮಲಾ ಅವರ ಮನೆಯಲ್ಲಿದ್ದ 2 ಲಕ್ಷ ರೂ. ನಗದು, 1.25 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 90 ಸಾವಿರ ಮೌಲ್ಯದ ಬೆಳ್ಳಿ ವಸ್ತುಗಳನ್ನು ಕಳ್ಳರು ದೋಚಿದ್ದಾರೆ.

ಕಮಲಾ ಅವರು ಪುತ್ರಿ ಕ್ಷಮಾ ಅವರೊಂದಿಗೆ ಜೂ.1ರಂದು ಬೆಳಗ್ಗೆ 6.30ಕ್ಕೆ ತಮಿಳುನಾಡು ತಾಳವಾಡಿ ಬಳಿಯ ಕೋಡಿಪುರಂನ ಶನೇಶ್ವರಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ ಸಮಾರಂಭಕ್ಕೆ ತೆರಳಿದ್ದರು. ಜೂ.2ರಂದು ಸಂಜೆ 5.45ರ ವೇಳೆಗೆ ವಾಪಸ್ಸಾದಾಗ ಮನೆಯ ಮುಂಬಾಗಿಲು ಮೀಟಿ ತೆಗೆದಿರುವುದನ್ನು ಕಂಡು ಗಾಬರಿಯಿಂದ ಒಳಹೋಗಿ ನೋಡಿದಾಗ ಬೆಡ್ ರೂಂ ಬೀರುವಿನಲ್ಲಿದ್ದ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದವು. ಅಲ್ಲಿದ್ದ ಹಣ, ಚಿನ್ನಾಭರಣ ಹಾಗೂ ಬೆಳ್ಳಿ ವಸ್ತುಗಳು ಕಳುವಾಗಿದ್ದವು. ಈ ಸಂಬಂಧ ಕಮಲಾ ಅವರು ನೀಡಿದ ದೂರಿನನ್ವಯ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳರ ಪತ್ತೆಗೆ ಶೋಧ ನಡೆಸಿದ್ದಾರೆ.

ಲಾಭದ ಆಸೆಯಿಂದ ಹೂಡಿಕೆ ಮಾಡಿ 10.65 ಲಕ್ಷ ಕಳೆದುಕೊಂಡ ಖಾಸಗಿ ಆಸ್ಪತ್ರೆ ನೌಕರ

ಮೈಸೂರು, ಜೂ. 3– ಆನ್‌ಲೈನ್ ಮೂಲಕ ನಕಲಿ ಸಂಸ್ಥೆಯಲ್ಲಿ ಹೂಡಿಕೆ ಮಾಡಿ ಖಾಸಗಿ ಆಸ್ಪತ್ರೆಯ ಅಧಿಕಾರಿಯೊಬ್ಬರು 10.65 ಲಕ್ಷ ರೂ. ವಂಚನೆಗೊಳಗಾಗಿದ್ದಾರೆ. ದೇವನೂರಿನಲ್ಲಿರುವ ನಾರಾಯಣ ಆಸ್ಪತ್ರೆಯ ಸೀನಿಯರ್ ಎಕ್ಸಿಕ್ಯೂಟಿವ್ ಎಂ.ಎನ್. ಪುನೀತ್‌ಕುಮಾರ್(35) ಅವರು ವಾಟ್ಸಾಪ್ ನಂಬರ್ ಮೂಲಕ ಬಂದ ಮಾಹಿತಿಯನ್ನು ನಂಬಿ CINV M/F ಸಂಸ್ಥೆಯಲ್ಲಿ 10,65,121 ರೂ.ಗಳನ್ನು ಆನ್‌ಲೈನ್ ಮೂಲಕ ಹೂಡಿಕೆ ಮಾಡಿ ವಂಚನೆಗೊಳಗಾಗಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಸರ ಅಪಹರಿಸಿದ್ದ ತಮಿಳುನಾಡು ಮೂಲದ ಮಹಿಳೆ ಬಂಧನ

ಮೈಸೂರು, ಜೂ 3(ಎಸ್‌ಪಿಎನ್)– ಮಹಿಳೆಯೊಬ್ಬರ ಕುತ್ತಿಗೆಯಲ್ಲಿದ್ದ 3.50 ಲಕ್ಷ ರೂ ಮೌಲ್ಯದ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದ ಐನಾತಿ ಸರಗಳ್ಳಿಯನ್ನು ದೇವರಾಜ ಠಾಣೆ ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ, ಜೈಲಿಗೆ ಕಳುಹಿಸಿದ್ದಾರೆ. ತಮಿಳುನಾಡು ಮೂಲದ ಗಾಯತ್ರಿ ಬಂಧಿತ ಮಹಿಳೆಯಾಗಿದ್ದು, ಕಾಮನಕೆರೆಹುಂಡಿ ನಿವಾಸಿ ಸಾಕಮ್ಮ ಎಂಬುವವರು ಜೂ.1ರಂದು ನಗರ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ಹಿಂದಿನಿಂದ ಬಂದ ಗಾಯತ್ರಿ, ಸಾಕಮ್ಮರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕಸಿದುಕೊಂಡು ಪರಾರಿಯಾಗಲು ಯತ್ನಿಸಿದ್ದಾಳೆ. ಈ ವೇಳೆ ಸಾಕಮ್ಮ ಜೋರಾಗಿ ಕೂಗಿಕೊಂಡಿದ್ದರಿಂದ ಸಮೀಪದಲ್ಲಿದ್ದ ಸಾರ್ವಜನಿಕರು ಗಾಯತ್ರಿಯನ್ನು ಹಿಡಿದು ಚಿನ್ನದ ಸರದ ಸಮೇತ ದೇವರಾಜ ಪೊಲೀಸರಿಗೆ ಒಪ್ಪಿಸಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿದ ದೇವರಾಜ ಪೊಲೀಸರು, ಬಂಧಿತ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ದೆವ್ವ ಬಿಡಿಸುವ ನೆಪದಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಮಂತ್ರವಾದಿ ಬಂಧನ

ಸಹೋದರನಿಂದಲೂ ಲೈಂಗಿಕ ದೌರ್ಜನ್ಯ

ಚಿತ್ರದುರ್ಗ: ದುಷ್ಟಶಕ್ತಿಗಳಿಂದ ಮುಕ್ತಿ ನೀಡುವ ನೆಪದಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಪದೇ ಪದೆ ಅತ್ಯಾಚಾರವೆಸಗಿದ ಮತ್ತು ಸಂತ್ರಸ್ತೆಯ ಸಹೋದರ ಕೂಡ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗುವಂತೆ ಮಾಡಿದ ಆರೋಪದ ಮೇಲೆ ಪೊಲೀಸರು ಸೋಮವಾರ ಚಿತ್ರದುರ್ಗದಲ್ಲಿ ಮಂತ್ರವಾದಿಯನ್ನು ಬಂಧಿಸಿದ್ದಾರೆ.

ಚಿತ್ರದುರ್ಗ ಮಹಿಳಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ವರದಿಯಾಗಿದ್ದು, ಪೊಲೀಸರು ಆರೋಪಿ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪೊಲೀಸರ ಪ್ರಕಾರ, ಅಪ್ರಾಪ್ತ ಸಂತ್ರಸ್ತೆ ಮೂರು ವರ್ಷ ಕುರಾನ್ ಓದಲೆಂದು ಮಸೀದಿಗೆ ತೆರಳುತ್ತಿದ್ದರು. ಈ ವೇಳೆ ಆಕೆಯನ್ನು ದುಷ್ಟಶಕ್ತಿಗಳು ಆವರಿಸಿದ್ದು, ಆಕೆಯ ಮನೆಯಲ್ಲಿ ವಿಶೇಷ ಪೂಜೆ ನಡೆಸಬೇಕು ಎಂದು ಆರೋಪಿಯು ಆಕೆಯ ಪೋಷಕರಿಗೆ ತಿಳಿಸಿದ್ದಾನೆ.

ಅದರಂತೆ ಆರರಿಂದ ಏಳು ತಿಂಗಳ ಕಾಲ ವಾರಕ್ಕೊಮ್ಮೆಯಂತೆ ಬಾಲಕಿಯ ಮನೆಗೆ ಮಂತ್ರವಾದಿ ಭೇಟಿ ನೀಡಿದ್ದಾನೆ. ಆತ ಭೇಟಿ ನೀಡಿದ ಪ್ರತಿ ಬಾರಿಯು, ಸಂತ್ರಸ್ತೆ ಮತ್ತು ಆಕೆಯ ಸಹೋದರನನ್ನು ಕೊಠಡಿಗೆ ಕರೆದೊಯ್ದು, ಪೋಷಕರನ್ನು ಕೊಠಡಿಯಿಂದ ಹೊರಗಿರುವಂತೆ ಸೂಚಿಸಿದ್ದಾನೆ.


ಸಂತ್ರಸ್ತೆಯಿಂದ ದುಷ್ಟಶಕ್ತಿಗಳನ್ನು ದೂರ ಮಾಡಬೇಕಾದರೆ ಆಕೆಯೊಂದಿಗೆ ಲೈಂಗಿಕವಾಗಿ ವ್ಯವಹರಿಸಬೇಕು ಎಂದು ಸಂತ್ರಸ್ತೆಯ ಸಹೋದರನಿಗೆ ಬ್ರೈನ್ ವಾಶ್ ಮಾಡಿದ್ದಾನೆ. ಅದರಂತೆ, ಆಕೆಯನ್ನು ಗುಣಪಡಿಸುವ ಹೆಸರಿನಲ್ಲಿ ಆತನೂ ಆಕೆಗೆ ಲೈಂಗಿಕ ಕಿರುಕುಳ ನೀಡುವಂತೆ ಮಾಡಿದ್ದಾನೆ.

ಆರೋಪಿ ಈ ಕೃತ್ಯವನ್ನು ಮೊಬೈಲಿನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಆಕೆಯ ಮೇಲೆ ತಾನೂ ಅತ್ಯಾಚಾರ ಎಸಗಿದ್ದಾನೆ. ಇದೇ ರೀತಿ ಆರು ತಿಂಗಳ ಕಾಲ ಆರೋಪಿ ಸಂತ್ರಸ್ತೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಮಗಳು ಹೊಟ್ಟೆನೋವು ಎಂದು ದೂರಿದ ನಂತರ ಪೋಷಕರು ಆಕೆಯನ್ನು ವೈದ್ಯರ ಬಳಿ ಕರೆದುಕೊಂಡು ಹೋದಾಗ ಘಟನೆ ಬೆಳಕಿಗೆ ಬಂದಿದೆ.

ಸಂತ್ರಸ್ತೆಯ ತಾಯಿ ನೀಡಿದ ದೂರಿನ ಆಧಾರದ ಮೇಲೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದು, ಈ ಸಂಬಂಧ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ. ಸಂತ್ರಸ್ತೆಯ ಸಹೋದರನ ವಿರುದ್ಧವೂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕ್ಯಾಲಿಫೋರ್ನಿಯಾದಲ್ಲಿ ಹೈದರಾಬಾದ್ ಮೂಲದ ವಿದ್ಯಾರ್ಥಿನಿ ನಾಪತ್ತೆ!

ಹ್ಯೂಸ್ಟನ್: 23 ವರ್ಷದ ಭಾರತೀಯ ವಿದ್ಯಾರ್ಥಿನಿಯೊಬ್ಬಳು ಕಳೆದ ವಾರದಿಂದ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಕಾಣೆಯಾಗಿದ್ದು, ಆಕೆಯನ್ನು ಹುಡುಕುವಲ್ಲಿ ಪೊಲೀಸರು ಸಾರ್ವಜನಿಕರ ಸಹಾಯವನ್ನು ಕೋರಿದ್ದಾರೆ.



ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿಯ ಸ್ಯಾನ್ ಬರ್ನಾರ್ಡಿನೊ (CSUSB) ವಿದ್ಯಾರ್ಥಿನಿ ನಿತೀಶಾ ಕಂದುಲಾ ಮೇ 28ರಂದು ನಾಪತ್ತೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕೊನೆಯದಾಗಿ ಲಾಸ್ ಏಂಜಲೀಸ್‌ನಲ್ಲಿ ಆಕೆ ಕಾಣಿಸಿಕೊಂಡಿದ್ದಳು ಮತ್ತು ಮೇ 30ರಂದು ನಾಪತ್ತೆಯಾಗಿದ್ದಾಳೆ ಎಂದು ವರದಿಯಾಗಿದೆ ಎಂದು CSUSBನ ಪೊಲೀಸ್ ಮುಖ್ಯಸ್ಥ ಜಾನ್ ಗುಟ್ಟಿರೆಜ್ ಎಕ್ಸ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಮುಂಬಯಿಯಲ್ಲಿ ಬಹು ಮಹಡಿ ಕಟ್ಟಡದಿಂದ ಜಿಗಿದು ಹಿರಿಯ ಐಎಎಸ್ ಅಧಿಕಾರಿ ದಂಪತಿ ಪುತ್ರಿ ಆತ್ಮಹತ್ಯೆ

ಮುಂಬೈ: ಐಎಎಸ್ ಹಿರಿಯ ಅಧಿಕಾರಿಗಳ ಪುತ್ರಿಯೊಬ್ಬಳು ಸೋಮವಾರ ಮುಂಜಾನೆ ಮುಂಬೈನ ಬಹುಮಹಡಿಯಿಂದ ಜಿಗಿದು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಹಾರಾಷ್ಟ್ರ ಕೇಡರ್ IAS ಅಧಿಕಾರಿಗಳಾದ ರಾಧಿಕಾ ಮತ್ತು ವಿಕಾಸ್ ರಸ್ತೋಗಿ ಅವರ ಪುತ್ರಿ 27 ವರ್ಷದ ಲಿಪಿ ರಸ್ತೋಗಿ ಆತ್ಮಹತ್ಯೆಗೆ ಶರಣಾದ ಯುವತಿ. ಕೂಡಲೇ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಚಿಕಿತ್ಸೆ ಫಲಿಸದೇ ಆಕೆ ಮೃತಪಟ್ಟಿದ್ದಾಳೆ.ಕಾನೂನು ವಿದ್ಯಾರ್ಥಿನಿಯಾಗಿದ್ದ ಲಿಪಿ, ಇಂದು ಮುಂಜಾನೆ 4 ಗಂಟೆ ಸುಮಾರಿಗೆ ರಾಜ್ಯ ಸಚಿವಾಲಯದ ಬಳಿಯ ಕಟ್ಟಡದ 10ನೇ ಮಹಡಿಯಿಂದ ಜಿಗಿದಿದ್ದಾರೆ. ಆಕೆಯ ಕೋಣೆಯಲ್ಲಿ ಡೆತ್ ನೋಟ್ ಒಂದು ಸಿಕ್ಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಿಪಿ ಹರಿಯಾಣದ ಸೋನೆಪತ್‌ನಲ್ಲಿ ಕಾನೂನು ವ್ಯಾಸಂಗ ಮಾಡುತ್ತಿದ್ದಳು. ಪೊಲೀಸ್ ಅಧಿಕಾರಿಗಳ ಪ್ರಕಾರ, ಅವಳು ಪರೀಕ್ಷೆಗಳ ಬಗ್ಗೆ ಆತಂಕದಲ್ಲಿದ್ದಳು ಎಂದು ಹೇಳಲಾಗುತ್ತಿದೆ. ವಿಕಾಸ್ ರಸ್ತೋಗಿ ಮಹಾರಾಷ್ಟ್ರದ ಶಿಕ್ಷಣ ಇಲಾಖೆಯಲ್ಲಿ ಪ್ರಧಾನ ಕಾರ್ಯದರ್ಶಿಯಾಗಿದ್ದರೆ, ರಾಧಿಕಾ ರಸ್ತೋಗಿ ರಾಜ್ಯದ ಗೃಹ ಇಲಾಖೆಯಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ವಿವಿಧೆಡೆ ಅಪರಿಚಿತ ಶವಗಳು ಪತ್ತೆ

ಮೈಸೂರು, ಜೂ.3– ಮೇ 30 ರಂದು ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಸುಮಾರು 70 ವರ್ಷದ ಹೆಂಗಸು ಮೃತಪಟ್ಟಿದ್ದು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ಮಹಿಳೆಗೆ ಸುಮಾರು 70 ವರ್ಷ ವಯಸ್ಸಾಗಿದ್ದು, 5.2 ಅಡಿ ಎತ್ತರ, ಗೋಧಿ ಮೈ ಬಣ್ಣ ಬಿಳಿ ತಲೆ ಕೂದಲನ್ನು ಹೊಂದಿರುತ್ತಾರೆ.

ವೃದ್ಧನ ಶವ: ಜೂ.1 ರಂದು ಕಪಿಲಾ ನದಿಯ ಹದಿನಾರುಕಾಲು ಮಂಟಪದ ಬಳಿ ಸುಮಾರು 60 ರಿಂದ 65 ವರ್ಷದ ವ್ಯಕ್ತಿಯ ಶವ ಪತ್ತೆಯಾಗಿದ್ದು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

5.4 ಅಡಿ ಎತ್ತರ, ಕೋಲುಮುಖ, ಸಾಧಾರಣ ಶರೀರ, ಎಣ್ಣೆಗೆಂಪು ಮೈಬಣ್ಣ, ಬಿಳಿ ತಲೆ ಕೂದಲು, ಗಡ್ಡ ಮೀಸೆಯನ್ನು ಬಿಟ್ಟಿರುತ್ತಾರೆ ಮೃತಪಟ್ಟ ಸಂದರ್ಭದಲ್ಲಿ ವ್ಯಕ್ತಿಯು ಹಸಿರು ಬಣ್ಣದ ಒಳಚಡ್ಡಿ ಧರಿಸುತ್ತಾರೆ.

ಪರಶುರಾಮ ದೇವಸ್ಥಾನದ ಬಳಿ: ಜೂ.1 ರಂದು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನ ಪಕ್ಕದ ಪರಶುರಾಮ ದೇವಸ್ಥಾನದ ಬಳಿ ಸುಮಾರು 40 ರಿಂದ 54 ವರ್ಷದ ವ್ಯಕ್ತಿಯ ಶವ ಪತ್ತೆಯಾಗಿದ್ದು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

5.4 ಅಡಿ ಎತ್ತರ, ಕೋಲುಮುಖ, ಸಾಧಾರಣ ಶರೀರ, ಎಣ್ಣೆಗೆಂಪು ಮೈಬಣ್ಣ, ಬಿಳಿ ತಲೆ ಕೂದಲು ಮತ್ತು ಗಡ್ಡ ಮೀಸೆ ಬಿಟ್ಟಿರುತ್ತಾರೆ. ಎಡಗೈ ಮೇಲೆ ಡಾ.ರಾಜ್ ಮತ್ತು ಮಂಜು ಎಂದು ಕನ್ನಡದಲ್ಲಿ ಹಾಗೂ ಬಲಗೈಯಲ್ಲಿ ಬಾಬು ಮತ್ತು ಹೇಮಾ ಎಂದು ಹಸಿರು ಹಚ್ಚೆ ಹಾಕಿಸಿರುತ್ತಾರೆ. ಮೃತಪಟ್ಟ ಸಂದರ್ಭದಲ್ಲಿ ವ್ಯಕ್ತಿಯು ಹಸಿರು ಬಣ್ಣದ ಒಳಚಡ್ಡಿ ಧರಿಸಿರುತ್ತಾರೆ.

ವಿದ್ಯಾರ್ಥಿ ನಿಲಯದ ಮುಂಭಾಗ: ಮೇ 31 ರಂದು ನಂಜನಗೂಡಿನ ಉಪ್ಪಾರ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಮುಂಭಾಗದಲ್ಲಿ ಸುಮಾರು 50 ರಿಂದ 55 ವರ್ಷದ ವ್ಯಕ್ತಿ ಮೃತಪಟ್ಟಿದ್ದು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

55 ಅಡಿ ಎತ್ತರ, ಕೋಲುಮುಖ, ಸಾಧಾರಣ ಶರೀರ, ಎಣ್ಣೆ ಗೆಂಪು ಮೈ ಬಣ್ಣ, ಬಿಳಿ ತಲೆ ಕೂದಲು ಮತ್ತು ಗಡ್ಡ ಮೀಸೆ ಬಿಟ್ಟಿರುತ್ತಾನೆ. ಮೃತಪಟ್ಟ ಸಂದರ್ಭದಲ್ಲಿ ವ್ಯಕ್ತಿಯು ಸಿಮೆಂಟ್ ಬಣ್ಣದ ತುಂಬು ತೋಳಿನ ಶರ್ಟ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ.

ಮೃತರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರಿನ ಎಸ್.ಪಿ ಅವರ ದೂ.ಸಂ: 0821–2520040, ಮೈಸೂರು ಜಿಲ್ಲಾ ನಿಸ್ತಂತು ಕೊಠಡಿ ದೂ.ಸಂ:0821–2444080, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ದೂ.ಸಂ:08221–228383 ಅಥವಾ nanjangudtownmys@ksp.gov.in ಅನ್ನು ಸಂಪರ್ಕಿಸಬಹುದು ಎಂದು ನಂಜನಗೂಡು ಪಟ್ಟಣ ಪೊಲೀಸ್ ಠಾಣಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಬಕಾರಿ ನೀತಿ ಪ್ರಕರಣ: BRS ನಾಯಕಿ ಕವಿತಾ ನ್ಯಾಯಾಂಗ ಬಂಧನ ವಿಸ್ತರಣೆ

ನವದೆಹಲಿ: ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಬಿಆರ್‌ಎಸ್ ನಾಯಕಿ ಕೆ ಕವಿತಾ ಅವರ ನ್ಯಾಯಾಂಗ ಬಂಧನದ ಅವಧಿಯನ್ನು, ದೆಹಲಿ ನ್ಯಾಯಾಲಯವು ಜುಲೈ 3 ರವರೆಗೆ ಸೋಮವಾರ ವಿಸ್ತರಿಸಿದೆ. ಕವಿತಾ ಅವರ ವಿರುದ್ಧ ಪ್ರೊಡಕ್ಷನ್ ವಾರಂಟ್ ಹೊರಡಿಸಿದ ಹಿಂದಿನ ಆದೇಶದ ಅನ್ವಯ ಆರೋಪಿಯನ್ನು, ಇಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ನ್ಯಾಯಾಂಗ ಬಂಧನ ಅವಧಿಯನ್ನು ವಿಸ್ತರಿಸಿದರು.



ದೆಹಲಿ ಅಬಕಾರಿ ಹಗರಣದಲ್ಲಿ ಇಡಿ ಮತ್ತು ಸಿಬಿಐ ದಾಖಲಿಸಿರುವ ಎರಡು ಪ್ರಕರಣಗಳಲ್ಲಿ ಕವಿತಾ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ನ್ಯಾಯಾಲಯವು ಇದೇ ಪ್ರಕರಣದಲ್ಲಿ ಮೂವರು ಸಹ ಆರೋಪಿಗಳಾದ ಪ್ರಿನ್ಸ್, ದಾಮೋದರ್ ಮತ್ತು ಅರವಿಂದ್ ಸಿಂಗ್ ಅವರಿಗೆ ಜಾಮೀನು ನೀಡಿದೆ.

ಸದ್ಯ ರದ್ದಾಗಿರುವ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ 46 ವರ್ಷದ ಬಿಆರ್‌ಎಸ್ ನಾಯಕಿ ಕವಿತಾ ಅವರನ್ನು ಮಾರ್ಚ್ 15ರಂದು ಹೈದರಾಬಾದ್‌ನ ಬಂಜಾರಾ ಹಿಲ್ಸ್ ನಿವಾಸದಿಂದ ಇ.ಡಿ ಅಧಿಕಾರಿಗಳು ಬಂಧಿಸಿದ್ದರು.

ಸಿಇಟಿ ಫಲಿತಾಂಶಕ್ಕೆ ಪೋಷಕರ ಅಸಮಾಧಾನ

ಕೆಇಎ ಕಚೇರಿ ಮುಂದೆ ಆಕ್ರೋಶ

ಬೆಂಗಳೂರು, ಜೂ.3(ಎಂಕೆ)– ಸಿಇಟಿ ಪರೀಕ್ಷಾ ಫಲಿತಾಂಶದ ಬಗ್ಗೆ ಅಸಮಾಧಾನ ಹೊರಹಾಕಿರುವ ಪೋಷಕರು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಕೆಇಎ ಕಚೇರಿ ಮುಂದೆ ಜಮಾಯಿಸುತ್ತಿದ್ದಾರೆ. ಸಿಇಟಿ ಪರೀಕ್ಷೆಯಿಂದಾಗಿ ನಮ್ಮ ಮಕ್ಕಳ ಭವಿಷ್ಯ ಹಾಳಾಗಿದೆ. ಪಿಯುಸಿಯಲ್ಲಿ ಶೇ.97, 98 ರಷ್ಟು ಅಂಕ ಪಡೆದರೂ ಸಿಇಟಿಯಲ್ಲಿ ರ್‍ಯಾಂಕ್ ಬಂದಿಲ್ಲ. ಕೆಲವರು ಪರೀಕ್ಷೆಗೆ ಹಾಜರಾಗಿದ್ದರೂ ಗೈರು ಎಂದು ತೋರಿಸಲಾಗಿದೆ. ಫಲಿತಾಂಶದಲ್ಲಿ ಧನಾತ್ಮಕ ಬದಲಾವಣೆ ಆಗಿಲ್ಲ. ಇದರ ನಡುವೆ ಕೆಇಎ ನಿರ್ದೇಶಕಿ ರಮ್ಯಾ ಅವರ ವರ್ಗಾವಣೆ ಆಗಿದೆ. ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯಕ್ಕೆ ನ್ಯಾಯಬೇಕು ಎಂದು ಒತ್ತಾಯಿಸುತ್ತಿದ್ದು, ಕೆಇಎ ನಡೆಗೆ ಆಕ್ರೋಶ ವ್ಯಕ್ತವಾಗಿದೆ.

ಟಿ20 ವಿಶ್ವಕಪ್ 2024: ದಾಖಲೆ ಮೊತ್ತದ ಬಹುಮಾನ ಘೋಷಿಸಿದ ಐಸಿಸಿ

ದುಬೈ: ಕ್ರಿಕೆಟ್ ಟಿ20 ವಿಶ್ವಕಪ್‌ನ 9ನೇ ಆವೃತ್ತಿಯ ವಿಜೇತರಿಗೆ ಭಾರಿ ಮೊತ್ತದ ಬಹುಮಾನವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಘೋಷಿಸಿದೆ. ಕ್ರಿಕೆಟ್ ಇತಿಹಾಸದಲ್ಲೇ ಇದು ಈವರೆಗಿನ ಅತ್ಯಧಿಕ ಬಹುಮಾನ ಮೊತ್ತವಾಗಿದೆ. ಬಾರ್ಬಡೋಸ್‌ನಲ್ಲಿರುವ ಕಿಂಗ್‌ಸ್ಟನ್ ಓವಲ್‌ನಲ್ಲಿ ಜೂನ್ 29ರಂದು ನಡೆಯುವ ಅಂತಿಮ ಪಂದ್ಯದಲ್ಲಿ ಟ್ರೋಫಿ ಎತ್ತುವ ವಿಜೇತ ತಂಡಕ್ಕೆ ಬರೋಬ್ಬರಿ 24.5ಲಕ್ಷ ಅಮೆರಿಕನ್ ಡಾಲರ್ (20.36 ಕೋಟಿ) ಬಹುಮಾನ ಪಡೆಯಲಿದ್ದಾರೆ.

ICC MEN'S T20 WORLD CUP WEST INDIES & USA 2024

2ನೇ ಸ್ಥಾನ ಪಡೆದ ತಂಡಕ್ಕೆ 12.8 ಅಮೆರಿಕನ್ ಡಾಲರ್ (10.63 ಕೋಟಿ) ಬಹುಮಾನ ಸಿಗಲಿದೆ. ಸೆಮಿಫೈನಲ್ ಹಂತಕ್ಕೆ ತಲುಪಿದ ತಂಡಗಳಿಗೆ ತಲಾ 6.54 ಕೋಟಿ ಬಹುಮಾನ ಸಿಗಲಿದೆ.

ಸೂಪರ್ 8 ಹಂತದಲ್ಲೇ ಪರಾಭವಗೊಳ್ಳುವ ನಾಲ್ಕು ತಂಡಗಳಿಗೆ ತಲಾ 3.17 ಕೋಟಿ ಲಭಿಸಲಿದೆ. 9, 10, 11 ಹಾಗೂ 12ನೇ ಸ್ಥಾನ ಪಡೆಯುವ ತಂಡಗಳಿಗೆ ತಲಾ 2 ಕೋಟಿ ಸಿಗಲಿದೆ. ಇವುಗಳೊಂದಿಗೆ ಪ್ರತಿ ತಂಡವೂ ಆಡುವ ಪ್ರತಿ ಪಂದ್ಯಕ್ಕೆ 25ಲಕ್ಷ ಹೆಚ್ಚುವರಿ ಹಣ ಪಡೆಯಲಿವೆ. 28 ದಿನಗಳಲ್ಲಿ ಒಟ್ಟು 55 ಪಂದ್ಯಗಳು ನಡೆಯಲಿವೆ. ಇದಕ್ಕಾಗಿ ಅಮೆರಿಕದ ಒಂಭತ್ತು ಕ್ರೀಡಾಂಗಣಗಳು ಸಜ್ಜುಗೊಂಡಿವೆ. ಜೂನ್ 5ರಿಂದ ಪ್ರಾರಂಭವಾಗಲಿರುವ ಟಿ20 ವಿಶ್ವಕಪ್‌ನ ಪ್ರಾಥಮಿಕ ಸುತ್ತಿನಲ್ಲಿ 40 ಪಂದ್ಯಗಳು ನಡೆಯಲಿವೆ. ನಂತರ ಸೂಪರ್ 8ರ ಹಂತ, ಸೆಮಿಫೈನಲ್ ಹಾಗೂ ಫೈನಲ್ ಪಂದ್ಯ ನಡೆಯಲಿದೆ.

ಸೂಪರ್ ಓವರ್‌ನಲ್ಲಿ ಗೆದ್ದ ನಮೀಬಿಯಾ

ಬಾರ್ಬಡೋಸ್, ಜೂ.3– ಇಲ್ಲಿನ ಕೆನ್ಸಿಂಗ್ಟನ್ ಓವಲ್ ಸ್ಟೇಡಿಯಂನಲ್ಲಿ ಸೋಮವಾರ ನಡೆದ ಟಿ20 ವಿಶ್ವಕಪ್ ಪಂದ್ಯಾವಳಿಯ 3ನೇ ಪಂದ್ಯದಲ್ಲಿ ಒಮನ್ ವಿರುದ್ಧ ನಮೀಬಿಯಾ ಸೂಪರ್ ಓವರ್‌ನಲ್ಲಿ ಗೆಲುವು ಸಾಧಿಸಿದೆ.

ಲೋ ಸ್ಕೋರಿಂಗ್ ಆದರೂ ಅತ್ಯಂತ ರೋಚಕತೆಯಿಂದ ಕೂಡಿದ್ದ ಪಂದ್ಯದಲ್ಲಿ ಎರಡೂ ತಂಡಗಳ ಮೊತ್ತ ಸಮನಾಗಿದ್ದ ಕಾರಣ ಸೂಪರ್ ಓವರ್‌ಗೆ ಮೊರೆ ಹೋಗಲಾಯಿತು. ಅದರಂತೆ ಡೇವಿಡ್ ವೀಸ್ ಅವರ ಆಲ್‌ರೌಂಡ್ ಆಟದ ಬಲದಿಂದ ನಮೀಬಿಯಾ ರೋಚಕ ಗೆಲುವು ಪಡೆಯಿತು.



109 ರನ್‌ಗೆ ಒಮನ್ ಆಲೌಟ್: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಒಮನ್ 19.4 ಓವರ್‌ಗಳಿಗೆ 109 ರನ್ ಗಳಿಗೆ ಆಲೌಟಾಯಿತು. ಜೀಸನ್ ಮಸೂದ್ 22, ಖಲೀಲ್ ಕೈಲ್ 34 ಹಾಗೂ ಅಯಾನ್ ಖಾನ್ 15, ಶಕೀಲ್ ಅಹಮ್ಮದ್ 11ರನ್ ಗಳಿಸಿದ್ದು ಬಿಟ್ಟರೇ ಇನ್ನುಳಿದ ಬ್ಯಾಟ್ಸ್‌ಮನ್‌ಗಳು ಎರಡಂಕಿ ಮೊತ್ತ ದಾಖಲಿಸುವಲ್ಲಿ ವಿಫಲರಾದರು. ನಮೀಬಿಯಾ ಪರ ಬೌಲಿಂಗ್‌ನಲ್ಲಿ ರುಬೆನ್ ಟ್ರಂಪಲ್ಮನ್ 4, ಡೇವಿಡ್ ವೀಸ್ 3, ಹೆರ್ಹಾರ್ಡ್ ಎರಾಸ್ಮಸ್ 2, ಬರ್ನಾರ್ಡ್ ಸ್ಕೋಲ್ಟ್ಜ್ 1 ವಿಕೆಟ್ ಪಡೆದರು.

110 ರನ್‌ಗಳ ಗುರಿ ಹಿಂಬಾಲಿಸಿದ ನಮೀಬಿಯಾ ಸುಲಭವಾಗಿ ಗೆಲುವು ಪಡೆಯಲಿದೆ ಎಂದು ಅಂದಾಜಿಸಲಾಗಿತ್ತು ಆದರೆ ಕುಟ್ಟುನಿಟ್ಟಾಗಿ ಬೌಲ್ ಮಾಡಿದ ಒಮನ್ ಬೌಲರ್‌ಗಳು ನಮೀಬಿಯಾವನ್ನು 20 ಓವರ್‌ಗಳಲ್ಲಿ 109 ರನ್‌ಗಳಿಗೆ ಕಟ್ಟಿ ಹಾಕಿದರು. ಒಮನ್ ಪರ ಮೆಹ್ರನ್ ಖಾನ್ 3 ವಿಕೆಟ್ ಕಿತ್ತು ಮಿಂಚಿದರೇ ಬಿಲಾಲ್ ಖಾನ್, ಆಕ್ವಿಬ್ ಇಲ್ಯಾಸ್ ಹಾಗೂ ಆಯನ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು. ನಮೀಬಿಯಾ ಪರ ನಿಕೋಲಸ್ ಡಾವಿನ್ 24, ಜಾನ್ ಫ್ರೈಲಿಕ್ 45 ಹಾಗೂ ಜೆರಾಲ್ಡ್ ಎರಾಸ್ಮಸ್ 13 ರನ್ ಗಳಿಸಿದ್ದು ಬಿಟ್ಟರೆ ಇನ್ನುಳಿದವರು ವಿಫಲರಾದರು.

ಸೂಪರ್ ಓವರ್‌ನಲ್ಲಿ ಗೆಲುವು: ಎರಡೂ ತಂಡಗಳ ಮೊತ್ತ 109 ರನ್ ಆಗಿದ್ದರಿಂದ ಪಂದ್ಯದ ಫಲಿತಾಂಶಕ್ಕಾಗಿ ಸೂಪರ್ ಓವರ್ ಮೊರೆ ಹೋಗಬೇಕಾಯಿತು. ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ನಮೀಬಿಯಾ 6 ಎಸೆತಗಳಲ್ಲಿ ವಿಕೆಟ್ ನಷ್ಟವಿಲ್ಲದೆ 21 ರನ್ ಕಲೆ ಹಾಕಿತು. ಬಳಿಕಗುರಿ ಹಿಂಬಾಲಿಸಿದ ಒಮನ್ 1 ವಿಕೆಟ್ ನಷ್ಟಕ್ಕೆ 10 ರನ್‌ಗೆ ಸೀಮಿತವಾಯಿತು. ಸೂಪರ್ ಓವರ್‌ನಲ್ಲಿ ಆಲ್‌ರೌಂಡರ್ ಪ್ರದರ್ಶನ ತೋರಿದ ಡೇವಿಡ್ ವೀಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಶ್ರೀಲಂಕಾ ವಿರುದ್ಧ ಹರಿಣಗಳಿಗೆ ಭರ್ಜರಿ ಜಯ

ನ್ಯೂಯಾರ್ಕ್, ಜೂ.3– ಅನ್ರಿಚ್ ನಾರ್ಟ್ಜೆ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಶ್ರೀಲಂಕಾ ವಿರುದ್ಧ ದಕ್ಷಿಣ ಆಫ್ರಿಕಾ 6 ವಿಕೆಟ್‌ಗಳ ಜಯ ಸಾಧಿಸಿದೆ.



ಇಲ್ಲಿನ ನಾಸೌ ಕೌಂಟಿ ಸ್ಟೇಡಿಯಂನಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 19.1 ಓವರ್‌ಗಳಲ್ಲಿ ಕೇವಲ 77 ರನ್‌ಗಳಿಗೆ ಆಲೌಟ್ ಆಯಿತು. ಶ್ರೀಲಂಕಾ ತಂಡ ಆರಂಭದಿಂದಲೂ ವಿಕೆಟ್ ಕಳೆದುಕೊಳ್ಳುತ್ತಲೇ ಸಾಗಿತು. ಕುಸಾಲ್ ಮೆಂಡಿಸ್ 30 ಎಸೆತಗಳಲ್ಲಿ 19, ಮ್ಯಾಥ್ಯೂಸ್ 16 ಎಸೆತಗಳಲ್ಲಿ 16, ಕುಮಿಂಡು ಮೆಂಡಿಸ್ 11 ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಒಂದಂಕಿ ರನ್‌ಗೆ ಸುಸ್ತಾಗಿ ಪೆವಿಲಿಯನ್ ಪರೇಡ್ ನಡೆಸಿದರು. ನಾಯಕ ವನಿಂದು ಹಸರಂಗ, ಸದೀರಾ ಸಮರವಿಕ್ರಮ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರೆ, ಪಾತುಮ್ ನಿಸ್ಸಾಂಕ 3, ಚರಿತ್ ಅಸಲಂಕಾ 6, ದಾಸುನ್ ಶನಾಕ 9, ತೀಕ್ಷಣ 7 ರನ್ ಗಳಿಸಿದರು. ದಕ್ಷಿಣ ಅಫ್ರಿಕಾ ಪರ ಅನ್ರಿಚ್ ನಾರ್ಟ್ಜೆ 4, ಕೇಶವ್ ಮಹಾರಾಜ್, ಕಗಿಸೋ ರಬಾಡ ತಲಾ 2 ಬಾರ್ಟ್ಮನ್ 1 ವಿಕೆಟ್ ಪಡೆದರು.

ಶ್ರೀಲಂಕಾ ನೀಡಿದ 78 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 16.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 80 ರನ್‌ಗಳಿಸಿ ಜಯ ಗಳಿಸಿತು. ದಕ್ಷಿಣ ಆಫ್ರಿಕಾ ತಂಡದ ಪರ ಕ್ವಿಂಟನ್ ಡಿಕಾಕ್ 27 ಎಸೆತಗಳಲ್ಲಿ 20, ಐಡೆನ್ ಮಾರ್ಕ್ರಾಮ್ 14 ಎಸೆತಗಳಲ್ಲಿ 12, ಟ್ರಿಸ್ಟಾನ್ ಸ್ಟಬ್ಸ್ 28 ಎಸೆತಗಳಲ್ಲಿ 13, ಹೆನ್ರಿಕ್ ಕ್ಲಾಸೆನ್ 22 ಎಸೆತಗಳಲ್ಲಿ 19 ರನ್ ಗಳಿಸಿದರು. ಶ್ರೀಲಂಕಾ ಪರ ನುವಾನ್ ತುಷಾರಾ, ದಾಸುನ್ ಶನಕ ತಲಾ 1, ವನಿಂದು ಹಸರಂಗ 2 ವಿಕೆಟ್ ಉರುಳಿಸಿದರು.

ಪಂದ್ಯದಲ್ಲಿ ಕೇವಲ 77 ರನ್‌ಗೆ ಆಲೌಟ್ ಆಗುವ ಮೂಲಕ ಶ್ರೀಲಂಕಾ ಟಿ20 ವಿಶ್ವಕಪ್ ಇತಿಹಾಸದಲ್ಲಿ ಕನಿಷ್ಠ ಮೊತ್ತ ದಾಖಲಿಸಿತು. 2012ರ ಚಾಂಪಿಯನ್ ಆಗಿರುವ ಶ್ರೀಲಂಕಾ 2010ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಕೇವಲ 87ಕ್ಕೆ ಆಲೌಟ್ ಆಗಿದ್ದು, ಈವರೆಗಿನ ಕನಿಷ್ಠ ಮೊತ್ತವಾಗಿತ್ತು. ಅನ್ರಿಚ್ ನಾರ್ಟ್ಜೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು ಮಿತ್ರ

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಚುನಾವಣೆ

ತಿ.ನರಸೀಪುರದಲ್ಲಿ ಶೇ.90.01ರಷ್ಟು ಮತದಾನ

297 ಪುರುಷರು, 145 ಮಹಿಳೆಯರು ಸೇರಿದಂತೆ 442 ಮಂದಿ ಮತದಾನ




ತಿ.ನರಸೀಪುರದಲ್ಲಿ ಮರಿತಿಬ್ಬೇಗೌಡರ ಪರ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಹಾಗೂ ಕೆ.ವಿವೇಕಾನಂದ ಪರ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಹಾಗೂ ಇತರರು ಮತಯಾಚಿಸಿದರು.

ತಿ.ನರಸೀಪುರ, ಜೂ.3– ಲೋಕಸಭಾ ಚುನಾವಣೆ ಬೆನ್ನಲ್ಲೇ ವಿಧಾನ ಪರಿಷತ್ ಸ್ಥಾನಕ್ಕೆ ಸೋಮವಾರ ನಡೆದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ತಾಲೂಕಿನಲ್ಲಿ ಶೇ.90.01ರಷ್ಟು ಮತದಾನವಾಗಿದೆ.

ಬೆಳಗ್ಗೆ 8 ಗಂಟೆಗೆ ಮತದಾನ ಆರಂಭವಾಯಿತು. ತಾಲೂಕು ಆಡಳಿತ ಸೌಧದ ತಾಲೂಕು ಕಚೇರಿಯಲ್ಲಿ ಸ್ಥಾಪಿಸಿದ ಮತಗಟ್ಟೆಗೆ ಶಿಕ್ಷಕರು, ಪದವೀಧರ ಮತದಾರರು ಉತ್ಸುಕತೆಯಿಂದ ಆಗಮಿಸಿ ಮತ ಚಲಾಯಿಸಿದರು. ಆರಂಭದಲ್ಲಿ ಶಿಕ್ಷಕ ಮತದಾರರ ಸಂಖ್ಯೆ ವಿರಳವಾಗಿತ್ತು. ಹೊತ್ತು ಕಳೆದಂತೆ ಮತದಾರರ ಸಂಖ್ಯೆ ಹೆಚ್ಚಾಗಿ ಬಿರುಸಿನಿಂದ ಸಾಗಿತು. ಮಧ್ಯಾಹ್ನ ವೇಳೆಗೆ ಸುಮಾರು 250 ಶಿಕ್ಷಕ ಮತದಾರರು ಮತ ಚಲಾಯಿಸಿದ್ದು ವಿಶೇಷವಾಗಿತ್ತು. ಅಂತಿಮವಾಗಿ ತಾಲೂಕಿನ ಒಟ್ಟು 490 ಮತಗಳ ಪೈಕಿ 297 ಪುರುಷರು, 145 ಮಹಿಳೆಯರು ಸೇರಿದಂತೆ 442 ಮಂದಿ ಮತ ಚಲಾಯಿಸಿದ್ದು, ಶೇ.90.01ರಷ್ಟು ಮತದಾನವಾಗಿದೆ.

ಮತಗಟ್ಟೆ ಹೊರ ಭಾಗದಲ್ಲಿ ತಮ್ಮ ಬೆಂಬಲಿತ ಅಭ್ಯರ್ಥಿಗಳ ಪರ ವಿವಿಧ ಪಕ್ಷಗಳ ಮುಖಂಡರು, ಕಾರ್ಯಕರ್ತರು ಪ್ರಚಾರ ಕಾರ್ಯದಲ್ಲಿ ತೊಡಗಿದ್ದು ಕಂಡು ಬಂತು.

ಕಾಂಗ್ರೆಸ್‌ನ ಮರಿತಿಬ್ಬೇಗೌಡರ ಪರ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ, ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ ಸೇರಿದಂತೆ ಪ್ರಮುಖ ಕಾಂಗ್ರೆಸ್ ಮುಖಂಡರು ಮತಗಟ್ಟೆ ಸಮೀಪ ಮತದಾರರ ಮನವೊಲಿಸುವಲ್ಲಿ ನಿರತರಾದರೇ, ಮತ್ತೊಂದೆಡೆ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಶಿಕ್ಷಕರ ಮನವೊಲಿಕೆಯಲ್ಲಿ ತೊಡಗಿದ್ದು ಕಂಡು ಬಂತು.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಶಿಕ್ಷಕರ ಮತಯಾಚಿಸಿ ಪತ್ರಕರ್ತರೊಂದಿಗೆ ಮಾತನಾಡಿದ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಪಕ್ಷದ ಅಭ್ಯರ್ಥಿ ಗೆಲುವಿನ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ಮರಿತಿಬ್ಬೇಗೌಡರು 5ನೇ ಬಾರಿಗೆ ಆಯ್ಕೆ ಬಯಸಿದ್ದಾರೆ. ಮೈಸೂರು, ಮಂಡ್ಯ, ಹಾಸನ ಸೇರಿದಂತೆ ಶಿಕ್ಷಕರ ಕುಂದು ಕೊರತೆ, ಸಮಸ್ಯೆಗಳ ಪರವಾಗಿ ನಿಂತು ಕಳೆದ 20 ವರ್ಷಗಳಿಂದ ಹೋರಾಟ ಮಾಡುವ ಮೂಲಕ ಶಿಕ್ಷಕರಿಗೆ ಸಲ್ಲಬೇಕಾದ ನ್ಯಾಯ ದೊರಕಿಸಿಕೊಡಲು ಅವರು ಶ್ರಮ ವಹಿಸಿದ್ದಾರೆ. ಹೋರಾಟದ ಮೂಲಕ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸುವ ತಿಬ್ಬೇಗೌಡರು ಈ ಬಾರಿ ಅಧಿಕ ಮತಗಳ ಅಂತರದಿಂದ ಜಯ ಗಳಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚಿಸಿ ಮಾತನಾಡಿದ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಈ ಬಾರಿ ಮೈತ್ರಿ ಅಭ್ಯರ್ಥಿ ಗೆಲುವು ಖಚಿತ. ಶಿಕ್ಷಕರು ಬದಲಾವಣೆ ಬಯಸಿದ್ದು, ಸರಳ ಸಜ್ಜನಿಕೆಯ ವ್ಯಕ್ತಿತ್ವದ ಸದಾ ಕಾಲ ಶಿಕ್ಷಕರ ಸಮಸ್ಯೆಗಳ ಈಡೇರಿಕೆಯ ತುಡಿತ ಹೊಂದಿರುವ ವಿವೇಕಾನಂದರನ್ನು ಶಿಕ್ಷಕರು ಬೆಂಬಲಿಸಿ ಅವರಿಗೆ ಜಯ ತಂದು ಕೊಡಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಜಿಲ್ಲಾ ಪದವೀಧರ ಘಟಕದ ಜಿಲ್ಲಾಧ್ಯಕ್ಷ ಎಂ.ರಮೇಶ್, ಕಾಂಗ್ರೆಸ್ ಯುವ ಮುಖಂಡ ಲಕ್ಷ್ಮಿ ನಾರಾಯಣ, ವರುಣ ಕ್ಷೇತ್ರದ ಪದವೀಧರ ಘಟಕದ ಅಧ್ಯಕ್ಷ ಬಿ.ಉಮೇಶ್, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಎಸ್ಸಿ ಎಸ್ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಕೆ.ಮಲ್ಲು, ಮಹಿಳಾ ಘಟಕದ ಲತಾ ಜಗದೀಶ್, ಪ್ರೊ.ಜ್ಞಾನ ಪ್ರಕಾಶ್, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಬಣ್ಣ ಬಸವರಾಜು, ಸೋಸಲೆ ಮಹದೇವಸ್ವಾಮಿ, ಪರಶಿವಮೂರ್ತಿ, ನಿಂಗಯ್ಯ, ನಿವೃತ್ತ ಶಿಕ್ಷಕ ಪುಟ್ಟಬುದ್ಧಿ, ಮುದ್ದ ವೀರನಹುಂಡಿ ಗುರುಸ್ವಾಮಿ, ತೇಜು, ಕೆಬ್ಬೆ ರಂಗಪ್ಪ, ಜೆಡಿಎಸ್ ಕ್ಷೇತ್ರ ಅಧ್ಯಕ್ಷ ಚಿನ್ನಸ್ವಾಮಿ, ಬಿಜೆಪಿ ಕ್ಷೇತ್ರ ಅಧ್ಯಕ್ಷ ಶಿವಕುಮಾರ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಪುರಸಭಾ ಮಾಜಿ ಸದಸ್ಯ ಎನ್.ಲೋಕೇಶ್ ಮತ್ತಿತರಿದ್ದರು.

ಹುಣಸೂರಲ್ಲಿ ಶೇ.87.5ರಷ್ಟು ಮತದಾನ



ಹುಣಸೂರಿನಲ್ಲಿ ಮರಿತಿಬ್ಬೇಗೌಡರ ಪರ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಬಿಜೆಪಿ, ಜೆಡಿಎಸ್ ಮುಖಂಡರು ಮತಯಾಚಿಸಿದರು.



ಹುಣಸೂರು, ಜೂ.3– ಸೋಮವಾರ ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ತಾಲೂಕಿನಲ್ಲಿ ಶೇ.87.5ರಷ್ಟು ಮತದಾನವಾಗಿದೆ ಎಂದು ಚುನಾವಣಾಧಿಕಾರಿ, ಶಿರಸ್ತೇ ದಾರ್ ಕಿರಣ್ ಕುಮಾರ್ ತಿಳಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ಸ್ಥಾಪಿಸಲಾಗಿದ್ದ ಮತಗಟ್ಟೆಯಲ್ಲಿ ಬೆಳಗ್ಗೆಯಿಂದ ಸಂಜೆವರೆಗೂ ಮತದಾನ ನಡೆಯಿತು. ಈ ವೇಳೆ 295 ಪುರುಷರು, 152 ಮಂದಿ ಮಹಿಳೆಯರು ಸೇರಿದಂತೆ 448 ಶಿಕ್ಷಕ ಮತದಾರರ ಪೈಕಿ 125 ಶಿಕ್ಷಕಿಯರು, 267 ಮಂದಿ ಶಿಕ್ಷಕರು ಸೇರಿದಂತೆ ಒಟ್ಟು 392 ಮಂದಿ(ಶೇ.85%) ಮತದಾನ ಮಾಡಿದ್ದಾರೆ ಎಂದು ತಿಳಿಸಿದರು.

ಮತಗಟ್ಟೆಯಲ್ಲಿ ಶಿಕ್ಷಕ ಮತದಾರರು ಮತದಾನ ಮಾಡುತ್ತಿದ್ದರೆ ಮತಗಟ್ಟೆ ಹೊರಗೆ ಕಾಂಗ್ರೆಸ್ ಮುಖಂಡರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನೇತೃತ್ವದಲ್ಲಿ ಮರಿತಿಬ್ಬೇಗೌಡರ ಪರ ಮತಯಾಚಿಸಿದರೆ, ಮತ್ತೊಂದೆಡೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚನೆ ಮಾಡಿದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಕಳೆದ ನಾಲ್ಕು ಅವಧಿಯಲ್ಲೂ ಮರಿತಿಬ್ಬೇಗೌಡರು ವಿಧಾನ ಪರಿಷತ್ ಸದಸ್ಯರಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಸದಾ ಶಿಕ್ಷಕರ ಬಗ್ಗೆ ಚಿಂತಿಸುವ ಅವರು ಈ ಬಾರಿ ಚುನಾವಣೆಯಲ್ಲಿ ಜಯಗಳಿಸಿದರೇ ಭವಿಷ್ಯದಲ್ಲಿ ಶಿಕ್ಷಕರಿಗೆ ಉತ್ತಮ ಯೋಜನೆ ಜಾರಿಗೊಳಿಸಲು ಸಹಕಾರಿಯಾಗಲಿದೆ. ಇದನ್ನು ಅರಿತು ಶಿಕ್ಷಕ ಬಾಂಧವರು ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡುವಂತೆ ಮನವಿ ಮಾಡಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪದಾಧಿಕಾರಿಗಳು, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸ್ನೇಹಜೀವಿ ಅಭಿಮಾನಿಗಳು ಪಾಲ್ಗೊಂಡಿದ್ದರು.

ಮತ್ತೊಂದೆಡೆ ಬಿಜೆಪಿ, ಜೆಡಿಎಸ್ ಮುಖಂಡರಾದ ಜಿಪಂ ಮಾಜಿ ಸದಸ್ಯರಾದ ನಾಗರಾಜ್ ಮಲ್ಲಾಡಿ, ಸುರೇಂದ್ರ, ರಮೇಶ್ ಕುಮಾರ್, ಮಂಜುನಾಥ್, ಸತೀಶ್ ಪಾಪಣ್ಣ, ತಾಪಂ ಮಾಜಿ ಉಪಾಧ್ಯಕ್ಷ ಪ್ರೇಮೇಗೌಡ, ಗೋವಿಂದೇಗೌಡ, ಗಣೇಶ್ ಕುಮಾರಸ್ವಾಮಿ, ಸತೀಶ್, ಕಾಂತರಾಜು ಸೇರಿದಂತೆ ಇನ್ನಿತರರಿದ್ದರು.

ನಂಜನಗೂಡಲ್ಲಿ 666 ಮಂದಿ ಹಕ್ಕು ಚಲಾವಣೆ



ಹಕ್ಕು ಚಲಾಯಿಸಲು ಸರತಿ ಸಾಲಿನಲ್ಲಿ ನಿಂತಿರುವ ಶಿಕ್ಷಕರು.

ನಂಜನಗೂಡು, ಜೂ.3– ರಾಜ್ಯ ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ನಂಜನಗೂಡಿನಲ್ಲಿ ಶೇ.88.8 ಮತ ಚಲಾವಣೆಯಾಗಿದೆ.

ನಗರದ ತಾಲೂಕು ಆಡಳಿತ ಭವನದ ಆವರಣದಲ್ಲಿ ಸೋಮವಾರ ಬೆಳಗ್ಗೆಯಿಂದ ಸಂಜೆವರೆಗೂ ನಡೆದ ಮತದಾನ ಪ್ರಕ್ರಿಯೆಯಲ್ಲಿ ಒಟ್ಟು 666 ಮಂದಿ ತಮ್ಮ ಹಕ್ಕು ಚಲಾಯಿಸಿದರು. ತಾಲೂಕಿನಲ್ಲಿ 479 ಪುರುಷ ಹಾಗೂ 271 ಮಹಿಳಾ ಮತದಾರರು ಸೇರಿದಂತೆ ಒಟ್ಟು 750 ಮತದಾರರಿದ್ದು, ಈ ಪೈಕಿ 433 ಮಂದಿ ಪುರುಷರು ಹಾಗೂ 233 ಮಹಿಳೆಯರು ಸೇರಿ ದಂತೆ ಒಟ್ಟು 666 ಮಂದಿ ಮತ ಚಲಾಯಿಸಿದರು. ಇನ್ನು ಮತದಾನ ಕೇಂದ್ರದ ಹೊರಗೆ ರಾಜಕೀಯ ಪಕ್ಷಗಳು ಹಾಗೂ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪರ ಬೆಂಬಲಿಗರು ಮತಯಾಚನೆ ಮಾಡುವ ಮೂಲಕ ಮತದಾರರ ಮನವೊಲಿಸಲು ಕೊನೆ ಕ್ಷಣದ ಪ್ರಯತ್ನ ನಡೆಸಿದರು.

ತಾಯಿ, ಮಗು ನಾಪತ್ತೆ



ಮಲ್ಕುಂಡಿ, ಜೂ.3– ತಾಯಿ, ಮಗು ನಾಪತ್ತೆಯಾಗಿರುವ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಹಾಡ್ಯ ಗ್ರಾಮದ ಶಿಲ್ಪ(28), ಧೃತಿ(1) ನಾಪತ್ತೆಯಾದವರು. ಶಿಲ್ಪ ಮೇ 28 ರಂದು ತನ್ನ 1 ವರ್ಷದ ಮಗುವಿನೊಂದಿಗೆ ಮನೆಯಿಂದ ಹೊರ ಹೋದವರು ವಾಪಸ್ಸಾಗಿಲ್ಲ ಎಂದು ಈಕೆಯ ಪತಿ ಹುಲ್ಲಹಳ್ಳಿ ಠಾಣೆಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ 9480805066 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಹೆಚ್.ಡಿ.ಕೋಟೆಯಲ್ಲಿ ಶೇ.90.28ರಷ್ಟು ಮತದಾನ




ಮರಿತಿಬ್ಬೇಗೌಡರ ಪರ ಶಾಸಕ ಅನಿಲ್, ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ ಮುಖಂಡರೊಂದಿಗೆ ಮತಯಾಚಿಸಿದರು.

ಹೆಚ್.ಡಿ.ಕೋಟೆ, ಜೂ.3– ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಹೆಚ್.ಡಿ.ಕೋಟೆಯಲ್ಲಿ ಶೇ.90.28ರಷ್ಟು ಮತದಾನವಾಗಿದೆ.

ಪಟ್ಟಣದ ಮಿನಿವಿಧಾನಸೌಧದಲ್ಲಿ ಬೆಳಗ್ಗೆ 8 ರಿಂದ ಸಂಜೆ 4 ಗಂಟೆವರೆಗೆ ನಡೆದ ಚುನಾವಣೆಯಲ್ಲಿ ಒಟ್ಟು 288 ಮತದಾರರ ಪೈಕಿ 189 ಪುರುಷರು, 71 ಮಂದಿ ಮಹಿಳೆಯರು ಸೇರಿದಂತೆ 260 ಮಂದಿ ಚಲಾಯಿಸಿದರು. ಮತಗಟ್ಟೆ ಸಮೀಪ ಮರಿತಿಬ್ಬೇಗೌಡರ ಪರ ಶಾಸಕ ಅನಿಲ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಬಿಜೆಪಿ, ಜೆಡಿಎಸ್ ಮುಖಂಡರು ಮತದಾನಕ್ಕೆ ಆಗಮಿಸುತ್ತಿದ್ದ ಶಿಕ್ಷಕರಲ್ಲಿ ಮತಯಾಚಿಸುತ್ತಿದ್ದ ದೃಶ್ಯ ಕಂಡು ಬಂತು.

ಶಾಸಕ ಅನಿಲ್ ಮಾತನಾಡಿ, ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮರಿತಿಬ್ಬೇಗೌಡರು ಈಗಾಗಲೇ 4 ಬಾರಿ ವಿಧಾನ ಪರಿಷತ್‌ಗೆ ಆಯ್ಕೆ ಆಗಿ ಸದನದಲ್ಲಿ ಶಿಕ್ಷಕರ ಪರ ಕೆಲಸ ಮಾಡಿದ್ದಾರೆ. ಇದೀಗ 5ನೇ ಬಾರಿ ಕಾಂಗ್ರೆಸ್ ಪಕ್ಷದಿಂದ ಮತ್ತೆ ಸ್ಪರ್ಧೆ ಮಾಡಿದ್ದು ಅಧಿಕ ಮತಗಳ ಅಂತರದಿಂದ ಗೆಲ್ಲಲಿದ್ದಾರೆ ಎಂದರು.

ಮರಿತಿಬ್ಬೇಗೌಡರ ಪರ ಪಕ್ಷದ ಅಧ್ಯಕ್ಷರು, ಮುಖಂಡರು, ಕಾರ್ಯಕರ್ತರು ಪ್ರಚಾರ ನಡೆಸಿದ್ದಾರೆ. ನಮ್ಮ ತಾಲೂಕಿನಿಂದ ಅವರಿಗೆ ಹೆಚ್ಚು ಮತಗಳನ್ನು ಕೊಡಿಸಿ ಅವರ ಗೆಲುವಿಗೆ ಶ್ರಮಿಸುತ್ತಿದ್ದೇವೆ. ತಾಲೂಕಿನ ಶಿಕ್ಷಕ ಮತದಾರರು ಪಕ್ಷದ ಅಭ್ಯರ್ಥಿ ಪರ ಒಲವು ತೋರುತ್ತಿರುವುದು ಕಂಡು ಬಂದಿದೆ ಎಂದರು.

ಮೈತ್ರಿ ಅಭ್ಯರ್ಥಿ ವಿವೇಕನಂದ ಪರ ಮತಯಾಚಿಸಿ ಮಾತನಾಡಿದ ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ, ಬಿಜೆಪಿ ಜೆಡಿಎಸ್ ಮೈತ್ರಿ ಆಗಿರುವ ಹಿನ್ನೆಲೆಯಲ್ಲಿ ವಿಧಾನಪರಿಷತ್ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ವಿವೇಕಾನಂದ ಅವರು ಭಾರಿ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಇದೇ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷಾ, ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ನಂಜನಗೂಡ ಕೆಪಿಸಿಸಿ ಉಸ್ತುವಾರಿ ಸೋಮೇಶ್, ಜೈ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಮೈಮುಲ್ ನಿರ್ದೇಶಕ ಈರೇಗೌಡ, ಕುರುಬ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಪ್ಪ ಕೋಟೆ, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜ್, ಮುಖಂಡರಾದ ವೀರೇಗೌಡ, ರಾಜನಾಯಕ, ಪ್ರಕಾಶ್, ಬಿಜೆಪಿ ಅಧ್ಯಕ್ಷ ಶಂಬೇಗೌಡ, ಎಂ.ಕೆ.ದೊಡ್ಡನಾಯಕ, ಸೋಮಾಚಾರಿ, ಬಿಡುಗಲು ರಾಜು, ಗುರುಸ್ವಾಮಿ, ನಂದೀಶ್, ನಾಗನಾಯ್ಕ, ಗೋಪಾಲ್ ಶೆಟ್ಟಿ, ಮಹೇಂದ್ರ, ರುದ್ರಪ್ಪ, ಸೋಮೇಶ್, ನಾಗರಾಜ್ ಇನ್ನಿತರಿದ್ದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ

ಪ್ರಕೃತಿಯೊಂದಿಗೆ ಸೆಲ್ಫಿ ಪ್ರತಿಜ್ಞಾ ಅಭಿಯಾನ

ಮೈಸೂರು, ಜೂ.3– ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಮೈಸೂರು ಮೃಗಾಲಯವು ಇವೆಂಟ್ ಆಫ್ ಮತ್ತು ಯಂಗ್ ಇಂಡಿಯನ್ಸ್ ಮೈಸೂರ್ ಚಾಪ್ಟರ್ ಇವರುಗಳ ಸಹಯೋಗದಲ್ಲಿ 'ಪ್ರಕೃತಿಯೊಂದಿಗೆ ಸೆಲ್ಫಿ ಪ್ರತಿಜ್ಞಾ ಅಭಿಯಾನ' ಕಾರ್ಯಕ್ರಮವನ್ನು ಜೂ.2 ರಿಂದ 7 ರವರೆಗೆ ಆಯೋಜಿಸಲಾಗಿದೆ.

ಆಸಕ್ತ ಸಾರ್ವಜನಿಕರು Https://mysorezoo.digifiles.in/pledge ಲಿಂಕ್ ಮೂಲಕ ಅಭಿಯಾನದಲ್ಲಿ ಭಾಗವಹಿಸಬಹುದಾಗಿದ್ದು, ವೈಯಕ್ತಿಕವಾಗಿ ದೃಢೀಕರಣ ಪತ್ರವನ್ನು ಸಲ್ಲಿಸಬಹುದಾಗಿದೆ ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ನಗರದಲ್ಲಿ 430 ಮಂದಿ ಮತದಾನ



ಪ್ರಚಾರದಲ್ಲಿ ತೊಡಗಿರುವ ಜೆಡಿಎಸ್, ಬಿಜೆಪಿ ಮುಖಂಡರು.

ಕೆ.ಆರ್.ನಗರ, ಜೂ.3– ಭಾರೀ ಕುತೂಹಲ ಮೂಡಿಸಿದ್ದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, ಕೆ.ಆರ್.ನಗರದಲ್ಲಿ ಒಟ್ಟು 430 ಮಂದಿ ಮತದಾನ ಮಾಡಿದ್ದಾರೆ.

ಪಟ್ಟಣದ ಮಿನಿ ಆಡಳಿತಸೌಧದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಚುನಾವಣಾಧಿಕಾರಿಗಳು ಮತ್ತು ಪೊಲೀಸ್ ಇಲಾಖೆ ಸೂಕ್ತ ಭದ್ರತೆ ಒದಗಿಸಿದ್ದರು. ಬೆಳಗ್ಗೆ ನಿಧಾನಗತಿಯಲ್ಲಿ ಆರಂಭವಾದ ಮತದಾನ ನಂತರ ಬಿರುಸು ಪಡೆಯಿತಾದರೂ ಈ ವೇಳೆ ಬಂದ ಮಳೆ ಮತದಾನಕ್ಕೆ ಅಡ್ಡಿಯುಂಟು ಮಾಡಿತು. ಈ ಸಂದರ್ಭ ಎಲ್ಲಾ ಪಕ್ಷಗಳ ಮುಖಂಡರು ಮತದಾರರನ್ನು ಕಾರು, ಆಟೋಗಳಲ್ಲಿ ಕರೆ ತಂದು ಮತದಾನಕ್ಕೆ ನೆರವಾದರು. ಅಂತಿಮವಾಗಿ 471 ಮತದಾರರ ಪೈಕಿ 430 ಮಂದಿ ಮತ ಚಲಾಯಿಸಿದರು. 41 ಮಂದಿ ಮತದಾನದಿಂದ ಹೊರಗುಳಿದರು. ಮತಗಟ್ಟೆ ಸಮೀಪ ಕಾಂಗ್ರೆಸ್ ಹಾಗೂ ಬಿಜೆಪಿ, ಜೆಡಿಎಸ್ ಮುಖಂಡರು ತಮ್ಮ ಅಭ್ಯರ್ಥಿಗೆ ಮತ ಹಾಕುವಂತೆ ಮತದಾರರ ಮನವೊಲಿಸುತ್ತಿದ್ದ ದೃಶ್ಯ ಕಂಡು ಬಂತು.

ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಮಾತನಾಡಿ, ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರು ಪ್ರಥಮ ಪ್ರಶಸ್ತ್ಯದ ಮತಗಳಿಂದ ಆಯ್ಕೆಯಾಗುವುದು ಖಚಿತ ಎಂದರು.

ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ಪುರಸಭಾ ಸದಸ್ಯರಾದ ಕೆ.ಎಲ್.ಜಗದೀಶ್, ಸಂತೋಷ್‌ಗೌಡ, ಉಮೇಶ, ಕೆ.ಪಿ.ಪ್ರಭುಶಂಕರ್, ಜೆಡಿಎಸ್ ಅಧ್ಯಕ್ಷ ಕುಮಾರ್, ವಕ್ತಾರ ಕೆ.ಎಲ್.ರಮೇಶ್, ಜೆಡಿಎಸ್ ರಾಜ್ಯ ಕಾರ್ಯದರ್ಶಿ ಚಂದ್ರಶೇಖರ್, ಮುಖಂಡರಾದ ಪುಟ್ಟರಾಜು, ಉಮಾಶಂಕರ್, ಪುರಸಭಾ ಮಾಜಿ ಅಧ್ಯಕ್ಷ ಕಾಂತರಾಜ್, ಭಾಗ್ಯಲಕ್ಷ್ಮಿ, ಕೃಷ್ಣಶೆಟ್ಟಿ, ಮಧುಚಂದ್ರ, ಅನಿಲ್, ಧರ್ಮ, ಅರವಿಂದ, ಡೆಲ್ಲಿ ಮಂಜು, ಹರೀಶ, ರಾಘು, ಸುರೇಶ ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂ ಗಂ ಗಣೇಶ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗ್ಯಾಂಗ್ಸ್ ಆಫ್ ಗೋಧಾವರಿ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅರನ್‌ಮನೆ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಹಿಟ್‌ಲಿಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನೈಟ್ ಕರ್ಫ್ಯೂ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಥಾಲವನ್ (ಮ): ಬೆ.11.15ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.2ಕ್ಕೆ, ಹಿಟ್ ಲಿಸ್ಟ್ (ತ): ಸಂ.4.15ಕ್ಕೆ, ಗ್ಯಾಂಗ್ಸ್ ಆಫ್ ಗೋಧಾವರಿ (ತೆ): ರಾ.7ಕ್ಕೆ, ಗಂ ಗಂ ಗಣೇಶ (ತೆ): ರಾ.9.55ಕ್ಕೆ.
ಸ್ಕ್ರೀನ್ 2	ಗರುಡನ್ (ತ): ಬೆ.11ಕ್ಕೆ, ಮ.1.45ಕ್ಕೆ, ಭಜೆ ವಾಯು ವೇಗಂ (ತೆ): ಸಂ.4.35ಕ್ಕೆ, ಮಂದಾಕಿನಿ (ಮ): ರಾ.7.20ಕ್ಕೆ, ಅರನ್‌ಮನೈ 4 (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಛೋಟಾ ಭೀಮ್ ಅಂಡ್ ದಿ ಕರ್ಸ್ (ಹಿಂ): ಬೆ.10.35ಕ್ಕೆ, ಸಂ.4.25ಕ್ಕೆ, ಟರ್ಬೋ (ಮ): ಮ.1.25ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.7.05ಕ್ಕೆ, ಒನ್ಸ್ ಅಪೋನ್ ಎ ಟೈಂ ಇನ್ ಕೊಚ್ಚಿ (ಮ): ರಾ.10ಕ್ಕೆ.
ಸ್ಕ್ರೀನ್ 4	ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಧಾರಾಕಾರ ಮಳೆ: ಕೋಟ್ಯಾಂತರ ರೂ. ನಷ್ಟ



ಗಾವಡಗೆರೆ ಹೋಬಳಿಯ ಹಿರಿಕ್ಯಾತನಹಳ್ಳಿ ಗ್ರಾಮದಲ್ಲಿ ಭಾರಿ ಮಳೆಗೆ ತಂಬಾಕು ಬೆಳೆಗಳು ಜಲಾವೃತಗೊಂಡಿರುವುದು.

ಹಿರೀಕ್ಯಾತನಹಳ್ಳಿ, ಜೂ.3– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹಿರೀಕ್ಯಾತನಹಳ್ಳಿ, ಹರವೆ, ರಾಮೇನಹಳ್ಳಿ, ಮರೂರು, ಜಾಬಗೆರೆ, ಕಳ್ಳಿಕೊಪ್ಪಲು, ಗಾವಡಗೆರೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಸೋಮವಾರ ಮಧ್ಯಾಹ್ನ ಸುರಿದ ಭಾರಿ ಮಳೆಗೆ ಸಾವಿರಾರು ಎಕರೆ ಬೆಳೆ ನಾಶವಾಗಿ ಕೋಟ್ಯಾಂತರ ರೂ. ನಷ್ಟ ಸಂಭವಿಸಿದೆ.

ಸೋಮವಾರ ಮಧ್ಯಾಹ್ನ 1 ರಿಂದ ಸಂಜೆ 4 ಗಂಟೆವರೆಗೆ ಸುರಿದ ಭಾರಿ ಮಳೆಗೆ ತಂಬಾಕು ಗಿಡಗಳು ಜಲಾವೃತಗೊಂಡಿದೆ. ಅಲ್ಲದೇ ಹಳ್ಳಕೊಳ್ಳದ ಜಮೀನಿನ ತಂಬಾಕು ಸಸಿಗಳನ್ನು ನೀರು ಹೊತ್ತೊಯ್ದಿದೆ. ಅಲ್ಲದೇ ತರಕಾರಿ ಬೆಳೆಗಳು ಕೂಡ ನಾಶವಾಗಿದೆ.

ಮನೆ ಕುಸಿತ: ಸೋಮವಾರ ಸುರಿದ ಧಾರಾಕಾರ ಮಳೆಗೆ ಮರೂರು ಗ್ರಾಮದ ಮಂಜುಳ ಎಂಬುವರಿಗೆ ಸೇರಿದ ಮನೆ ಕುಸಿದಿದ್ದು, ಪ್ರಾಣಾಪಾಯದಿಂದ ಮನೆ ಮಂದಿ ಪಾರಾಗಿದ್ದಾರೆ.

ಭಾರಿ ಮಳೆಗೆ ಶುಂಠಿ ಬೆಳೆ ನಾಶವಾಗಿ ಅಪಾರ ನಷ್ಟ ಸಂಭವಿಸಿದೆ. ಅಲ್ಲದೇ ಹಿರೀಕ್ಯಾತನಹಳ್ಳಿ ಗ್ರಾಪಂ ವ್ಯಾಪ್ತಿಯ ಗರಕಕೆರೆ, ಕುಂತಿಕೆರೆ, ಕೆಬ್ಬೆಕೆರೆ ಸೇರಿದಂತೆ ಹಲವು ಗ್ರಾಮಗಳಲ್ಲಿ ಕೆರೆಗಳು ಕೋಡಿ ಬಿದ್ದಿವೆ.

ಕೃಷ್ಣಮೂರ್ತಿಪುರಂನ ವ್ಯಾಸತೀರ್ಥ ವಿದ್ಯಾಪೀಠದಲ್ಲಿ ವಿದ್ವತ್ ಸಭೆ

ಅಧ್ಯಯನ ಪ್ರವೃತ್ತಿ ಬದುಕಿನುದ್ದಕ್ಕೂ ನಿರಂತರವಾಗಿರಲಿ

ಸೋಸಲೆ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಆಶಯ



ಮೈಸೂರಿನ ನಗರದ ಕೃಷ್ಣಮೂರ್ತಿಪುರಂನ ವ್ಯಾಸತೀರ್ಥ ವಿದ್ಯಾಪೀಠದಲ್ಲಿ ಸೋಮವಾರ ಸೋಸಲೆ ಮಠ ಹಮ್ಮಿಕೊಂಡಿದ್ದ ಶ್ರೀಮನ್ ನ್ಯಾಯ ಸುಧಾ ಮಂಗಳ ಮಹೋತ್ಸವದ 2ನೇ ದಿನದ ಕಲಾಪದಲ್ಲಿ ಮಂತ್ರಾಲಯ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ, ಸೋಸಲೆ ಮಠದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ, ಬಾಳಗಾರು ಮಠದ ಶ್ರೀ ಅಕ್ಷೋಭ್ಯ ರಾಮಪ್ರಿಯ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಇಂದಿನ ಕಾರ್ಯಕ್ರಮ

ಕೃಷ್ಣಮೂರ್ತಿಪುರಂನ ವ್ಯಾಸತೀರ್ಥ ವಿದ್ಯಾಪೀಠದಲ್ಲಿ ಜೂನ್ 4 ರಂದು ದ್ವಾದಶಿ ಪ್ರಯುಕ್ತ ಬೆಳಗಿನ ಅವಧಿಯಲ್ಲಿ ವಿವಿಧ ಪೀಠಾಧೀಶರಿಂದ ಸಂಸ್ಥಾನ ಪೂಜೆ, ಮಧ್ಯಾಹ್ನದ ಅವಧಿಯಲ್ಲಿ ವಿವಿಧ ವಿದ್ವಾಂಸರಿಂದ ಉಪನ್ಯಾಸವಿದೆ. ಸಂಜೆ ಉತ್ತರಾದಿ ಮಠಾಧೀಶ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಅನುಗ್ರಹ ಸಂದೇಶ ನೀಡಲಿದ್ದಾರೆ.

ಮೈಸೂರು, ಜೂ.3– ಬದುಕಿನುದ್ದಕ್ಕೂ ವಿದ್ಯಾರ್ಥಿಯಾಗಿದ್ದು, ಭಾರತೀಯ ಪುರಾತನ ಶಾಸ್ತ್ರಜ್ಞಾನ ಪಡೆಯುವ ಹಸಿವು ಇದ್ದರೆ ಜೀವನ ಸಾರ್ಥಕವಾಗುತ್ತದೆ. ಅಧ್ಯಯನ ಪ್ರವೃತ್ತಿ ಇದ್ದರೆ ಬದುಕು ತೇಜೋಮಯವಾಗುತ್ತದೆ ಎಂದು ಸೋಸಲೆ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಹೇಳಿದರು.

ಕೃಷ್ಣಮೂರ್ತಿಪುರಂನ ಶ್ರೀ ವ್ಯಾಸತೀರ್ಥ ವಿದ್ಯಾಪೀಠದಲ್ಲಿ ಸೋಸಲೆ ಶ್ರೀ ವ್ಯಾಸರಾಜ ಮಠ ಹಮ್ಮಿಕೊಂಡಿರುವ ಶ್ರೀಮನ್ ನ್ಯಾಯ ಸುಧಾ ಮಂಗಳ ಮಹೋತ್ಸವದ 2ನೇ ದಿನದ ಕಲಾಪಕ್ಕೆ ಸೋಮವಾರ ಚಾಲನೆ ನೀಡಿ ಅವರು ಆಶೀರ್ವಚನ ನೀಡಿದರು.

ಜ್ಞಾನದ ಹಂಬಲ ಇದ್ದವನಿಗೆ ನಿರಂತರವಾಗಿ ಓದುವ ಪ್ರವೃತ್ತಿ ಬೇಕು. ಸಂಯಮ ಇರಬೇಕು. ಓದಿದ್ದನ್ನು ಚಿಂತನೆ ಮಾಡಬೇಕು. ಆಗ ಅದು ಜ್ಞಾನವಾಗಿ ನಮ್ಮಲ್ಲಿ ನೆಲೆಸಿ ಸಾರ್ಥಕತೆ ಪಡೆಯುತ್ತದೆ ಎಂದರು.

ನಾನು ಕಳೆದ ಒಂದು ದಶಕದಿಂದ ವಿದ್ಯಾರ್ಥಿಗಳಿಗೆ ಶಾಸ್ತ್ರಪಾಠ ಮಾಡಿದ್ದೇನೆ. ನನ್ನೊಂದಿಗೆ ಪ್ರದ್ಯುಮ್ನ ಆಚಾರ್ಯ, ಶೇಷಗಿರಿ ಆಚಾರ್ಯರೂ ಸೇರಿ ಅನೇಕ ಪ್ರಾಧ್ಯಾಪಕರು ಮಕ್ಕಳಿಗೆ ಬೋಧನೆ ಮಾಡಿದ್ದಾರೆ. ಎಲ್ಲರ ಸಹಕಾರದಿಂದ ವಿದ್ಯಾಪೀಠ ಬೆಳೆಯುತ್ತಿದೆ. ಸುಧಾ ಪರೀಕ್ಷೆ ಮುಗಿದಿದೆ. ಇನ್ನು ಮುಂದೆ ಓದುವುದು ಏನೂ ಇಲ್ಲ ಎಂಬ ಭಾವ ಮಕ್ಕಳಲ್ಲಿ ಬರಬಾರದು. ವಿದಿತ ವೇದ್ಯರು– ಆಗುವುದು ಬೇಡ. ಅವರಲ್ಲಿ ನಿತ್ಯವೂ ಸುಧಾ ಗ್ರಂಥದ ಮೇಲಿನ ಚಿಂತನೆಗಳು ಹೊಸ ರೂಪ ಪಡೆಯಬೇಕು ಎಂದು ಸೋಸಲೆ ಶ್ರೀಗಳು ಸಲಹೆ ನೀಡಿದರು. ಮಂತ್ರಾಲಯ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿ, ನಾಡಿನ ವಿವಿಧ ಮಠ– ಪೀಠಗಳಲ್ಲಿ ಜಯತೀರ್ಥರು ರಚಿಸಿದ ಶ್ರೀಮನ್ ನ್ಯಾಯಸುಧಾ ಗ್ರಂಥದ ಮಂಗಳ ಮಹೋತ್ಸವ ಆಗಾಗ್ಗೆ ನಡೆಯುತ್ತದೆ. ಆದರೆ ಶ್ರೀ ವ್ಯಾಸತೀರ್ಥ ವಿದ್ಯಾಪೀಠದಲ್ಲಿ ಶ್ರೀ ವ್ಯಾಸರಾಜ ಯತಿಗಳ ವ್ಯಾಸತ್ರಯ ಗ್ರಂಥಗಳ ಸಹಿತ ಸುಧಾ ಮಂಗಳ ನಡೆಯುವುದು ಬಹಳ ವಿಶೇಷ ಎಂದರು. 4 ವಿದ್ಯಾರ್ಥಿಗಳೂ ಉತ್ತಮವಾಗಿ ಗ್ರಂಥಗಳ ಅನುವಾದ, ವ್ಯಾಖ್ಯಾನ ಮಾಡಿದ್ದಾರೆ. ವಿದ್ವಾಂಸರು ಎಲ್ಲಲ್ಲಿ ಕ್ರಾಸ್ ಮಾಡಿ ಪ್ರಶ್ನೆ ಕೇಳಿದರೂ ವಿಚಲಿತರಾಗದೇ ಸಮರ್ಥ ಉತ್ತರ ನೀಡಿದ್ದಾರೆ. ಈ ವಿದ್ಯಾಪೀಠದ ಮಕ್ಕಳ ಜ್ಞಾನಧಾರೆ ಹೀಗೆಯೇ ಗಂಗೆಯಂತೆ ಹರಿಯಲಿ. ಶ್ರೀ ವ್ಯಾಸರಾಜರು ವಿಜಯನಗರ ಸಾಮ್ರಾಜ್ಯವನ್ನೂ ಆಳ್ವಿಕೆ ಮಾಡಿ ಶಾಸ್ತ್ರಪಾಠಗಳನ್ನೂ ಮಾಡುತ್ತಿದ್ದ ಸಂದರ್ಭ 24 ಜನ ಕೇಶವಾದಿ ಯತಿಗಳು, ವಿವಿಧ ಗೃಹಸ್ಥ ಪಂಡಿತರು, ಬಂಗಾಲ ಮೊದಲಾದ ಪ್ರಾಂತ್ಯಗಳಲ್ಲಿ ವರವಾಲಿನೀಶ್ವರ ಮುಂತಾದ ವಿದ್ವಾಂಸರು ಬೆಳೆದರು. ಅಂಥಾ ಕಾಲ ಮತ್ತೆ ಸೋಸಲೆ ವ್ಯಾಸರಾಜರ ಈ ಮಠಕ್ಕೆ ಬರಲಿ ಎಂದು ಅವರು ಆಶಿಸಿದರು.

ನನಗೂ ಅಧ್ಯಯನದ ಆಸೆ ಚಿಗುರಿದೆ : ಶಿವಮೊಗ್ಗ ಜಿಲ್ಲೆ ಬಾಳಗಾರು ಮಠದ ಶ್ರೀ ಅಕ್ಷೋಭ್ಯ ರಾಮಪ್ರಿಯ ತೀರ್ಥ ಸ್ವಾಮೀಜಿ ಮಾತನಾಡಿ, ಪಂಡಿತರು ಏನು ಪ್ರಶ್ನೆ ಕೇಳಿದರೂ ಈ ವಿದ್ಯಾರ್ಥಿಗಳು ಉತ್ತರ ನೀಡುತ್ತ ಇದ್ದಾರೆ. ಸುಘೋಷ, ಪ್ರಣವ, ಆಯಾಚಿತ ಶ್ರೀಶ ಮತ್ತು ಸೌಮಿತ್ರಿ ಅವರ ಪ್ರತಿಭೆಗೆ ವಿದ್ವಜ್ಜನರು ಸೈ ಎಂದಿದ್ದಾರೆ. ಇವರನ್ನು ನೋಡಿದರೆ ನನಗೆ ಇನ್ನಷ್ಟು ಅಧ್ಯಯನ ಮಾಡುವ ಆಸೆ ಚಿಗುರಿದೆ ಎಂದು ಹೇಳಿದರು. ವಿದ್ಯಾರ್ಥಿಗಳ ಆತ್ಮವಿಶ್ವಾಸ, ಟಿಪ್ಪಣಿ ಸಹಿತ ಅವಲೋಕನ, ವಿನಯ, ಧೀರೋದ್ಧಾತ ಶೈಲಿ, ಪ್ರಾಮಾಣಿಕತೆ, ವಿದ್ಯಾಗಾಂಭೀರ್ಯಕ್ಕೆ ನಾವು ಮೆಚ್ಚಿದ್ದೇವೆ ಎಂದರು. ಸೋಸಲೆ ಶ್ರೀಗಳು ತಮ್ಮ ದೀಕ್ಷೆ, ಮಠಾಧಿಕಾರ, ಸಂಚಾರ, ಪ್ರವಚನದ ಜತೆಗೆ ಈ ಮಕ್ಕಳಿಗೆ ಪಾಠ ಮಾಡುವ ವ್ರತವನ್ನೂ ಅನುಸರಿಸಿ ದಿಗ್ವಿಜಯ ಸಾಧಿಸಿದ್ದಾರೆ. ಇದು ಫಲ ಹೊತ್ತ ವಿದ್ಯಾಪೀಠವಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ವಾಂಸರ ಉಪಸ್ಥಿತಿ: ಮಂತ್ರಾಲಯದ ಹಿರಿಯ ವಿದ್ವಾಂಸ ರಾಜಾ ಎಸ್. ಗಿರಿ ಆಚಾರ್ಯ, ಹಿರಿಯ ಪಂಡಿತರಾದ ವಾದಿರಾಜ ಆಚಾರ್ಯ, ವಿದ್ವಾಂಸ ಶೇಷಗಿರಿ ಆಚಾರ್ಯ, ನಾಗಸಂಪಿಗೆ ಆಚಾರ್ಯ, ಶ್ರೀನಿವಾಸಮೂರ್ತಿ ಆಚಾರ್ಯ, ಮಾತರಿಶ್ವಾಚಾರ್ಯ, ವ್ಯಾಸತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಶ್ರೀನಿಧಿ ಆಚಾರ್ಯ ಪ್ಯಾಟಿ, ವ್ಯಾಸತೀರ್ಥ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಾ.ಡಿ.ಪಿ. ಮಧುಸೂದನಾಚಾರ್ಯ ಇದ್ದರು. ಸಂಜೆ ವಿದ್ವಾನ್ ಸಮೀರಾಚಾರ್ಯರ ದಾಸವಾಣಿ ಸಂಗೀತ ಕಛೇರಿ ನೆರೆದವರ ರಂಜಿಸಿತು.

ಬೆಂಗಳೂರಿನಲ್ಲಿ 133 ವರ್ಷಗಳ ದಾಖಲೆ ಮುರಿದ ಮಳೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ 111 ಮಿಮೀ ಮಳೆಯಾಗಿದ್ದು, ಜೂನ್‌ನಲ್ಲಿ ಒಂದೇ ದಿನದಲ್ಲಿ ಸುರಿದ ಈ ಮಳೆ 133 ವರ್ಷಗಳ ದಾಖಲೆಯನ್ನು ಮುರಿದಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಜೂನ್ 2 ರಂದು ಕಳೆದ 133 ವರ್ಷಗಳಲ್ಲಿ ಜೂನ್‌ನಲ್ಲಿ ಒಂದೇ ದಿನದಲ್ಲಿ ಸುರಿದ ಅತೀ ಹೆಚ್ಚು ಮಳೆಯಾಗಿದೆ ಎಂದು ಬೆಂಗಳೂರಿನ ಭಾರತೀಯ ಹವಾಮಾನ ಇಲಾಖೆ(IMD)ಯ ವಿಜ್ಞಾನಿ ಎನ್ ಪುವಿಯರಸನ್ ಅವರು ತಿಳಿಸಿದ್ದಾರೆ.

ಜೂನ್ 1 ಮತ್ತು ಜೂನ್ 2 ರಂದು ಎರಡು ದಿನದಲ್ಲಿ 140.7 ಮಿಮೀ ಮಳೆಯಾಗಿದೆ. ಇದು ಜೂನ್ ತಿಂಗಳ ಸರಾಸರಿಯನ್ನು ಮೀರಿಸಿದೆ ಎಂದು ಅವರು ಹೇಳಿದ್ದಾರೆ.

ಭಾನುವಾರ ಸಂಜೆಯಿಂದ ರಾತ್ರಿವರೆಗೂ ಸುರಿದ ಮಳೆಯು, 133 ವರ್ಷಗಳ ಹಿಂದಿನ ದಾಖಲೆಯನ್ನು ಮುರಿದಿದೆ. ಜೂನ್ ತಿಂಗಳಲ್ಲಿ ಒಂದೇ ದಿನದಲ್ಲಿ ಸುರಿದ ಅತ್ಯಧಿಕ ಮಳೆ ಇದಾಗಿದೆ ಎಂದು ಅವರು ತಿಳಿಸಿದ್ದಾರೆ. 1891, ಜೂನ್ 16 ರಂದು ಒಂದೇ ದಿನದಲ್ಲಿ ಅತಿ ಹೆಚ್ಚು ಮಳೆ ದಾಖಲಾಗಿದೆ ಎಂದು ಅವರು ಹೇಳಿದ್ದಾರೆ.





ಗುರುಕುಲ ಅಕಾಡೆಮಿ ಶಾಲೆಯ ಮಾನ್ಯತೆ ರದ್ದು

ಮೈಸೂರು, ಜೂ.3– 2024–25ನೇ ಸಾಲಿನಿಂದ ಮೈಸೂರು ತಾಲ್ಲೂಕಿನ ಕೊಪ್ಪಲೂರಿನ ಗುರುಕುಲ ಅಕಾಡೆಮಿ ಶಾಲೆಯ ಮಾನ್ಯತೆಯನ್ನು ಹಿಂಪಡೆಯಲಾಗಿದ್ದು, ಶಾಲೆಗೆ ಸಾರ್ವಜನಿಕರು ಪೋಷಕರು ಮಕ್ಕಳನ್ನು ದಾಖಲು ಮಾಡಬಾರದು ಹಾಗೂ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಹತ್ತಿರದ ಅಧಿಕೃತ ಶಾಲೆಗಳಲ್ಲಿ ದಾಖಲಾತಿ ಮಾಡಬೇಕು ಎಂದು ತಾಲೂಕು ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಡಿಶಾದಲ್ಲಿ ಹೀಟ್‌ಸ್ಟ್ರೋಕ್‌ನಿಂದ 45 ಮಂದಿ ಸಾವು

ಭುವನೇಶ್ವರ: ಒಡಿಶಾದಲ್ಲಿ ಬಿಸಿಗಾಳಿಯ ಆರ್ಭಟ ಹೆಚ್ಚಾಗಿದ್ದು, ಕಳೆದ 24 ಗಂಟೆಗಳಲ್ಲಿ 45 ಮಂದಿ ಹೀಟ್ ಸ್ಟ್ರೋಕ್‌ನಿಂದ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಇದರೊಂದಿಗೆ ರಾಜ್ಯದಲ್ಲಿ ಬಿಸಿಲಿನ ತಾಪಕ್ಕೆ ಬಲಿಯಾದವರ ಸಂಖ್ಯೆ 141ಕ್ಕೆ ಏರಿಕೆಯಾಗಿದೆ.

ವಿಶೇಷ ಪರಿಹಾರ ಆಯುಕ್ತರ(ಎಸ್‌ಆರ್‌ಸಿ) ಕಚೇರಿಯ ಪ್ರಕಾರ, ಕಳೆದ 72 ಗಂಟೆಗಳಲ್ಲಿ ರಾಜ್ಯದಲ್ಲಿ ಒಟ್ಟು 99 ಸಾವುಗಳು ವರದಿಯಾಗಿವೆ. ಕಳೆದ ಮೂರು ದಿನಗಳಲ್ಲಿ ಸಂಭವಿಸಿದ ಸಾವುಗಳಲ್ಲಿ 20 ಮಂದಿಯ ಮರಣೋತ್ತರ ಪರೀಕ್ಷೆ ಮತ್ತು ಜಂಟಿ ತನಿಖಾ ವರದಿಗಳ ಆಧಾರದ ಮೇಲೆ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಾವುಗಳನ್ನು ಖಚಿತಪಡಿಸಿದ್ದಾರೆ. ಎರಡು ಪ್ರಕರಣಗಳಲ್ಲಿ ಸನ್ ಸ್ಟ್ರೋಕ್‌ನಿಂದ ಮೃತಪಟ್ಟಿಲ್ಲ ಎಂದು ಹೇಳಿದ್ದಾರೆ.

ಈ ಬೇಸಿಗೆಯಲ್ಲಿ, ವಿವಿಧ ಜಿಲ್ಲೆಗಳಲ್ಲಿ 141 ಸನ್‌ಸ್ಟ್ರೋಕ್ ಸಾವುಗಳ ವರದಿಯಾಗಿವೆ. ಇಲ್ಲಿಯವರೆಗೆ 26 ಸಾವುಗಳು ಸನ್‌ಸ್ಟ್ರೋಕ್‌ನಿಂದ ಮತ್ತು ಎಂಟು ಮಂದಿ ಇತರ ಕಾರಣಗಳಿಂದ ಮೃತಪಟ್ಟಿದ್ದಾರೆ ಎಂದು ಖಚಿತಪಡಿಸಲಾಗಿದೆ ಎಂದು ಎಸ್‌ಆರ್‌ಸಿ ಕಚೇರಿ ತಿಳಿಸಿದೆ.

ಜಿಲ್ಲಾ ಮಟ್ಟದಲ್ಲಿ ಸುಮಾರು 107 ಇಂತಹ ಸಾವಿನ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಏತನ್ಮಧ್ಯೆ, ಒಡಿಶಾದಲ್ಲಿ ಇನ್ನೂ ಎರಡು ದಿನಗಳ ಕಾಲ ಬಿಸಿಗಾಳಿ ಮುಂದುವರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಸೋಮವಾರ ಬರ್ಗಢ್, ಬಲಂಗೀರ್, ಕಲಹಂಡಿ, ನುವಾ ಪಾದ ಮತ್ತು ಸೋನೆ ಪುರ್ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಹೀಟ್ ವೇವ್ ಮುಂದುವರೆಯುವ ನಿರೀಕ್ಷೆಯಿದೆ ಎಂದು ಹೇಳಿದೆ.

ಫಲಿತಾಂಶ ಎಕ್ಸಿಟ್ ಪೋಲ್‌ಗಳಿಗೆ ವಿರುದ್ಧವಾಗಿರುತ್ತೆ

ನವದೆಹಲಿ: ಲೋಕಸಭಾ ಚುನಾವಣೆಯ ಫಲಿತಾಂಶ ಎಕ್ಸಿಟ್ ಪೋಲ್‌ಗಳಲ್ಲಿ ತೋರಿಸಿರುವ ಫಲಿತಾಂಶಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿರುತ್ತದೆ ಎಂದು ತುಂಬಾ ತುಂಬಾ ವಿಶ್ವಾಸ ಇದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಸೋಮವಾರ ಹೇಳಿದ್ದಾರೆ.



ಮಂಗಳವಾರ ಪ್ರಕಟವಾಗಲಿರುವ ಫಲಿತಾಂಶದ ಬಗ್ಗೆ, ತಮ್ಮ ನಿರೀಕ್ಷೆಗಳ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸೋನಿಯಾ ಗಾಂಧಿ, ನಾವು ಕಾಯಬೇಕು, ಕಾದು ನೋಡಬೇಕು ಎಂದು ಹೇಳಿದ್ದಾರೆ.

ನಮ್ಮ ಫಲಿತಾಂಶಗಳು ಎಕ್ಸಿಟ್ ಪೋಲ್‌ಗಳು ತೋರಿಸಿರುವುದಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿರುತ್ತದೆ ಎಂಬ ಭರವಸೆ ಇದೆ ಎಂದು ಅವರು ತಿಳಿಸಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ದೊಡ್ಡ ಬಹುಮತ ಗಳಿಸುವುದರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸತತ ಮೂರನೇ ಅವಧಿಗೆ ಅಧಿಕಾರ ಉಳಿಸಿಕೊಳ್ಳಲಿದ್ದಾರೆ ಎಂದು ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಕೆಲವು ಎಕ್ಸಿಟ್ ಪೋಲ್‌ಗಳು ಎನ್‌ಡಿಎಗೆ 400 ಕ್ಕೂ ಹೆಚ್ಚು ಸ್ಥಾನಗಳನ್ನು ನೀಡಿದರೆ, ಇನ್ನು ಕೆಲವು ಚುನಾವಣೋತ್ತರ ಸಮೀಕ್ಷೆಗಳು 350ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಭವಿಷ್ಯ ನುಡಿದಿವೆ. ಕೇಂದ್ರದಲ್ಲಿ ಸರ್ಕಾರ ರಚನೆಗೆ 272 ಸ್ಥಾನಗಳ ಅಗತ್ಯವಿದೆ

ಪುಲ್ವಾಮಾದಲ್ಲಿ ಎನ್‌ಕೌಂಟರ್‌ಗೆ ಇಬ್ಬರು ಉಗ್ರರು ಬಲಿ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರ ಜಿಲ್ಲೆಯ ನಿಹಾಮಾ ಪ್ರದೇಶದಲ್ಲಿ ಭಯೋತ್ಪಾದಕರ ಉಪಸ್ಥಿತಿಯ ಬಗ್ಗೆ ನಿರ್ದಿಷ್ಟ ಮಾಹಿತಿ ಪಡೆದ ನಂತರ ಭದ್ರತಾ ಪಡೆಗಳು ಕಾರ್ಡನ್ ಮತ್ತು ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ಭದ್ರತಾ ಪಡೆಗಳ ಮೇಲೆ ಉಗ್ರರು ಗುಂಡು ಹಾರಿಸಿದ ನಂತರ ಶೋಧ ಕಾರ್ಯಾಚರಣೆಯು ಎನ್‌ಕೌಂಟರ್‌ಗೆ ತಿರುಗಿತು. ನಂತರ ಅವರು ಪ್ರತಿಯಾಗಿ ಗುಂಡು ಹಾರಿಸಿದರು ಎಂದು ಅಧಿಕಾರಿ ತಿಳಿಸಿದ್ದಾರೆ. ಗುಂಡಿನ ಚಕಮಕಿಯಲ್ಲಿ ಇಬ್ಬರು ಉಗ್ರರು ಹತರಾಗಿದ್ದಾರೆ ಎಂದು ಕಾಶ್ಮೀರ ಪೊಲೀಸ್ ಮಹಾನಿರೀಕ್ಷಕ ವಿ ಕೆ ಬಿರ್ಧಿ ಅವರು ಪಿಟಿಐಗೆ ತಿಳಿಸಿದ್ದಾರೆ.

IN THE COURT OF ADDL. CIVIL JUDGE AT VIRAJPET

OS No. : 3/2024

Plaintiff: 1) K. B. Prathap aged 63 years, S/o Late Boregowda.

2) K. M. Gayathri Prathap aged 62 years W/o K. B. Prathap both Appaiahswamy Road, Virajpet Town, Kodagu District.

-Vs-

Defendants: 1) D.B. Devaki Bai, W/o Late Basavaraju aged 76 years.

2) D.B. Chandrashekar, S/o late Basavaraju aged 55 years.

3) D.C. Usha, W/o D. B. Chandrashekar aged 53 years.

4) D.C. Shreyas, S/o D. B. Chandrashekar aged 29 years.

5) D.C. Tejaswini D/o D. B. Chandrashekar aged 25 years.

6) Jayalaxmi, D/o late Basavaraju, W/o Jagadish aged 53 years.

7) K.J. Pramod, S/o Jagadish aged 29 years.

8) K.J. Akshay, S/o Jagadeesh aged 27 years.

9) D.B. Krupashankar, S/o late D. Basavaraju aged 49 years.

10) D.K. Shantala, aged 42 years W/o D. B. Krupashankar.

11) D.K. Hemanth Kumar, S/o D.B. Krupashankar aged 18 years, all Block No. 1 Virajpet Town, Kodagu District.

NOTICE TO THE DEFENDANTS

The Defendants are hereby notified that the Plainitff has filed the above Suit for the relief of Madatory Injunction. The case is posted to 15-7-2024 appearance of above Defendants.

Hence Defendants are hereby notified to appear before this Hon'ble Court either personally or through Advocate on 15-7-2024 at 11 am failing which the case will proceed placing you exparte.

By order of the court
Sd/- Chief Ministerial Officer
Civil Judge and JMFC Court, Virajpet.

Advocate for plaintiff
Sd/- S.N. Suma
Virajpet, Date 3-6-2024

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು